*Text Fly*

UNIVERSAL
LIBRARY
OU_198127
UNIVERSAL
LIBRARY

# ಸುಟ್ಟ ಸುಡುಗಾಡು ಬೊಂಬಾಯಿ ಊರು

**ಕನ್ನಡ ಒಂದೇ ಒಂದು ಶಬ್ದ ಕೇಳೋಕಿಲ್ಲ**

**ಒಂದು ಪುಸ್ತಕ ನೋಡೋಕಿಲ್ಲ**

ಎನ್ನುವಿರಾ?

**ಇಷ್ಟು ಅಧೀರರಾಗದಿರಿ**

ಈ ಕಡೆ ಬನ್ನಿ

## ದಿ ಕೆನರಾ ಬುಕ್ಸ್ ಎಂಡ್ ನ್ಯೂಸ್ ಏಜನ್ಸಿ

**ಲಾಲ್‌ಬಾಗ್, ಮುಂಬಯಿ-೧೨**

(ಸ್ಥಾಪನೆ: ೧೯೩೩)

ವಿವಿಧ ಕನ್ನಡ ಪುಸ್ತಕಗಳ ಬೀಡು

ಕರ್ನಾಟಕದ ವರ್ತಮಾನವನ್ನು ನಮ್ಮ ವಾರಪತ್ರಿಕೆ ಹಾಗೂ
ಮಾಸ ಪತ್ರಿಕೆಗಳಲ್ಲಿ ಓದಿರಿ

**ಶಾಲಾ ಪುಸ್ತಕಗಳನ್ನೂ ನಮ್ಮಿಂದಲೇ**
**ಪಡಕೊಳ್ಳಿರಿ**

# ಮೃಗಜಲ

ಅನುಕ್ರಮಣಿಕೆ :

| | | |
|---|---|---|
| ಮೃಗಜಲ | ... | ಪುಟ ೧ |
| ಸಮಾಧಿ ಸ್ತಂಭ | ... | ೫ |
| ಬಲಿದಾನ | ... | ೧೩ |
| ನಂಜುಂಡ | ... | ೨೦ |
| ಪುಟ್ಟು | ... | ೩೪ |
| ಬೂದಗಳವು | ... | ೪೭ |
| ಸೂರ್ಯಗ್ರಹಣ | ... | ೫೬ |

ಲೇಖಕರು :
ಟಿ. ಆರ್. ಭಾಗವತ

ಬೆಲೆ ೧೨ ಆಣೆ

ಪ್ರಥಮ ಮುದ್ರಣ ಜೂನ್ ೧೯೪೬

CHECKED. 1951

CHECRED 1956

## ಲೇಖಕರ ಪರಿಚಯ

Checked 1965

ಶ್ರೀ। ಟಿ. ಆರ್. ಭಾಗವತರು ಉತ್ತರ ಕನ್ನಡ ಜಿಲ್ಲೆಯವರು. ಆದರೆ ಇವರ ಇಡೀ ಶಿಕ್ಷಣ ಕರ್ನಾಟಕದ ವಿವಿಧ ಭಾಗಗಳಲ್ಲಿ ಆಗಿದೆ. ಇವರು ಕರ್ನಾಟಕ ಕಾಲೇಜಿನ ವಿದ್ಯಾರ್ಥಿಗಳಾಗಿರುವಾಗ್ಗೆ ತಮ್ಮ ಬುದ್ಧಿಚತುರತೆಯಿಂದಲೂ, ಕಾಲೇಜಿನ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುವದರಿಂದಲೂ ಪ್ರೊಫೆಸರರ ಮತ್ತು ವಿದ್ಯಾರ್ಥಿಗಳ ಆದರಕ್ಕೆ ಪಾತ್ರರಾದರು. ಇವರ ಕತೆಗಳೆಲ್ಲ ಇದೆ ಅವಧಿಯಲ್ಲೇ ಬರೆಯಲ್ಪಟ್ಟವು. ಎಮ್. ಎ. ಪದವಿಯನ್ನು ಸಂಪಾದಿಸಿದ ನಂತರ ಇವರು ಮುಂಬಯಿ ಸೆಕ್ರೆಟರಿಯೇಟದಲ್ಲಿ ಲೇಬರ ಆಫೀಸಿನ ಸೂಪರಿಂಟೆಂಡೆಂಟರಾಗಿದ್ದಾರೆ. ಇವರ ಲೇಖನಗಳು ಆಗಾಗ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಇವರ ಹಲವಾರು ಲೇಖನಗಳು ಈ ಮೊದಲೇ ಸಾಕಷ್ಟು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಪ್ರಕಾಶಕರು

Checked 1969

ಮುದ್ರಕರು—
ಜೆ. ಸಿ. ಅಮೀನ್,
ನೇಶನಲ್ ಪ್ರಿಂಟರ್ಸ್
ಎಂಡ್ ಎಡ್ವರ್ಟೈಸರ್ಸ್
ಕೋಟೆ, ಮುಂಬಯಿ

ಪ್ರಕಾಶಕರು—
ವಿ. ಆರ್. ಪ್ರಭು,
ದಿ ಕೆನರಾ ಬುಕ್ಸ್ ಎಂಡ್
ನ್ಯೂಸ್ ಏಜನ್ಸಿ,
ಲಾಲಬಾಗ, ಮುಂಬಯಿ ೧೨

# ನನ್ನ ಮಾತು

ಇದು ನನ್ನ ಪ್ರಥಮ ಪ್ರಕಟನೆಯಲ್ಲವಾದರೂ ಪ್ರಥಮ ಕಲಾ ಸಂಗ್ರಹ. ಈ ಸಂಗ್ರಹದಲ್ಲಿ ಪ್ರಕಟವಾದ ಕತೆಗಳಲ್ಲಿ 'ಮೃಗಜಲ' 'ಬಲಿದಾನ' 'ಸೂರ್ಯಗ್ರಹಣ' ಇವು ಕರ್ನಾಟಕ ಕಾಲೇಜಿನ ಮಿಸ್ಲೇನಿನಲ್ಲೂ 'ಬೂದಗಳವು' ಕಾರವಾರ ಜಿಲ್ಲೆಯಲ್ಲಿ ಪ್ರಕಟವಾಗುತ್ತಿದ್ದ ನವಚೇತನ ವೆಂಬ ಮಾಸ ಪತ್ರಿಕೆಯಲ್ಲೂ ಈ ಮೊದಲೇ ಪ್ರಕಟವಾಗಿವೆ. ಉಳಿದವುಗಳು ಇದೇ ಮೊದಲನೇ ಬಾರಿ ಬೆಳಕನ್ನು ಕಂಡಿವೆ.

ನಾನು ಕತೆಯನ್ನು ಬರೆಯಲು ಸುರುಮಾಡಿದ್ದು ಕಾಲೇಜಿನಲ್ಲಿದ್ದಾಗ್ಗೆ. ಕಾಲೇಜು ಬಿಟ್ಟಮೇಲೆ ಇದು ಮುಕ್ತಾಯವಾಗಿದೆಯೆಂದರೂ ಸಲ್ಲುವದು. ಮುಂಬಯಿಯಲ್ಲಿಯ ಈ ಯಾತ್ರಿಕ ಜೀವನದಲ್ಲಿ ಸಾಹಿತ್ಯಸೇವೆ ಮಾಡುವದೊತ್ತಟ್ಟಿಗಿರಲಿ, ಹೊಸತಾಗಿ ಪ್ರಕಟವಾಗುತ್ತಿರುವ ಕನ್ನಡ ಪುಸ್ತಕಗಳನ್ನು ಓದುವುದಕ್ಕೂ ವೇಳೆ ಸಿಗುವದು ದುರ್ಲಭವಾಗಿದೆ ಅಂತೂ ಕಾಲೇಜು ಬಿಡುವ ಹೊತ್ತಿಗೆ ನನ್ನ ಹತ್ತಿರ ನನ್ನ ಹದಿನೈದು ಕತೆಗಳು ಒಟ್ಟಾಗಿದ್ದವು. ಈ ಕತೆಗಳನ್ನೆಲ್ಲ ಓದಿದ ಕೆಲವು ಮಹನೀಯರು ಇವನ್ನು ಒಂದು ಉತ್ತಮ ಕಲಾಸಂಗ್ರಹ ರೂಪದಲ್ಲಿ ಪ್ರಕಟಿಸಬಹುದೆಂದು ಪ್ರೋತ್ಸಾಹವಿತ್ತರು. ಆದರೆ ಅದೇ ಸಮಯಕ್ಕೆ ಸರಿಯಾಗಿ ಮಹಾಯುದ್ಧವು ಸುರುವಾದುದರಿಂದ ಈ ಪ್ರೋತ್ಸಾಹವು ಹಾಗೆಯೇ ಉಳಿಯಿತು. ಪುಸ್ತಕ ಅಚ್ಚು ಹಾಕಲು ತೆಗೆದುಕೊಂಡವರನೇಕರಿಗೆ ಕನ್ನಡದಲ್ಲಿ ಪುಸ್ತಕ ಮುದ್ರಿಸಿ ಪ್ರಕಟಿಸುವದಕ್ಕಿಂತಲೂ ನಿಯಂತ್ರಣದಲ್ಲಿ ಸಿಕ್ಕ ಕಾಗದವನ್ನು ಕಳ್ಳ ಪೇಟೆಯಲ್ಲಿ ಮಾರಿದರೇನೇ ಹೆಚ್ಚು ಲಾಭ ಸಿಕ್ಕುವದೆಂದು ಅನಿಸಿದ್ದರಿಂದ ಪುಸ್ತಕದ ಪ್ರಕಟನೆಯ ಆಶೆಯೇ ಇಲವಾಯಿತು. ಇದು ನನ್ನೊಬ್ಬನ ದೂರಲ್ಲ. ಹೆಸರಾಂತ ಸಾಹಿತಿಗಳಲ್ಲೂ ಕೂಡ ಮೂರು ನಾಲ್ಕು ಕೈಬರಹದ ಪ್ರತಿಗಳು ಪ್ರಕಾಶಕರಿಲ್ಲದೆ ಹಾಗೇ ಬಿದ್ದದ್ದನ್ನು ನಾನು ನೋಡಿದ್ದೇನೆ. ಈಗಲೂ ಪರಿಸ್ಥಿತಿ ಸುಧಾರಿಸಿಲ್ಲ. ಆದರೂ ಶ್ರೀ। ವಿ.ಆರ್. ಪ್ರಭು ಅವರು ನನ್ನ ಸಂಗ್ರಹವನ್ನು ಪ್ರಕಟಿಸುವ ಭಾರ ಹೊತ್ತಿದ್ದಾರೆ. ಇದಕ್ಕಾಗಿ ನಾನು ತುಂಬಾ ಉಪಕೃತ. ಪ್ರಕಾಶ

ಕರಿಗೆ ಸಾಕಷ್ಟು ಕಾಗದ ಸಿಗುತ್ತಿಲ್ಲವಾದ್ದರಿಂದ ನನ್ನ ಸಂಗ್ರಹದಲ್ಲಿ ಇಬ್ಭಾಗ ಮಾಡಿ ಒಂದು ಭಾಗವನ್ನು ಪ್ರಕಟಿಸಲಾಗಿದೆ. ಇನ್ನೊಂದು ಭಾಗ ಸದ್ಯದಲ್ಲೇ ಪ್ರಕಟವಾಗಲಿದೆ.

ನನ್ನ ಕತೆಗಳ ವಿಷಯ ನಾನು ಬರೆಯುವದಕ್ಕಿಂತ ಓದುಗರೇ ಅದನ್ನು ವಿಮರ್ಶೆಮಾಡುವುದು ಸೂಕ್ತ. 'ಕತೆಗಳು ಬಹಳೇ ಚೆನ್ನಾಗಿವೆ. ವಿಷಾದಾಂತ ಕತೆಗಳನ್ನು ಬರೆಯುವ ಶೈಲಿಯಂತೂ ನಿಮಗೆ ಒಗ್ಗಿಬಿಟ್ಟಿದೆ' ಎಂದು ಹೊಗಳಿದವರು ಅನೇಕರಿದ್ದಾರೆ. ಇಂಥವರ ಹೊಗಳಿಕೆಯೇ ನನ್ನ ಕತೆ ಬರೆಯುವ ಹವ್ಯಾಸಕ್ಕೆ ಚೇತನವನ್ನು ಕೊಟ್ಟು ನನ್ನಿಂದ ಇಷ್ಟಾದರೂ ಸಾಹಿತ್ಯಸೇವೆಯಾಗುವಂತೆ ಮಾಡಿದೆ. ಇನ್ನು 'ನಿಮ್ಮ ಚಲನಚಿತ್ರಗಳು ಸ್ಟಂಟು ಚಲನಚಿತ್ರಗಳನ್ನು ಹೋಲುತ್ತವೆ' ಎಂದು ಮೂದಲಿಸಿದ ಮಹನೀಯರೂ ಇದ್ದಾರೆ. ಇಂಥವರ ಹೊಗಳಿಕೆಯು ಕೆಲವೊಂದು ವೇಳೆ ನನ್ನ ಉತ್ಸಾಹಕ್ಕೆ ತಣ್ಣೀರೆರಚಿದ್ದುಂಟು. ಆದರೆ ಹೊಗಳಿಕೆ-ತೆಗಳಿಕೆಗಳ ಕಡೆ ಲಕ್ಷ್ಯವೀಯದೆ ನಿಸ್ಪೃಹತೆಯಿಂದ ಸಾಹಿತ್ಯಸೇವೆಯನ್ನು ಮಾಡುವವನೇ ನಿಜವಾದ ಸಾಹಿತಿ. ಹಾಗಿರಲು ನಾನೂ ಪ್ರಯತ್ನಪಟ್ಟಿದ್ದೇನೆ. ಆದರೂ ಒಮ್ಮೊಮ್ಮೆ ಈ ಕತೆಗಳನ್ನು ಓದಿದವರು 'ಏನೋ ಪರವಾಯಿಲ್ಲ' ಎಂದು ಅಂದುಕೊಂಡರೆ, ಹಣ ಕೊಟ್ಟಿದ್ದಕ್ಕಾಗಿ ಪರಿತಪಿಸದಿದ್ದರೆ ನಾನು ಇವುಗಳನ್ನು ಪ್ರಕಟಿಸಿದ್ದು ಸಾರ್ಥಕವಾದೀತೆಂಬ ವಿಚಾರವೊಂದು ಮನಸ್ಸಿನಲ್ಲಿ ಬರದೇ ಇಲ್ಲ.

ಮುಂಬಯಿ,
ಜೂನ್ ೧, ೧೯೪೬

**ಟಿ. ಆರ್. ಬಾಗವತ.**

# ಮೃಗಜಲ

"...ಅಗಣಿತ ಮಹಿಮನ ಆಡಿಸಿದಳೆಶೋದಾ! ಜಗದೋದ್ಧಾರನ...ಆಡಿಸಿ" ಲೀಲುವಿನ ಹಾಡು ಅಷ್ಟಕ್ಕೇ ಮುಕ್ತಾಯವಾಯಿತು. ಕಾಲೇಜಿಗೆ ಹೋಗಬೇಕೆಂದು ಹೊರಟ ಅವಳಿಗೆ ಮನೆಯ ಮುಂದಿನ ಕೋಣೆಯಲ್ಲಿ ಅಪರಿಚಿತ ಯುವಕನೊಬ್ಬನು ಬಂದು ಕುಳಿತ ಸಂಗತಿ ಹೇಗೆತಾನೆ ಗೊತ್ತಾಗಿರಬೇಕು. 'ಅಯ್ಯೋ, ನನ್ನ ರಾಗಾ ಕೇಳಿಬಿಟ್ಟರೋ ಏನೋ' ಎಂದು ಚಿಂತಿಸುತ್ತ ನಾಚಿಕೆಯಿಂದ ಓಡಿದವಳು ಕಾಲೇಜಿಗೆ ಒಂದು ಮುಟ್ಟುವತನಕ ಅತ್ತಿತ್ತ ನೋಡಲಿಲ್ಲ.

ಇಡಿಯ ದಿನವೆಲ್ಲ ಆ ಯುವಕನೇ ಅವಳ ಮನಸ್ಸನ್ನು ಆವರಿಸಿದ್ದ. ಒಳ್ಳೆ ಸ್ಫುರದ್ರೂಪಿ. ಸುಮಾರು ಇಪ್ಪತ್ತೈದು ವರುಷವಾಗಿರಬಹುದು. ತಲೆ ಕೂದಲನ್ನು ನಯವಾಗಿ ಬಾಚಿಕೊಂಡಿದ್ದ. ಓರಣವಾದ ತೊಡಿಗೆ. ಎಲ್ಲಿಯೂ ಕುಂದು ತೆಗೆಯುವಂತಿರಲಿಲ್ಲ. ಲೀಲೆ ಅವನನ್ನು ತನ್ನ ಕಾಲೇಜಿನ ಅದೆಷ್ಟೋ ಹುಡುಗರಿಗೆ ಹೋಲಿಸಿನೋಡಿದಳು. 'ಮೊದಲನೇ ನಂಬರಿನವ. ಅವನಂತೂ ಕೆಳಗೆ ಮಾಡಿದ ಮೋರೆ ಮೇಲಕ್ಕೆತ್ತೋದೆ ಇಲ್ಲ. ಊಹುಂ...ಅವ ನಾಲಾಯಿಕ. ಓಹೋ ಈ ಸುರೇಶ ಹೇಗೆ? ಕಾಲೇಜು ಚಾಂಪಿಯನ್. ಆದರೆ.. ತಲೇಲಿ ಮಿದುಳೇ ಇಲ್ಲ. ಕಾಲೇಜು ಸೇರಿ ಎಂಟ್ಹತ್ತು ವರುಷವಾದರೂ ಅದನ್ನು ಬಿಡುವ ಯೋಚನೆಯೇ ಇಲ್ಲ...ಅಲ್ಲ. ಅವರಾರೂ ಆ ಯುವಕನನ್ನು ಸರಿಗಟ್ಟೋದಿಲ್ಲ...ಅವ ನೋಡಲಿಕ್ಕೆ ಜಾಣನೂ ಕಾಣ್ತಾನೆ...ಸಶಕ್ತ...' ಅದೆಷ್ಟೋ ವಿಚಾರಗಳು ಲೀಲುವಿನ ಮನಸ್ಸನ್ನು ಕದಡಿಬಿಟ್ಟವು.

ಮರುದಿನ ಕಾಲೇಜಿಗೆ ಹೊರಡುವಾಗ ಅವಳಿಗೆ ಅವನನ್ನು ಪುನಃ ನೋಡುವ ಆಶೆ ಇರಲಿಲ್ಲ. ಆದರೆ ಅವನು ಅದೇ ಸ್ಥಳದಲ್ಲಿ ಕುಳಿತಿದ್ದ. ಪುಣ್ಯಕ್ಕೆ ಅವಳು ಗಾನವನ್ನೇನೂ ಮಾಡುತ್ತಿರಲಿಲ್ಲ. ಆ ಯುವಕನೇನೊ ಅವಳನ್ನು ದಿಟ್ಟಿಸಿ ನೋಡಿದಂತಾಯಿತು. ಸರಿ, ಆಹೊತ್ತೂ ಆವಳ ಮನಸ್ಸಿನ ಹತೋಟಿ ತಪ್ಪಿಬಿಟ್ಟಿತು. 'ಅವನೇಕೆ ಪುನಃ ಬಂದಿದ್ದ.. ಅಲ್ಲ, ನಿನ್ನೆ ಸುಮ್ಮನೆ ಬಂದಿದ್ದನೇನೋ ಅಂದುಕೊಂಡೆ...ಈ ಹೊತ್ತು ನನ್ನನ್ನೇಕೆ ನಟ್ಟ ದೃಷ್ಟಿಯಿಂದ ನೋಡಿದ...? ನಾಳೆ ಧೈರ್ಯಮಾಡಿ ಅವನನ್ನು ಮಾತಾಡಿಸಬೇಕು..' ಎಂದು ನಿಶ್ಚಯಿಸಿದಳು.

ಮಾರನೆಯ ದಿನ ಹತ್ತು ಗಂಟೆಯವರೆಗೂ ಲೀಲೆ ಕನ್ನಡಿಯ ಮುಂದೆಯೇ ಕುಳಿತಿದ್ದಳು. ಮೋರೆಗೆ ಅದೆಷ್ಟೋ ಪೌಡರು ಹಚ್ಚಿಕೊಂಡಳು. ಇನ್ನೂ ಏನೇನೋ ಸಿಂಗಾರ ಮಾಡಿಕೊಂಡಳು. ಅವಳ ತಾಯಿಗೆ ಕೌತುಕವೆನಿಸಿತು. 'ಇನ್ನೂ ನಿನಗೆ ಹದಿನಾರೇ ವರುಷ ಕಣೆ ಲೀಲು. ಇಷ್ಟು ಬೇಗ ಲಗ್ನ ಮಾಡೋದಿಲ್ಲ.' ಎಂದು ತಾಯಿ ಚೇಷ್ಟೆ ಮಾಡಿದಳು. ಲೀಲುವಿನ ಮುಖ ಆರಕ್ತವಾಯಿತು. ಊಟ ಮುಗಿಸಿದವಳು. ಪುಸ್ತಕವನ್ನು ತೆಗೆದುಕೊಂಡು ಮತ್ತೊಮ್ಮೆ ಕನ್ನಡಿಯಲ್ಲಿ ಪ್ರತಿಬಿಂಬವನ್ನು ನಿರೀಕ್ಷಿಸಿ, ಸಾವಕಾಶ ಹೊರಗೆ ಬಂದಳು. ಎದೆಯು ಜೋರಿನಿಂದ ಹಾರುತ್ತಿತ್ತು. ಸಾವಕಾಶ ಗೋಣು ತಿರುಗಿಸಿ ಕೋಣೆಯ ಕಡೆಗೆ ನೋಡಿದಳು. ಅವನು ಅದೇ ಕುರ್ಚಿಯ ಮೇಲೆ ಕುಳಿತಿದ್ದನು. ಅಕಸ್ಮಾತ್ತಾಗಿ ಅವನನ್ನು ನೋಡಿದವಳಂತೆ ನಟಿಸುತ್ತ "ಓಹೋ, ಏನು ಕೆಲಸವಿತ್ತು? ಎಂದು ಕೇಳಿದಳು. ಕಾಲೇಜಿನ ವಾದವಿವಾದದಲ್ಲಿ ಮೊದಲನೆಯ ಸಲ ಭಾಗ ತೆಗೆದುಕೊಂಡಾಗಲೂ ಅವಳ ಧ್ವನಿ ಅಷ್ಟು ನಡುಗಿರಲಿಲ್ಲ.

"ಇಲ್ಲ. ನಿಮ್ಮ ತಂದೆಯವರಿಗೆ ಭೆಟ್ಟಿಯಾಗುವದಿತ್ತು" ಎಂದು ಯುವಕನು ನುಡಿದ. ಅವನ ಧ್ವನಿ ಕಿವಿಗೆ ಇಂಪಾಗಿತ್ತು.

"ಅವರು ಅಟ್ಟದ ಮೇಲೆಯೇ ಇದ್ದಾರಲ್ಲ!" ಎಂದವಳೇ ಲೀಲೆ ಹೊರಗೆ ಓಡಿದಳು.

ಆ ದಿನವೆಲ್ಲ ಅವಳು ತನ್ನನ್ನು ಶಪಿಸಿಕೊಂಡಿದ್ದೇ. ತಾನು ಅದೇಕೆ ಪುಕ್ಕಳಂತೆ ಆಚರಿಸಿದೆಳೆಂಬುದು ಅವಳಿಗೇ ಗೊತ್ತಾಗಲಿಲ್ಲ. "ಅಲ್ಲs ಅವನು ನನ್ನನ್ನು ನೋಡಿ ಮನಸ್ಸಿನಲ್ಲಿ ನಕ್ಕಿರಬಹುದು. ನನ್ನ ಗಂಟಲಿಗೇನು ಧಾಡಿಯಾಗಿತ್ತೊ. ಧ್ವನೀನೆ ಹೊರಡಲಿಲ್ಲ. ನಾಳೆ ಖಡಾಖಡಿಯಾಗಿ ನಿಂತು ಅವನ ಕೆಲಸವೇನೆಂಬುದನ್ನು ಕೇಳಿಯೇ ಬಿಡುತ್ತೇನೆ" ಎಂದು ಧೃಢನಿಶ್ಚಯ ಮಾಡಿದಳು.

ಆದರೆ ಮರುದಿನ ಹತ್ತು ಗಂಟೆಯ ಹೊತ್ತಿಗೆ ಅವಳ ಧೈರ್ಯವೆಲ್ಲ ಉಡುಗಿ ಹೋಗಿತ್ತು. ಅದೆಷ್ಟೋ ಪ್ರಯತ್ನಪಟ್ಟು ತನ್ನ ಕೋಣೆಯಿಂದ ಹೊರಬಿದ್ದಳು. ಪುನಃ ಅವನು ಅಲ್ಲಿಯೇ ಕುಳಿತಿದ್ದನು.

'ತಂದೆಯವರ ಭೆಟ್ಟಿಯಾಯಿತೆ' ತನ್ನ ಸ್ವರವನ್ನು ತಾನೆ ನಂಬಲಿಲ್ಲ
'ಹೌದು' ಯುವಕ ವಿನಯದಿಂದ ಉತ್ತರ ಕೊಟ್ಟ.

'ಅದೇನು ಕೆಲಸವಿತ್ತು?' ಅವಳ ಧ್ವನಿಯಲ್ಲಿ ಕಾತರತೆಯಿತ್ತು.

'ತಮ್ಮ ಬಗ್ಗೆಯೇ ಸ್ವಲ್ಪ ಮಾತಾಡುವದಿತ್ತು' ಲೀಲೆ ವಿದ್ಯುಲ್ಲತೆಯಿಂದ ಮಾಯವಾದಳು.

ಲೀಲುವಿನ ತಲೆ ತಿರುಗಹತ್ತಿತು. 'ಅಲ್ಲಾ, ನನ್ನ ಬಗ್ಗೆ ನನ್ನ ತಂದೆಯ ಹತ್ತರ ಮಾತಾಡುವದಿತ್ತಂತೆ ... ಯಾವ ವಿಷಯವಾಗಿರಬಹುದು..? ಲೀಲೆ ಅದೆಷ್ಟೋ ಪ್ರಶ್ನೆಗಳನ್ನು ಕೇಳಿಕೊಂಡಳು. ಒಂದೇ ಒಂದು ಪ್ರಶ್ನೆಗೆ ಸರಿಯಾದ ಉತ್ತರ ಸಿಕ್ಕಿತು. ಆದರೆ ಅದನ್ನುಚ್ಚರಿಸುವ ಧೈರ್ಯ ಅವಳಿಗಿರಲಿಲ್ಲ.

ಮರುದಿನ ಅವನ ಮುಂದೆ ಹಾಯ್ದುಹೋಗಲು ಅವಳಿಗ ಧೈರ್ಯ ಸಾಲಲಿಲ್ಲ. ಅದೇನೋ ನಾಚಿಕೆ. ಹಿತ್ತಲು ಬಾಗಿಲಿನಿಂದಲೇ ಕಾಲೇಜಿಗೆ ಹೋದಳು. ಅಲ್ಲಿ ಹೇಳಿದ್ದೊಂದೂ ಅವಳ ತಲೆಗೆ ಹಿಡಿಯಲಿಲ್ಲ.

ಮಾರನೆಯ ದಿನ ರವಿವಾರವಿದ್ದಿತು. ಅವನನ್ನು ನೋಡದೆ ಎರಡು ದಿವಸವಾಗಿಹೋಗಿತ್ತು. ಕದ್ದಾದರೂ ನೋಡಬೇಕೆಂದು ನಿಶ್ಚಯಿಸಿದಳು. ಸಾವಕಾಶ ಮೇಲುಗಾಲಿಡುತ್ತ ಕೋಣೆಯ ಹತ್ತಿರ ಬಂದಳು. ಅಲ್ಲಾರೂ ಇದ್ದಂತೆ ಭಾಸವಾಗಲಿಲ್ಲ. ಸಾವಕಾಶ ಒಳಗೆ ಹೋದಳು. ಆ ಕುರ್ಚಿ ಬರಿದಾಗಿತ್ತು. ಅವಳಿಗೇಕೋ ವೇದನೆಯಾಯಿತು. ಅವಳ ಹೃದಯವೂ ಬರಿದಾದಂತೆನಿಸಿತು.

ಸೋಮವಾರವೂ ಅವನ ದರ್ಶನವಾಗಲಿಲ್ಲ ಲೀಲು ಕಾತರಳಾದಳು. ಎಂತಹ ವೇದನೆಯನ್ನು ಅವಳೆಂದೂ ಅನುಭವಿಸಿರಲಿಲ್ಲ. ರಾತ್ರಿ ಊಟಕ್ಕೆ ಕುಳಿತಾಗ ತಂದೆಗೆ ಸಾವಕಾಶವಾಗಿ ಕೇಳಿದಳು:

'ಅಪ್ಪಾಜಿ, ಅವರಾನೋ ಮಧ್ಯಾಹ್ನದ ಹೊತ್ತಿಗೆ ಬರುತ್ತಿದ್ದರಲ್ಲ, ಯಾರವರು ಅಪ್ಪಾಜಿ?' ತನ್ನ ಕಣ್ಣಲ್ಲಿಯ ನೀರನ್ನು ತಂದೆಯು ಎಲ್ಲಿ ನೋಡಿಬಿಡುವರೊ ಎಂಬ ಭಯವಾಯಿತು ಅವಳಿಗೆ.

'ಓಹೋ, ಅವನೇ !' ಪ್ರಶ್ನೆಯು ಅಪ್ಪಾಜಿಯ ಮನಸ್ಸಿಗೆ ಬಂದಿರಲಿಲ್ಲ. 'ಹಾಂ, ನನ್ನ ಆಪ್ತ ಮಿತ್ರನೊಬ್ಬನ ಮಗನು. ಅದಾವುದೋ

ಇನ್ಸ್ಯೂರನ್ಸ ಕಂಪನಿಯಲ್ಲಿ ಏಜಂಟಸಿದ್ದಾನಂತೆ. ನಿನ್ನ ಹೆಸರಲ್ಲೊಂದು ವಿಮಾ ಇಳಿಸಿರೆಂದು ತಾಗಿದ್ದ. ಈ ನಾಲ್ಕು ದಿನ ಕಷ್ಟಪಟ್ಟು ಅವನನ್ನು ಓಡಿಸಬೇಕಾದರೆ ನಾನು ಮಾಡಿದ ಪುಣ್ಯವೆಲ್ಲವೂ ತೀರಿತು...'

ಲೀಲುವಿಗೊಂದು ಹುಚ್ಚು ನಗು ಬಂದುಬಿಟ್ಟಿತು. ಬಾಯಿಯಲ್ಲಿಯ ಅನ್ನವೆಲ್ಲವೂ ಮೂಗಿನಲ್ಲಿ ಬಂದಿತು. ಊಟ ಅಷ್ಟಕ್ಕೇ ಮುಕ್ತಾಯವಾಯಿತು.

'...ಇನ್ಸ್ಯೂರನ್ಸ ಕಂಪನಿಯ ಏಜಂಟ!..' ಲೀಲು ಹಾಸಿಗೆಯ ಮೇಲೆ ಬಿದ್ದವಳು ಚಿಂತಿಸಹತ್ತಿದಳು. 'ಅಲ್ಲಾ ನಾನೇನೊ ಭಾವಿಸಿಕೊಂಡಿದ್ದೆ.. ಅದೆಷ್ಟೋ ಗಾಳಿಗೋಪುರ ಕಟ್ಟಿಕೊಂಡಿದ್ದೆ..' ಅರ್ಥವಿಲ್ಲದ ನಗುವೊಂದು ಕತ್ತಲೆಯಲ್ಲಿ ಮಾಯವಾಯಿತು. ಪುನಃ ವಿಶಾದವು ಅವಳನ್ನು ಆವರಿಸಿತು. '.. ಮನೋ ಸಾಮ್ರಾಜ್ಯದಲ್ಲಿಯೇ ನಾನೆಷ್ಟು ಸುಖಿಯಾಗಿದ್ದೆನಲ್ಲ!.. ಅಲ್ಲಾ, ಜಗತ್ತಿನಲ್ಲಿಯ ಉತ್ತಮ ವಸ್ತುಗಳೆಲ್ಲವೂ ತಮ್ಮವೇ ಎಂದು ಭಾವಿಸುವವರು ಅದೆಷ್ಟು ಜನ !.. ಸೃಷ್ಟಿಕರ್ತನ ಸುಂದರ ಕೃತಿಗಳನ್ನು ಮೋಹಿಸುವವರು ಅದೆಷ್ಟೋ ಜನ ..ಅದು ತನ್ನ ಪಾಲಿಗೆ ಬಂದೀತೆ?..ಈ ಹೊತ್ತು ಬರಬಹುದು..ನಾಳೆ ಬರಬಹುದು...ಎಂದು ನೋಡುತ್ತ ಎಷ್ಟು ಜನ ಗಾಳಿಗೋಪುರವನ್ನು ಕಟ್ಟಿಕೊಳ್ಳುವುದಿಲ್ಲ. ಆದರೆ ಎಲ್ಲರ ಆಶೆಯೂ ಪೂರ್ಣವಾಗುವುದೇ.. ಎಲ್ಲೋ ಸಾವಿರಕ್ಕೊಬ್ಬರ ಆಶೆ ಸಿದ್ಧಿಸಬಹುದು. ಉಳಿದವರ ಪಾಡು?' ಆಳವಾದ ನಿಟ್ಟುಸಿರೊಂದು ಕತ್ತಲೆಯಲ್ಲಿ ಲೀನವಾಯಿತು.. ಉಳಿದವರ ಪಾಲಿಗೆ ಅದು ಮೃಗಜಲ. ಒಮ್ಮೆ ನಿರಾಶೆಯಾದರೆ ಪುನಃ ಕೆಲವೇ ದಿನಗಳಲ್ಲಿ ಆಶೆಗೆ ಚಿಗಿರೊಡೆಯುತ್ತೆ.. ಪುನಃ ನಿರಾಶೆ. ಪುನಃ ಆಶೆ.. ಜೀವನ ಹೀಗೆಯೇ ತೇಲುತ್ತ ಮುಳುಗುತ್ತ ಸಾಗುತ್ತದೆ..' ಲೀಲೆಯ ವಿಚಾರಚಕ್ರ ತಿರುಗಲಾರಂಭಿಸಿತು. ಒಂದೆರಡು ತೊಟ್ಟು ಹನಿ ಹಾಸಿಗೆಯ ಮೇಲೆ ಬಿದ್ದು ಇಂಗಿಹೋದುವು.

—★—

# ಸಮಾಧಿ ಸ್ತಂಭ

ಶರಾವತಿ ನದಿಯು ಮಂಜುಳ ಧ್ವನಿಗೈಯುತ್ತ ಹರಿಯುತ್ತಿದ್ದಿತು. ಸಮುದ್ರದ ಕಡೆಯ ತಂಗಾಳಿಯು ಸುಂಯಿದಲಿಡುತ್ತ ಬೀಸುತ್ತಿದ್ದಿತು. ಸೂರ್ಯನು ತನ್ನ ಪ್ರಖರತೆಯನ್ನು ಕಳೆದುಕೊಂಡು ಕಳೆಗುಂದತೊಡಗಿದ್ದನು. ಇಂತಹ ಸಮಯದಲ್ಲಿ ಉನ್ನತವಾದ ಮರದ ಹೆಣೆಯ ಮೇಲೆ ಅಭ್ಯಾಸ ಬಲದಿಂದ ಬಿದ್ದುಕೊಂಡಿದ್ದ ಕಾವಲುಗಾರನಿಗೆ ತಟ್ಟನೆ ನಿದ್ದೆಯಿಂದ ಎಚ್ಚರಿಸಿದಂತಾಯಿತು. ದೂರದಲ್ಲಿ ಮೂರು ನಾಯಿಗಳು ವಾಯುವೇಗದಿಂದ ಬರುತ್ತಿದ್ದವು. ಅವುಗಳ ವೇಗವನ್ನು ಕಂಡು ಕಾವಲುಗಾರನಿಗೆ ಆಶ್ಚರ್ಯವಾಯಿತು. ಅವನು ಅವಸರದಿಂದ ಟೊಂಕದಲ್ಲಿ ನೇತಾಡುತ್ತಿದ್ದ ತನ್ನ ಕೊಂಬಿಗೆ ಕೈಹಾಕಿ "ಕ್ಹೂ" ಎಂಬ ದೊಡ್ಡ ಧ್ವನಿಗೈದನು. ಸ್ವಲ್ಪ ಹೊತ್ತಿನಲ್ಲಿಯೇ ಆ ಧ್ವನಿಗೆ ಮಾರುತ್ತರವು ದೊರೆಯಿತು. "ಕ್ಹೂ"ಎಂಬ ಧ್ವನಿಗಳಿಂದ ಗೇರಸೊಪ್ಪೆಯ ಆ ಕಾಡೆಲ್ಲ ಪ್ರತಿಧ್ವನಿತವಾಯಿತು ಮತ್ತು ಅತ್ಯಲ್ಪ ಹೊತ್ತಿನಲ್ಲಿಯೇ ಗೇರಸೊಪ್ಪೆಯ ಬಂದರದಿಂದ ಯುದ್ಧ ಜಹಜುಗಳು ಸೈನಿಕರನ್ನು ತುಂಬಿಕೊಂಡು ಹೊರಟವು.

ಸೇನಾಪತಿಯಾದ ಬೀರನಾಯಕನಿಗೆ ಈಗ ಉಭಯ ಸಂಕಟಕ್ಕಿಟ್ಟುಕೊಂಡಿತ್ತು. ವಾಯುವೇಗದಿಂದ ಬರುತ್ತಿರುವ ಜಹಜುಗಳನ್ನು ನೋಡಿದರೆ ಅವು ಫಿರಂಗಿಗಳ ಜಹಜುಗಳೆಂಬುದರಲ್ಲಿ ಸಂಶಯವೇ ಇರಲಿಲ್ಲ ಯಾಕಂದರೆ ಅಷ್ಟು ವೇಗವಾಗಿ ನಡೆಯಬಲ್ಲ ಮತ್ತು ಅಷ್ಟು ಹಗುರಾಗಿರುವ ಜಹಜುಗಳನ್ನು ಕಟ್ಟುವದು ಯಾರಿಂದಲೂ ಸಾಧ್ಯವಿದ್ದಿಲ್ಲ. ಆದರೆ ಫಿರಂಗಿಗಳೇಕೆ ಇತ್ತ ಬರಬೇಕು? ಗೇರಸೊಪ್ಪೆಯ ಮೇಲೆ ಧಾಳಿಮಾಡುವದಕ್ಕಾಗಿಯೇ? ಗೇರಸೊಪ್ಪೆಯವರು ಫಿರಂಗಿಗಳ ವಿರುದ್ಧ ಹೋದವರಲ್ಲ! ಅಂದಮೇಲೆ ಈ ಜಹಜುಗಳೇತಕ್ಕೆ? ಅವನಿಗೆ ಯಾವುದೂ ತೋಚಲಿಲ್ಲ. ಒಂದುವೇಳೆ ಈ ಫಿರಂಗಿಗಳು ದುರುದ್ದೇಶದಿಂದಲೇ ಇತ್ತ ಬಂದಿದ್ದಾಗಿದ್ದರೆ ಅವರೆಲ್ಲರೂ ಶರಾವತಿಯ ಉಪ್ಪು ನೀರನ್ನು ಕುಡಿಯುವದೆಂದು ಅವನು ಮನಸ್ಸಿನಲ್ಲಿ ಖಂಡಿತಮಾಡಿಕೊಂಡಿದ್ದನು.

ಎರಡೂ ಪಡೆಗಳು ಸಮೀಪ ಬಂದಂತೆ ಬೀರನಾಯಕನಿಗೆ ಅವು ಮುಂಬಯಿಯ ಫಿರಂಗಿ (ಇಂಗ್ಲೀಷರು)ಗಳ ಹಡಗೆಂದು ಖಾತ್ರಿಯಾ

ಯಿತು. ಅವಿನ್ನೂ ಎರಡು ಫರ್ಲಾಂಗು ದೂರದಲ್ಲಿರುವಾಗಲೇ ಅವುಗಳಿಗೆ ನಿಲ್ಲಲು ಬೀರನಾಯಕನು ಸನ್ನೆಮಾಡಿ ತಿಳಿಸಿದನು. ಒಂದು ವೇಳೆ ಅವು ನಿಲ್ಲದಿದ್ದಲ್ಲಿ ಗುಂಡು ಹಾರಿಸಲು ಅವನು ಮೊದಲೇ ಅಪ್ಪಣೆ ಕೊಟ್ಟಿದ್ದನು. ಆದರೆ ಪುಣ್ಯಕ್ಕೆ ಆ ಜಹಜುಗಳೆಲ್ಲವೂ ಇವನ ಸನ್ನೆಯನ್ನು ಮಾನ್ಯಮಾಡಿ ನಿಂತವು. ಅವುಗಳಲ್ಲಿ ಒಂದು ಮಾತ್ರ ಮುಂದೆ ಬಂದಿತು. ಆ ಜಹಜಿನ ತುದಿಯಲ್ಲಿ ಒಬ್ಬನು ನಿಂತು ಬಿಳೀ ವಸ್ತ್ರವನ್ನು ಹಾರಿಸುತ್ತಿದ್ದನು. ಜಹಜು ಹತ್ತಿರ ಬಂದಂತೆ ಅವನೊಬ್ಬ ಬಿಳೀ ಸಾಹೇಬನೆಂದು ಬೀರನಾಯಕನಿಗೆ ಗೊತ್ತಾಯಿತು. ಬೀರನಾಯಕನ ಪಡಗದಿಂದ ಕೆಲವು ಅಂತರದಲ್ಲಿ ಆ ಜಹಜು ನಿಂತಿತು. ಅದರಲ್ಲಿದ್ದ ಯಾವನೊ ಒಬ್ಬ—ಇತ್ತಲಾಗಿನ ದೇಶದವನೇ ಇರಬೇಕು—ಕೂಗಿದ "ಇವು ಇಂಗ್ಲೀಷರ ಹಡಗುಗಳು"

"ಇವು ಗೆರಸೊಪ್ಪೆಯ ಹಡಗುಗಳು" ಎಂದು ಬೀರನಾಯಕನು ಗುಡುಗಿದನು.

"ಪರವಾಯಿಲ್ಲ! ನಾವು ನಿಮ್ಮ ರಾಣಿಯನ್ನು ಭೆಟ್ಟಿಯಾಗಲು ಬಂದಿದ್ದೇವೆ. ಸದುದ್ದೇಶದಿಂದ" ಎಂದು ಆ ವ್ಯಕ್ತಿ ಕೂಗಿತು.

ಬೀರನಾಯಕನಿಗೆ ಯೋಚನೆಗಿಟ್ಟಿಕೊಂಡಿತು. ಇವರನ್ನು ನಂಬುವದೇ ಇಲ್ಲವೇ ಬಿಡುವದೇ, ನಂಬಿ ಗೆರಸೊಪ್ಪೆಯಲ್ಲಿ ಬಿಟ್ಟುಬಿಟ್ಟರೆ ಅವರು ಅನರ್ಥವನ್ನೇನಾದರೂ ಮಾಡಿದರೆ! ಫಿರಂಗಿಗಳು ಲಾಭಕ್ಕಾಗಿ ಏನು ಮಾತಲೂ ಸಿದ್ಧರೆಂದು ಅವನಿಗೆ ಗೊತ್ತಿತ್ತು. ಆದರೆ ಅವರು ಸದುದ್ಧೇಶದಿಂದಲೇ, ಕಾರ್ಯಕ್ಕಾಗಿ ಬಂದಿದ್ದರೆ? ಅವನ ಮನಸ್ಸು ಒಂದು ಕ್ಷಣ ಹೊಯ್ದಾಡಿತು.

"ಪರವಾ ಇಲ್ಲ, ಬನ್ನಿ, ಮೋಸವೇನಾದರೂ ಮಾಡಿದರೆ ನಿಮ್ಮ ಹಡಗುಗಳು ತಿರುಗಿ ಊರನ್ನು ಕಾಣುವುದಿಲ್ಲ" ಎಂದು ಬೀರನಾಯಕನು ಕೂಗಿದನು.

ಜಹಜುಗಳೆಲ್ಲವೂ ಮುಂದೆಬಂದುವು. ಮುಂದೆ ಬಂದ ಜಹಜಿನಲ್ಲಿಯ ಸಾಹೇಬ—ಬಿಳೀ ಬಟ್ಟೆಯನ್ನು ಬೀಸುತ್ತಿದ್ದವ—ಬೀರನಾಯಕನನ್ನು ನೋಡಿ ಏನನ್ನೋ ಅನ್ನುತ್ತ ಹಲ್ಲು ತೆಗೆದ. ಬೀರನಾಯಕ

ಸಿಗೆ ನಗೆ ಬರಲಿಲ್ಲ. ಅವನನ್ನು ದುರಗುಟ್ಟಿ ನೋಡುತ್ತ ಮೌನವಾಗಿದ್ದ. ಫಿರಂಗಿಗಳ ಹಿಂದೆ ಕೆಲವು, ಮುಂದೆ ಕೆಲವು ಹಡಗುಗಳನ್ನಿಟ್ಟುಕೊಂಡು ಬೀರನಾಯಕ ಅವರನ್ನು ಗೆರಸೊಪ್ಪೆಗೆ ತಂದ.

೨

೧೭೯೮ರ ಸಮಯ ದಕ್ಷಿಣ ಭಾರತದಲ್ಲಿ ಪ್ರಕ್ಷುಬ್ಧವಾದ ವಾತಾವರಣವಿತ್ತು. ಮೈಸೂರು ಹುಲಿಯಾದ ಟಿಪ್ಪುಸುಲ್ತಾನನು ಬ್ರಿಟಿಷರ ವಿರುದ್ಧ ಕತ್ತಿಯನ್ನು ಧರಿಸಿದ್ದನು. ಮೊದಲು ಒಂದುಬಾರಿ ಸೋತಿದ್ದರಿಂದ ಹುಲಿಯು ಆರೆಗಾಯಗೊಂಡು ಅತಿಭಯಂಕರವಾಗಿತ್ತು. ಟಿಪ್ಪುವು ಒಳಗಿಂದೊಳಗೆ ಯುದ್ಧದ ತಯಾರಿಯನ್ನು ನಡೆಸಿದ್ದನು. ಇಡೀ ದೇಶವೆಲ್ಲವು ಮದ್ದಿನ ಮನೆಯಮೇಲೆ ಇಟ್ಟಂತಿತ್ತು. ಇಂತಹ ಸಮಯದಲ್ಲಿ ಮೈಸೂರು ರಾಜ್ಯದ ಅಕ್ಕಪಕ್ಕದಲ್ಲಿರುವ ರಾಜ್ಯಗಳಿಗೆಲ್ಲ ಉಭಯಸಂಕಟಕ್ಕಿಟ್ಟುಕೊಂಡಿತ್ತು. ಮೈಸೂರಿನೊಡನೆ ಸೇರುವದೇ ಇಲ್ಲವೇ ತಟಸ್ಥವಾಗಿರುವದೇ? ಕೊನೆಗೆ ಕೆಲವು ರಾಜ್ಯಗಳು ಹಿಂದು ದ್ವೇಷೆಯಿಂದ ಟಿಪ್ಪುವನ್ನು ಸೇರುವದಕ್ಕಿಂತ ತಟಸ್ಥವಾಗಿರುವದೇ ಮೇಲೆಂದು ತಿಳಿದು ಅವನ ಪಾಲಿಗೆ ಅವನನ್ನು ಬಿಟ್ಟು ತಟಸ್ಥವಾಗಿದ್ದವು. ಇಂತಹ ರಾಜ್ಯಗಳಲ್ಲಿ ಗೆರಸೊಪ್ಪೆಯ ರಾಜ್ಯವೂ ಒಂದು. ಆ ಕಾಲದಲ್ಲಿ ಗೆರಸೊಪ್ಪೆ ರಾಜ್ಯವು ಸಮೃದ್ಧವಾದ ರಾಜ್ಯವಾಗಿದ್ದಿತು. ಅದನ್ನು ಜೈನ ವಂಶದವರು ಆಳುತ್ತಿದ್ದರು. ಈ ಸಂಗತಿ ನಡೆದ ಕಾಲದಲ್ಲಿ ಚೆನ್ನಾಂಬಿಕೆ ಎಂಬುವಳು ರಾಜ್ಯವನ್ನು ಆಳುತ್ತಿದ್ದಳು. ಗಂಡನ ಮರಣದ ನಂತರ ಮಗನಿನ್ನೂ ಚಿಕ್ಕವನಿದ್ದದರಿಂದ ಅವಳೇ ರಾಜ್ಯಭಾರವನ್ನು ವಹಿಸಿ ದಕ್ಷತೆಯಿಂದ ನಡೆಯಿಸುತ್ತಿದ್ದಳು.

ಬೀರನಾಯಕನು ಹೇಳಿಕಳುಹಿಸಿದ್ದರಿಂದ ರಾಣಿಯು ಅವಸರದಿಂದ ಒಡ್ಡೋಲಗಕ್ಕೆ ಬಂದು ಫಿರಂಗಿ ಸಾಹೇಬನನ್ನೂ ಅವನ ಪರಿವಾರದವರನ್ನೂ ಬರಮಾಡಿಕೊಂಡಳು. ಸಾಹೇಬನು ಮುಂಬಯಿ ಗವರ್ನರನ ಸಲಾಮುಗಳನ್ನರ್ಪಿಸಿ ಭಾಷಾಂತರಕಾರನ ಮುಖಾಂತರ ಮಾತನಾಡತೊಡಗಿದನು.

"ನಾನು ಇಲ್ಲಿ ಬಂದ ಕಾರ್ಯ ಇಷ್ಟು. ಟಿಪ್ಪುಸುಲ್ತಾನನು ನಮ್ಮ ವಿರುದ್ಧ ಯುದ್ಧ ತಯಾರಿಮಾಡುತ್ತಿರುವುದು ನಿಮಗೆ ಗೊತ್ತಿದೆ. ನೀವು ಅವನ ಪಕ್ಷ ಸೇರದೆ ತಟಸ್ಥರಾಗಿರುವುದು ಸ್ತುತ್ಯ. ಆದರೆ ನಮಗೆ ಅವನ ಪ್ರಯತ್ನವನ್ನು ಆರಂಭದಲ್ಲಿಯೇ ಮುರಿಯಬೇಕಾಗಿದೆ. ಆದರಿಂದ ಶರಾವತಿ ನದಿಯ ಮುಖಾಂತರ ಮೈಸೂರು ರಾಜ್ಯವನ್ನು ಪ್ರವೇಶಿಸಲು ಗವರ್ನರರು ಸೈನ್ಯದೊಂದಿಗೆ ನನ್ನನ್ನು ಕಳುಹಿಸಿದ್ದಾರೆ ನನ್ನ ಹೆಸರು ಕರ್ನಲ್ ಹಿಲ್ಸ್. ನನ್ನ ಸೈನ್ಯವೆಲ್ಲ—ಹೆಚ್ಚಿಲ್ಲ ಒಂದು ಸಾವಿರ ದಳ—ಕಾರವಾರದಲ್ಲಿ ಇಟ್ಟು ಬಂದಿದ್ದೇನೆ. ಮಾರ್ಗದಲ್ಲಿ ತಟಸ್ಥವಾದ ತಮ್ಮ ರಾಜ್ಯವೊಂದಿರುವದರಿಂದ ತಮ್ಮ ಅನುಮತಿಪಡೆದೇ ತಮ್ಮ ರಾಜ್ಯದೊಳಗಿಂದ ಸೈನ್ಯವನ್ನು ಒಯ್ಯಬೇಕೆಂದು ನಾನೊಬ್ಬನೇ ಬಂದೆ. ರಾಣಿಯವರು ನಮ್ಮ ಹೇಳಿಕೆಗೆ ಒಪ್ಪುವರೆಂದು ನನಗೆ ಭರವಸೆ ಇದೆ. ನಾವು ತಮಗೆ ಯಾವತರದ ತೊಂದರೆಯನ್ನೂ ಕೊಡುವದಿಲ್ಲ. ತಮ್ಮ ತಾಟಸ್ಥ್ಯವನ್ನು ಮಾನ್ಯಮಾಡುವೆವು. ಇಷ್ಟುಮಾತ್ರ ಉಪಕಾರವಾಗಬೇಕು. ನಮ್ಮ ಸೈನ್ಯವು ಗೆರಸೊಪ್ಪೆಯಲ್ಲಿ ಇಳಿದು ಈ ಮಾರ್ಗವಾಗಿ ಮೈಸೂರು ರಾಜ್ಯವನ್ನು ಪ್ರವೇಶಿಸಲು ಅಪ್ಪಣೆಯನ್ನು ಕೊಡಬೇಕು."

ರಾಣಿಗೆ ಯೋಚನೆಗಿಟ್ಟುಕೊಂಡಿತು. ಕರ್ನಲ್ ಹಿಲ್ಸ್‌ನ ಮಾತಿಗೆ ಒಪ್ಪುವುದೇ ಬಿಡುವುದೇ! ಒಪ್ಪದಿದ್ದರೆ ಬಲಾತ್ಕಾರದಿಂದಲೂ ಈ ಮಾರ್ಗದಿಂದ ಹೋಗಬಹುದು. ಇದಲ್ಲದೆ ಇವನ ಬಳಿಯಲ್ಲಿ ನುರಿತ ಒಂದು ಸಾವಿರ ಫೌಜು ಇದೆ. ಅದನ್ನು ಎದುರಿಸಲು ನಮ್ಮಿಂದ ಸಾಧ್ಯವಿಲ್ಲ. ಮಾರ್ಗ ಕೊಟ್ಟರಾಯಿತು. ತನ್ನ ದೈವ ತಾನು ಕಂಡುಕೊಳ್ಳುವ. ಒಂದುವೇಳೆ ಟಿಪ್ಪುವು ಸಿಟ್ಟಿಗೆದ್ದರೆ ಮಾತ್ರ ಫಜೀತಿ. ಆದರೂ ಒಂದು ಮಾತು ಹೇಳಿನೋಡುವ ಎಂದು ಚಿಂತಿಸಿ

"ಸಾಹೇಬ, ವಿಚಾರಿಸಿ ನೋಡು, ಟಿಪ್ಪುವು ಮಹಾ ಧೂರ್ತ. ನೀನು ಬಂದದ್ದು ಅವನಿಗೆ ಗೊತ್ತಾದರೆ ನಿನ್ನಪಾಡು ನಾಯಿಯಪಾಡಾದೀತು. ಇದಲ್ಲದೆ ಈ ರೀತಿ ಹಿಂಬಾಗಿಲಿನಿಂದ ಪ್ರವೇಶಮಾಡುವದು ಶೂರರಿಗೆ ಉಚಿತವಲ್ಲ.

ಉಪಕಾರವಾಯಿತು ತಾಯೀ. ಆದರೆ ನಾನು ಸೈನಿಕ. ಮೇಲಿನವರ ಆಜ್ಞೆ ಪರಿಪಾಲಿಸುವುದು ನನ್ನ ಧರ್ಮ. ಈ ರೀತಿ ಧಾಳಿ ಮಾಡೆಂದು ಆಜ್ಞೆಯಾಗಿದೆ. ಅದನ್ನು ನೆರವೇರಿಸುವದು ನನ್ನ ಕರ್ತವ್ಯ. ಜಯಾಪಜಯಗಳು ದೈವಾಧೀನ."

"ಆಯಿತು. ನಿನ್ನ ದಾರಿ ನೀನು ಕಂಡುಕೊಳ್ಳು. ದೇವರು ನಿನಗೆ ಕಲ್ಯಾಣಮಾಡಲಿ."

"ಉಪಕಾರವಾಯಿತು ತಾಯೀ."

೩

ಗೆರಸೊಪ್ಪೆಯಿಂದಾಚೆ ಇಪ್ಪತ್ತು ಮೈಲಿ ದೂರದಲ್ಲಿರುವ ಕಟ್ಟಡವಿಯಲ್ಲಿ ಮುಲಪಳ್ಳಿಯ ಬಳಿ ಇಬ್ಬರು ತುರುಷ್ಕರು ನೆಲದ ಮೇಲೆ ಬಿದ್ದಿದ್ದ ತುಂಡೊಂದರ ಮೇಲೆ ಮೌನವಾಗಿ ಕುಳಿತುಕೊಂಡಿದ್ದರು. ಇಬ್ಬರೂ ಅಜಾನುಬಾಹುಗಳು. ಆಪಾದಮಸ್ತಕ ಶಸ್ತ್ರಧಾರಿಗಳಾಗಿದರು. ಇಬ್ಬರ ಕೈಯಲ್ಲೂ ಫ್ರೆಂಚ ಕಂಪನಿಯಲ್ಲಿ ಮಾಡಿದ ಬಂದೂಕುಗಳು. ಅವರಲ್ಲೊಬ್ಬ ಟಿಪ್ಪುವಿನ ವಿಶ್ವಾಸಸ್ಥ ಸೇನಾಪತಿ ಹುಸೇನಲ್ಲಿ. ದಕ್ಷಿಣದ ಹಿಂದೂರಾಜ್ಯಗಳನ್ನೆಲ್ಲ ಕೊಳ್ಳೆಹೊಡೆದು ಬಂದ ವೀರನಾತ. ಮತ್ತೊಬ್ಬನು ಅವನ ಕೈಕೆಳಗಿನ ಹವಾಲದಾರ ಹಮ್ಮೀದ.

ಇಬ್ಬರೂ ಅದೆಷ್ಟೋ ಹೊತ್ತು ನೀರವವಾಗಿ ಕುಳಿತಿದ್ದರು. ಕೊನೆಗೆ ಹುಸೇನಿಯೇ ಮಾತನಾಡಿದ.

"ಆ ಗುಪ್ತಚಾರ ಮೋಸ ಮಾಡಿದಂತಿದೆ. ಅವರು ಬಂದದ್ದು ನಿಜವಿದ್ದರೆ ಈ ಹೊತ್ತಿಗಾಗಲೇ ನಮ್ಮೆದುರಿಗೆ ಇರಬೇಕಾಗಿತ್ತು."

"ಉಸ್ಮಾನನು ಬಹಳ ವಿಶ್ವಾಸಸ್ಥ, ಅವನಂತಹ ಶೂರನು ನಮ್ಮ ರಾಜ್ಯದಲ್ಲಿಯೇ ಇಲ್ಲ. ಇಲ್ಲದಿದ್ದರೆ ಈ ಕಾಫಿರರ—ಜೈನರ ರಾಜ್ಯದಲ್ಲಿ ಜೈನನಂತೆ ವೇಷಹಾಕಿಕೊಂಡು ಇರಲು ಮತ್ತಾರಿಗೆ ಸಾಧ್ಯ? ಇದಲ್ಲದೆ ಇಲ್ಲಿ ಅವನು ಬಹಳ ವರುಷ ನೆಲಸಿದ್ದರಿಂದ ಯಾರಿಗೂ ಸಂಶಯ ಬರುವಂತೆಯೂ ಇಲ್ಲ. ಅವನು ತಂದ ಸುದ್ದಿ ನಿಜವಿರಲೇಬೇಕು. ಇಲ್ಲದಿದ್ದರೆ ಅವನಿಗೆ ತನ್ನ ಜೀವದ ಆಶೆ ಇಲ್ಲವೇ—?"

"ಹಾಗಾದರೆ ಅವರು ಬರಲು ತಡವೇಕೆ...?"

“ಬರುತ್ತಿರಬಹದು. ಮಲೆಮನೆ ಗುಡ್ಡವಿದೆಯಲ್ಲ. ಗುಂಡು, ತುಪಾಕಿಗಳನ್ನು ಹೊತ್ತುಕೊಂಡು ಅದನ್ನು ಹತ್ತಿ ಬರುವದೇನು ಸಾಮಾನ್ಯದ ಕೆಲಸವೇ? ಅದೂ ಇಂತಹ ಕಟ್ಟಡವಿಯಲ್ಲಿ—ಸಮನಾದ ದಾರಿಯೂ ಇಲ್ಲದ ಸ್ಥಳದಲ್ಲಿ...ಅಬ್ಬಾ ಆ ಫಿರಂಗಿಗಳು ಸಾಹಸಿಗಳೆಂದೇ ಹೇಳಬೇಕು. ಇಲ್ಲದಿದ್ದರೆ ಇಂತಹ ಅಪರಿಚಿತ ಸ್ಥಳದಿಂದ ನುಗ್ಗಲು ಬೇರೆ ಯಾರಿಗೂ ಧೈರ್ಯ ಬಾರದು.”

“ಎರಡು ಸಾವಿರ ಫೌಜಿದೆಯೆಂದು ಉಸ್ಮಾನನ ವರದಿ. ನಮ್ಮದು ಮೂರು ಸಾವಿರ. ಒಂದುವೇಳೆ ಅವರದು ಹೆಚ್ಚಿದ್ದರೆ ಪ್ರಯಾಸವಾದೀತು. ಈ ಫಿರಂಗಿಗಳು ಗಂಡಾಂತರದಲ್ಲಿ ಸಿಕ್ಕಾಗ ಅವರ ಉತ್ಸಾಹ ಇಮ್ಮಡಿಯಾಗುತ್ತದೆ. ಏಕೆಂದರೆ ಓಡಿಹೋಗಲು ಅವರಿಗೆ ತಾವೇ ಇಲ್ಲ. ಓಡಿದರೆ ಸಾವಿರಾರು ಮೈಲು ದೂರದಲ್ಲಿರುವ ತಮ್ಮ ದೇಶಕ್ಕೇ ಓಡಬೇಕಷ್ಟೇ.”

“ಹಾ! ಅದೇನು ಸಪ್ಪಳ...?”

ಈರ್ವರೂ ತಟಕ್ಕನೆ ಸ್ತಬ್ಧರಾದರು. ದೂರದಲ್ಲಿ ಅದೆಷ್ಟೋ ಜನ ಒಟ್ಟಾಗಿ ನಡೆದು ಬರುವ ಸಪ್ಪಳವಾಗತೊಡಗಿತು. ಹುಸೇನಲ್ಲಿಯು ಸಾವಕಾಶವಾಗಿ ಎದ್ದುನಿಂತು ತನ್ನ ತುಪಾಕಿಯನ್ನು ಕೈಗೆ ತೆಗೆದುಕೊಂಡ. ಅವನಂತಹ ಗುರಿಕಾರರು ಆ ಪ್ರಾಂತ್ಯದಲ್ಲಿ ಯಾರೂ ಇರಲಿಲ್ಲ. ಅಲ್ಲಾನ ದಯೆಯಿಂದ ಈ ಬಾರಿ ಗುರಿ ತಪ್ಪದಿದ್ದರೆ. . .ತಾನು ಗುಂಡು ಹಾರಿಸಿದೊಡನೆಯೇ ಸುತ್ತಲೂ ವರ್ತುಳಾಕಾರವಾಗಿ ಅರ್ಧ ಮೈಲು ಪ್ರದೇಶದಲ್ಲಿ ಅಡಗಿ ನಿಂತಿದ್ದ ಸಿಪಾಯಿಗಳೆಲ್ಲರೂ ಒಂದೇ ಬಾರಿ ಗುಂಡುಗಳನ್ನು ಹಾರಿಸಬೇಕು—ಒಂದೇ ನಿಮಿಷಕ್ಕೆ ಮೂರು ಸಾವಿರ ಗುಂಡುಗಳು ವೈರಿಗಳನ್ನು ಎದುರಿಸಬೇಕು—ಎನ್ನುವ ವ್ಯವಸ್ಥೆ ಅವನು ಮಾಡಿ ಇಟ್ಟಿದ್ದನು. ಅಷ್ಟರಲ್ಲಿ ಫಿರಂಗಿಗಳ ದಂಡು ಗೋಚರಿಸಿತು. ಇಪ್ಪತ್ತು ಮೈಲು ಗುಡ್ಡ ಹತ್ತಿ ಬಂದ ಆಯಾಸದಿಂದ ತೇಕುತ್ತ ಸಾವಕಾಶವಾಗಿ ಸಾಲುಹಿಡಿದು ಬರುತ್ತಿದ್ದರು. ಎಲ್ಲರಿಗಿಂತ ಮುಂದೆ ಅವರ ಸೇನಾನಿ—ಕರ್ನಲ್ ಹಿಲ್ಲ್. ಮುಂದೆ ಬರುವ ಅವನ ಠೀವಿಯನ್ನು ನೋಡಿ ಅವನೇ ಸೇನಾಪತಿಯೆಂದು ಹುಸೇನಲ್ಲಿಗೆ ಖಾತ್ರಿಯಾಯಿತು.

ಎದುರಿಗಿರುವ ಬಲೆಯನ್ನು ಕಾಣದೆ ನಿರ್ಭಯದಿಂದ ಬರುತ್ತಿರುವ ಇಲಿಗಳಂತೆ ಅವರು ನಡೆದಿದ್ದರು. ಹುಸೇನಲ್ಲಿ ಸಾವಕಾಶವಾಗಿ ಬಂದೂಕು ಕೈಗೆ ತೆಗೆದುಕೊಂಡ. ಅದೆಷ್ಟೋ ದೊಡ್ಡ ದೊಡ್ಡ ಯುದ್ಧಗಳನ್ನು ಕಂಡ ತುಪಾಕಿಯದು. ಮನಸ್ಸಿನಲ್ಲಿ ಅಲ್ಲಾನನ್ನು ಸ್ಮರಿಸುತ್ತ ಗುರಿ ಹಿಡಿದ. 'ಠ್ರೋಂಯಿ' ಎಂಬ ಸಪ್ಪಳವಾಯಿತು. ಕ್ಷಣಾರ್ಧದಲ್ಲಿ ಗುಂಡು ಕರ್ನಲ್ ಹಿಲ್ಲ್‌ನ ಎದೆಯನ್ನು ಭೇದಿಸಿತು.

ಸೇನಾಪತಿಯ ಗುಂಡಿನ ಸಪ್ಪಳವಾದೊಡನೆಯೇ ಸೈನಿಕರ ತುಪಾಕಿಗಳೊಳಗಿಂದ ಮೂರು ಸಾವಿರ ಗುಂಡುಗಳು ಏಕ ಕಾಲಕ್ಕೆ ಹೊರ ಬಿದ್ದವು. ಫಿರಂಗಿಗಳೆಲ್ಲ ಚಲ್ಲಾಪಿಲ್ಲಿಯಾದರು. ಆಕಾಶವೇ ಹರಿದು ಬಿಟ್ಟಿತೋ---ಇಲ್ಲವೆ ಭೂಕಂಪವಾಯಿತೋ ಎಂದು ದಿಗ್ಭ್ರಮೆಯಾಯಿತು ಅವರಿಗೆ. ಮರುಕ್ಷಣದಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಭೂಶಾಯಿಯಾಗಿದ್ದರು! ಉಳಿದವರು ತಮ್ಮ ರಿವಾಲ್ವಾರುಗಳನ್ನು ತೆಗೆದು ಸಿಕ್ಕಾಬಟ್ಟೆ ಅಡವಿಯಲ್ಲಿ ಕುರುಡು ಗುರಿ ಹೊಡೆಯ ತೊಡಗಿದರು. ಆದರೆ ಮೈಸೂರಿನ ಸಿಪಾಯಿಗಳು ಮೊದಲೇ ಸುರಕ್ಷಿತವಾದ ಸ್ಥಳದಲ್ಲಿ ಅಡಗಿಕೊಂಡು ಕುಳಿತಿದ್ದರು. ಒಂದು ನಿಮಿಷ ಸ್ತಬ್ಧವಾದಃಕಾಡು ಈಗ ಗಾಯಾಳುಗಳ ಆರ್ತನಾದ, ತುಪಾಕಿಗಳ ಆರ್ಭಟೆಯಿಂದ ಘೋರ್ಗರೆಯಿತು. ಅಳಿದುಳಿದ ಫಿರಂಗಿಗಳು ತುಪಾಕಿಯನ್ನು ಬಿಸುಟು ಓಡಿ ಹೋಗಲು ಪ್ರಯತ್ನ ಮಾಡಿದರು. ಶಸ್ತ್ರವನ್ನು ಬಿಟ್ಟವರ ಮೇಲೆ ಗುಂಡು ಹಾರಿಸದೆ ಅವರನ್ನು ಸೆರೆಹಿಡಿಯಲು ಹುಸೇನಲ್ಲಿಯು ಅಪ್ಪಣೆ ಮಾಡಿದನು. ಸುಮಾರು ಏಳುನೂರು ಜನರು ನಿರ್ದಯದಿಂದ ಕೊಲ್ಲಲ್ಪಟ್ಟಿದ್ದರು. ಉಳಿದವರು ಸೆರೆಯಾಳುಗಳಾದರು. ಅಂತೂ ಹುಸೇನಲ್ಲಿಗೆ ವಿಜಯವಾಯಿತು.

ಹುಸೇನಲ್ಲಿಗೆ ಮುಂದೇನು ಮಾಡಬೇಕೆಂದು ಯೋಚನೆಗಿಟ್ಟುಕೊಂಡಿತು. ಉಸ್ಮಾನನು ಫಿರಂಗಿಗಳ ಫೌಜು ಎರಡು ಸಾವಿರವೆಂದು ಹೇಳಿದ್ದನು. ಇಲ್ಲಿದ್ದದ್ದು ಒಂದು ಸಾವಿರ ಮಾತ್ರ. ಸೆರೆಯಾಳುಗಳನ್ನು ಪೀಡಿಸಿದರೂ ಅವರೂ ಒಂದೇ ಸಾವಿರವೆಂದು ಹೇಳಿದರು. ಅವರನ್ನು ನಂಬುವದೇ ಬಿಡುವದೇ? ಉಳಿದ ದಂಡು ಗೆರಸೊಪ್ಪೆಯಲ್ಲಿರ

ಬಹುದೇ? ಆ ಕಾಫಿರ ರಾಣಿಯು ಅವರಿಗೆ ಆಶ್ರಯ ಕೊಟ್ಟಿರಬಹುದು. ಈ ರೀತಿ ವಿಶ್ವಾಸಘಾತ ಮಾಡಿದ ಬಗ್ಗೆ ಅವಳ ಸಮಾಚಾರವನ್ನು ತೆಗೆದುಕೊಳ್ಳಲಿಕ್ಕೇ ಬೇಕು" ಎಂದು ಯೋಚಿಸಿ ಗೆರಸೊಪ್ಪೆಯ ಕಡೆಗೆ ಹೊರಡಲು ಸೈನ್ಯಕ್ಕೆ ಅಪ್ಪಣೆ ಕೊಡುವವರಲ್ಲಿದ್ದನು. ಅಷ್ಟರಲ್ಲಿ ಒಬ್ಬ ಕುದುರೆ ಸವಾರನು ಏದುತ್ತ ಓಡಿಬಂದು ಹುಸೇನಲ್ಲಿಯ ಸಮೀಪ ಭೂಮಿಯಮೇಲೆ ಬಿದ್ದು..."ಹುಜೂರ ಸರ್ವ ಘಾತವಾಯಿತು... ಫಿರಂಗಿಗಳು ರಾಜ್ಯದಲ್ಲಿ ನುಗ್ಗಿದ್ದಾರೆ...ಸುಲ್ತಾನರು ಸೋತು ಶ್ರೀರಂಗ ಪಟ್ಟಣವನ್ನು ಸೇರಿದ್ದಾರೆ. ಫಿರಂಗಿಗಳು ಕೋಟೆಯನ್ನು ಮುತ್ತಲು ಹೊರಟಿದ್ದಾರೆ..." ಎಂದು ಹೇಳುವುದರಲ್ಲಿ ಸಾಕುಬೇಕಾಯಿತು ಆ ಪ್ರಾಣಿಗೆ. ಹುಸೇನಲ್ಲಿಯ ವಿಜಯಮದವೆಲ್ಲ ಝುರ್‍ರನೆ ಇಳಿದುಹೋಯಿತು 'ಯಾ ಅಲ್ಲಾ' ಎಂದು ತಲೆಯ ಮೇಲೆ ಕೈ ಇಟ್ಟುಕೊಂಡು ಕುಳಿತನು. ಮರುಕ್ಷಣದಲ್ಲಿ ಅವನ ದಂಡು ಮೈಸೂರಿನ ದಿಕ್ಕಿಗೆ ಧಾವಿಸುತ್ತಿತ್ತು.

೪

ಮಲವಳ್ಳಿಯಿಂದ ಅನಾಹುತ ಸುದ್ದಿ ಎರಡು ಮೂರು ದಿವಸಗಳ ನಂತರ ರಾಣಿಗೆ ತಿಳಿಯಿತು. 'ದೇವರ ಇಚ್ಛೆ' ಎಂದು ಅವಳು ಉಸು ಗರೆದಳು. ಟಿಪ್ಪುವಿನ ಸೈನಿಕರು ಅಷ್ಟು ಬೇಗ ಹಿಂದಿರುಗಿದ್ದರ ಮರ್ಮ ಅವಳಿಗೆ ಹೊಳೆಯಲಿಲ್ಲ. ಏನೇ ಆಗಲಿ ಶಾಂತಪ್ರಿಯರಾದ ತನ್ನ ಪ್ರಜೆಗಳಿಗೆ ತ್ರಾಸಾಗಲಿಲ್ಲವಲ್ಲ ಎಂದು ಒಂದು ಕ್ಷಣ ಅವಳಿಗೆ ಸಮಾಧಾನವಾಯಿತು.

ಯುದ್ಧದಲ್ಲಿ ಮಡಿದವರನ್ನೆಲ್ಲ ರಾಣಿಯೇ ಗೋರಿ ಮಾಡಿಸಿದಳು. ಕರ್ನಲ ಹಿಲ್ಲನ ಕಳೇಬರವನ್ನು ಮಾತ್ರ ಹೊನ್ನಾವರಕ್ಕೆ ತರಲಾಯಿತು.

ಹೊನ್ನಾವರದ ಬಳಿ ಗುಡ್ಡೆಯ ಮೇಲೆ ಅತ್ಯುನ್ನತವಾದ ಸ್ತಂಭವೊಂದು ಸಮುದ್ರವನ್ನು ಈಕ್ಷಿಸುತ್ತ ಸಾವಿರಾರು ಮೈಲಿಗಳಾಚೆ ಇರುವ ತನ್ನ ಮಾತೃಭೂಮಿಯನ್ನು ಕಾಣಲು ತವಕಿಸುತ್ತದೆಯೋ ಎಂಬಂತೆ ಆತುರಯುತವಾಗಿ ನಿಂತಿದೆ. ಅದೇ ಕರ್ನಲ ಹಿಲ್ಲನ ಸಮಾಧಿ ಸ್ತಂಭ!

—★

# ಬಲಿದಾನ

ಮೊನ್ನೆ ಬೇಸಿಗೆ ರಜೆಯನ್ನು ಹೇಗೆ ಕಳೆಯುಬೇಕೆಂಬ ಸಮಸ್ಯೆ ಹೊರಟಾಗ ನನ್ನ ಮಿತ್ರನಾದ ರಾಮೇಗೌಡನು ನನ್ನನ್ನು ಚಂದ್ರಹಳ್ಳಿಗೆ ಬರಲಿಕ್ಕೆ ಒತ್ತಾಯಪಡಿಸಿದನು. ಪಟ್ಟಣ ವಾಸದಿಂದ ಬಳಲಿದ ನಾನು ಹಳ್ಳಿಯ ಹವೆಯನ್ನು ಸೇವಿಸಿ ಅಭ್ಯಾಸಮಾಡಿ ಬಳಲಿದ ನನ್ನ ಮಿದುಳಿಗೆ ವಿಶ್ರಾಂತಿ ಕೊಡಲೆಣಿಸಿ, ರಾಮೇಗೌಡನ ಆಮಂತ್ರಣವನ್ನು ಸ್ವೀಕರಿಸಿದೆನು.

ಚಂದ್ರಹಳ್ಳಿಯು ಕಾನಡಾ ಜಿಲ್ಲೆಯ ಹಳವುಗಳ ಮಧ್ಯೆ ಇರುವ ಒಂದು ಗ್ರಾಮ. ಪಟ್ಟಣವು ಮನುಷ್ಯನ ಕೈವಾಡದ ಫಲ. ಆದರೆ ಗ್ರಾಮವು ದೇವನಿರ್ಮಾಣವು. ಸೃಷ್ಟಿದೇವತೆಯು ಗ್ರಾಮದಲ್ಲಿಯೇ ನಲಿದಾಡುತ್ತಿರುವಳು. ಚಂದ್ರಹಳ್ಳಿಯ ಸುತ್ತಲಿನ ಕಾಡು ದಟ್ಟವಾಗಿಯೂ ಎತ್ತರವಾಗಿಯೂ ಬೆಳೆದಿತ್ತು. ಗ್ರಾಮದ ಪೂರ್ವ ದಿಕ್ಕಿನಲ್ಲಿ ಗಗನ ಚುಂಬಿಯಾದ ಹಚ್ಚಗೆ ಒಪ್ಪುವ ಬೆಟ್ಟ. ಈ ಬೆಟ್ಟವು ಅನೇಕ ಕ್ರೂರ ಜಂತುಗಳ---ಅದರಲ್ಲೂ ಹುಲಿಗಳ ತವರುಮನೆಯಾಗಿತ್ತು. ಪ್ರತಿ ವರುಷ ಅಮಲ್ದಾರರು, ಇಲಾಖೆ ಸಾಹೇಬರು ಮೊದಲಾದವರು ಚಂದ್ರಹಳ್ಳಿಯ ಕಾಡಿಗೆ ಬೇಟೆಗಾಗಿ ಬರುತ್ತಿದ್ದರು.

ನಾನು ಚಂದ್ರಹಳ್ಳಿಯಲ್ಲಿ ಕೆಲವು ದಿನ ನೆಲಿಸಿದ್ದೆ. ಸೃಷ್ಟಿ ಸೌಂದರ್ಯವು ಅಪರಿಮಿತವಾದ ಆನಂದವನ್ನು ಅನಂತಕಾಲದ ವರೆಗೆ ಕೊಡಬಲ್ಲದೆಂದು ನನಗಲ್ಲಿಯೇ ತಿಳಿಯಿತು. ಆದರೆ ಒಂದು ದಿನ ಮಧ್ಯಾನ್ಹ ಹೊತ್ತೇ ಹೋಗಲಿಲ್ಲ. ಮನೆಯಲ್ಲಿ ಕುಳಿತು ಬೇಜಾರು ಬಂದಿತ್ತು. ರಾಮೇಗೌಡನನ್ನು ಕುರಿತು "ಚದುರಂಗವನ್ನಾದರೂ ಆಡೋಣ ಬಾರೊ. ಹಾಳು ಬೇಜಾರು ಬೇರೆ ಬರುತ್ತೆ" ಎಂದು ನುಡಿದೆ. "ಚದುರಂಗವನ್ನು ಆಡಿ ಪಾಂಡವರು ವನವಾಸಕ್ಕೆ ಹೋದದ್ದನ್ನು ಕೇಳಿಲ್ಲವೇ? ಅದಕ್ಕೋಸ್ಕರ ನಮ್ಮಲ್ಲಿ ವರ್ಷದಲ್ಲಿ ಕೆಲವು ದಿವಸಗಳನ್ನು ಬಿಟ್ಟು ಉಳಿದ ದಿವಸಗಳಲ್ಲಿ ಆ ಆಟವನ್ನೇ ಆಡೋದಿಲ್ಲ. ಭಗವದ್ಗೀತೆಯ ಪಾರಾಯಣ (ಇಸ್ಪೀಟು ಆಟ)ವಂತೂ ನನಗೆ ಬರೋದಿಲ್ಲ. ಕಾಡೊಳಗಾದರೂ ಹೋಗೋಣ" ಎಂದ. "ಆಯ್ತಪ್ಪ ನಿನ್ನ ಇಷ್ಟ" ಎಂದೆ.

ನಾವಿಬ್ಬರೂ ಹೊರಟೆವು. ರಾಮೇಗೌಡ ಊರ ಕೊನೆಯಲ್ಲಿರುವ ಒಂದು ಗುಡಿಸಲ ಮುಂದೆ ನಿಂತು "ಹೋ ತಿಮ್ಮಯ್ಯ" ಎಂದು ಕೂಗು ಹಾಕಿದ. ''ಏನು ಅದು ಒಡೆಯಾ?'' ಎನ್ನುತ್ತ ಸುಮಾರು ಮೂವತ್ತು ವರ್ಷದ ತರುಣನೊಬ್ಬನು ಗುಡಿಸಲದ ಬಿದಿರು ಬಾಗಿಲನ್ನು ನೂಕಿ ಹೊರಗೆ ಬಂದನು. ''ಧಾರವಾಡದಿಂದ ಬಂದಿದ್ದಾರೆ ಕಣೊ ಒಡೆಯರು. ಬೇಟೀಗ ಹೋಗ್ಬೇಕಂತೆ. ನಿನ್ನ ಕೋವಿ ತೆಗೆದುಕೊಂಡು ಹೊರಡು.'' ಎಂದು ರಾಮೇಗೌಡನು ನುಡಿದನು. ತಿಮ್ಮಯ್ಯನು ಕೊಂಚ ಹೊತ್ತಿನಲ್ಲಿ ಕೋವಿಯನ್ನು ಹೆಗಲಿಗೇರಿಸಿ ನಮ್ಮ ಮುಂದುಗಡೆ ಹೊರಟ.

ನಾವು ಮೂವರೂ ಬೆಟ್ಟವನ್ನೇರಿ ಕಾಡು ಸೇರಿದೆವು. ಬೆಟ್ಟದ ತುದಿಯಲ್ಲಿ ಬಲು ಎತ್ತರವಾದ ಮರದಮೇಲೆ ನಿಶಾನೆಯೊಂದು ಗಾಳಿಯಲ್ಲಿ 'ಫಟ್, ಫಟ್' ಧ್ವನಿಗೈಯ್ಯುತ್ತಿತ್ತು. ಆ ನಿಶಾನೆಯನ್ನು ಅಲ್ಲೇ ತಕ್ಕಿಟ್ಟಿದ್ದಾರೆಂದು ಕೇಳೋಣವೆಂದು ಮನಸ್ಸಾಯಿತು. ಆದರೆ ಮನೆಗೆ ಹೋಗಿ ಕೇಳಿವರಾಯಿತು. ಎಂದಿಷ್ಟೆ. ತಿಮ್ಮಯ್ಯ ತಪ್ಪನೆ ನಿಂತು ಕಿವಿಗೊಟ್ಟನು. ನಾವಿಬ್ಬರೂ ಸ್ತಬ್ಧರಾದೆವು. "ಅದೊಂದು ಕಾಡುಗೋಳಿಯೊಂದು ಕಾಣ್ತೈತೆ'' ಎಂದು ತಿಮ್ಮಯ್ಯ ನುಡಿದ. ನಾವು ಮೂವರೂ ಒಂದು ಗಿಡದ ಮರೆಗೆ ನಿಂತೆವು. ತಿಮ್ಮಯ್ಯನು ಕೋವಿಯನ್ನೆತ್ತಿಕೊಂಡು ಸಿದ್ಧನಾದನು. ನಾನು ನೋಡುತ್ತಿರುವಾಗಲೇ ನಮ್ಮಿಂದ ಸುಮಾರು ಒಂದರ್ಧ ಫರ್ಲಾಂಗು ದೂರದಲ್ಲಿ ಕಾಡು ಹುಂಜವೊಂದು ಕಂಟಿಗಳೊಳಗಿಂದ ಹೊರಬಿತ್ತು. ಮುಂದಾಗುವ ದುರ್ದೆಶೆಯನ್ನರಿಯದೆ ಗರ್ವದಿಂದ, ಠೀವಿಯಿಂದ, ಸಡಗರದಿಂದ ಹೆಜ್ಜೆಯಿಡುತ್ತಿತ್ತು. ಒಮ್ಮೆಲೆ ಮರದ ಎಲೆಗಳು ಉದಿರಿಬಿದ್ದ ಸಪ್ಪಳವಾಯಿತು. ಏನೋ ಗಂಡಾಂತರ ವಿದೆಯೆಂದು ಬಗೆದು ಹುಂಜವು ಓಟಕಿತ್ತಿತು. ಅದು ನಮ್ಮ ಕೈಗೆ ಸಿಗಲಾರದೆಂದು ನಾನು ನಿರಾಶನಾದೆ. ಹಠಾತ್ತಾಗಿ 'ಢಮ್' ಎಂಬ ಕರ್ಣಕಠೋರವಾದ ಶಬ್ದವೊಂದು ಕೇಳಬಂತು. ಮರುಕ್ಷಣದಲ್ಲಿಯೇ ಹುಂಜವು ಭೂಮಿಗುರುಳಿತ್ತು. ನಾನು ತಿಮ್ಮಯ್ಯನ ಕಡೆ ನೋಡಿದೆ. ಅವನ ಕೋವಿಯ ನಳಿಕೆಯೊಳಗಿಂದ ಹೊಗೆಯಿನ್ನೂ ಹೊರಡುತ್ತಿತ್ತು. ಅವನ ಕಣ್ಣುಗಳು ಆನಂದದಿಂದ ವಿಜಯದಿಂದ ಅರಳಿದ್ದವು. ಮರು

ಕ್ಷಣದಲ್ಲಿಯೇ ಅವನು ಕೋವಿಯನ್ನು ಕೆಳಗಿಳಿಸಿದ. ಜೆಟ್ಟಿವ ಮೇಲಿನ ಗಿಡದ ಮೇಲಿದ್ದ ನಿಶಾನೆಯ ಕಡೆಗೆ ತಿರುಗಿ ಅದಕ್ಕೆ ತಲೆಬಾಗಿ ವಂದಿಸಿದ. ಅವನ ಕಣ್ಣುಗಳೆರಡರಲ್ಲೂ ನೀರು ತುಂಬಿ ಬಂತು. ನನಗೆ ಅದು ಅರ್ಥವಾಗಲಿಲ್ಲ. ''ಎಂತಹ ಉತ್ತಮ ಗುರಿಗಾರನಯ್ಯ. ನಾಗಾಲೋಟದಿಂದ ಓಡುತ್ತಿರುವ ಹುಂಜವನ್ನೂ ಹೊಡೆದುಬಿಟ್ಟ'' ಎಂದು ನುಡಿದೆ. ''ತಂದೆಯಂತೆ ಮಗ. ತಂದೆಯ ಕೌಶಲ್ಯವೇ ಮಗನಲ್ಲಿ ಕಂಡುಬರುತ್ತದೆ'' ಎಂದು ರಾಮೇಗೌಡನು ನುಡಿದ. ತಿಮ್ಮನ ಎದೆಯೊಳಗಿಂದ ಆಳವಾದ ಉಸಿರೊಂದು ಹೊರಬಿದ್ದು ಆ ಕಾಡಿನ ಹವೆಯಲ್ಲಿ ಲೀನವಾಯಿತು.

೨

ರಾತ್ರಿ ಊಟವಾದಮೇಲೆ ನಾನು, ರಾಮೇಗೌಡ ಕುಳಿತುಕೊಂಡಿದ್ದೆವು. ಆಗ ನಾನು ''ರಾಮಯ್ಯ ಆ ನಿಶಾನೆ ಅಲ್ಲೇತಕ್ಕಿಟ್ಟಿದ್ದಾರೆ? ತಿಮ್ಮಯ್ಯನಿಗೆ ಗುರಿಹೊಡೆದ ಕೂಡಲೇ ದುಃಖವಾದುದು ಏತಕ್ಕೆ? ಅವನು ಏತಕ್ಕೋಸ್ಕರ ಆ ನಿಶಾನೆಗೆ ವಂದಿಸಿದ?'' ಎಂದು ಪ್ರಶ್ನೆಗಳ ಸುರಿಮಳೆಯನ್ನೇ ಕರೆದು ಬಿಟ್ಟೆ. ರಾಮೇಗೌಡನು ನಿಧಾನವಾಗಿ ವಿವರಿಸತೊಡಗಿದನು.

"ಈ ತಿಮ್ಮಯ್ಯನ ತಂದೆಯ ಹೆಸರು ಅಪ್ಪಯ್ಯನೆಂದು. ನಮ್ಮ ನಾಡಿನಲ್ಲೆಲ್ಲ ಅವನಂತೆ ಗುರಿಹೊಡೆಯುವವರು ಮತ್ತೊಬ್ಬರಿದ್ದಿಲ್ಲ. ಇದೇ ಚಂದ್ರಹಳ್ಳಿ ಕಾಡಿನಲ್ಲಿಯೇ ಅವನು ನೂರಾರು ನೂರಾರು ಹುಲಿಗಳನ್ನು ಹೊಡೆದನು. ಅವನ ಕೈ ಚಮತ್ಕೃತಿಯ ಬಗ್ಗೆ ಒಂದು ದೃಷ್ಟಾಂತವನ್ನು ಹೇಳುತ್ತೇನೆ. ಒಮ್ಮೆ ಬೈಲು ಸೀಮೆಯ ಸಾಹೇಬರೊಬ್ಬರು ಬೇಟೆಯಾಡಲಿಕ್ಕೆಂದು ಈ ಕಾಡಿಗೆ ಬಂದರು. ಅವರೂ ಗುರಿಹೊಡೆಯುವದರಲ್ಲಿ ಬಲು ಗಟ್ಟಿಗರಂತೆ. ನಾಗಾಲೋಟದಿಂದ ಓಡುತ್ತಿರುವಂಥ ಎರಳೆಯನ್ನು ಒಂದೇ ಗುಂಡಿನಿಂದ ಕೊಲ್ಲುತ್ತಿದ್ದರಂತೆ. ಅವರು ಇಲ್ಲಿಗೆ ಬಂದ ಹೊತ್ತಿಗೆ ಸರಿಯಾಗಿ ನಮ್ಮೂರ ಕಾಡಿನಲ್ಲಿ ಒಂದು ಹೆಬ್ಬುಲಿಯು ಸೇರಿಕೊಂಡಿತ್ತು. ಅದನ್ನು ಬೇಟೆಯಾಡಬೇಕೆಂದು ನಮ್ಮ ಕೆಂಪು ಸಾಹೇಬರು ನಿಶ್ಚಯಿಸಿದರು. ಅಡವಿಯಲ್ಲಿ ಒಂದು ಎತ್ತರವಾದ ಮರ

ವನ್ನು ನೋಡಿ, ಅದಕ್ಕೆ ತೊಟ್ಟಿಲನ್ನು ಕಟ್ಟಿಸಿ ಅದರಲ್ಲಿ ಕುಳಿತುಕೊಂಡು ಹುಲಿಯನ್ನು ಹೊಡೆಯಬೇಕೆಂದು ಎತ್ತುಗಡೆ ಮಾಡಿದರು. ಅಪ್ಪಯ್ಯ ಅದನ್ನು ನೋಡಿ 'ಇಷ್ಟು ಸಣ್ಣ ಹುಲಿಗೆಲ್ಲಾ ತೊಟ್ಟಿಲ್ಯಾಕೆ? ಸುಮ್ಮಗೆ ಎದುರಿಗೆ ಹೋಗಿ ಹೊಡೀಬಾರದೆ?' ಎಂದು ನುಡಿದನು. ಅದನ್ನು ಕೇಳಿ ಅವನೊಬ್ಬ ಹಳ್ಳಿಯ ಮುಢ್ಢನೆಂದು ತಿಳಿದು ಅವರು ನಕ್ಕುಬಿಟ್ಟರು. ಒಂದು ದಿನ ಸೂರ್ಯಾಸ್ತ ಸಮಯದಲ್ಲಿ ಸಾಹೇಬರು ತೊಟ್ಟಿಲನ್ನೇರಿ ಕುಳಿತರು. ಸ್ವಲ್ಪ ದೂರದಲ್ಲಿಯ ಮರಕ್ಕೆ ಒಂದು ಮೇಕೆಯನ್ನು ಕಟ್ಟಿದ್ದರು. ಅದನ್ನು ತಿನ್ನಲಿಕ್ಕೆ ಹುಲಿಯು ಬರುವ ಹಾದಿಯನ್ನು ನೋಡುತ್ತ ಸಾಹೇಬರು ಕುಳಿತುಕೊಂಡರು. ಪರಿವಾರದವರೆಲ್ಲರನ್ನೂ ದೂರದಲ್ಲಿರುವಂತೆ ತಿಳಿಸಿದರು.

ಸ್ವಲ್ಪ ಹೊತ್ತಿನ ನಂತರ ಗರ್ಜಿಸುತ್ತ ಆ ಹುಲಿಯು ಬಂದಿತು. ಅದರ ಬೊಬ್ಬಾಟವನ್ನೂ ಘೋರ ರೂಪವನ್ನೂ ಕಂಡು ಎರಳೆಯ ಬೇಟೆಯಲ್ಲಿ ನಿಷ್ಣಾತರಾದ ಸಾಹೇಬರಿಗೆ ಸ್ವಲ್ಪ ಗಾಬರಿಯಾಯಿತು. ಅವರ ದುರ್ದೈವಕ್ಕೆ ಸರಿಯಾಗಿ ಹುಲಿಯು ಮೇಕೆಯ ಮರಿಯನ್ನು ತಿನ್ನದೆ ಇವರ ಗಿಡದ ಕಡೆಗೆಯೇ ಬಂತು. ಯಾಕಂದರೆ ನಮ್ಮ ಕಡೆ ಹುಲಿಯ ಬೇಟೆಗೆ ತೊಟ್ಟಿಲು ಕಟ್ಟುವ ಸಂಪ್ರದಾಯವಿಲ್ಲ. ತೊಟ್ಟಿಲಿನಲ್ಲಿ ಕುಳಿತಿರುವ ಕೆಂಪು ಪ್ರಾಣಿಯನ್ನು ಕಂಡು ಹುಲಿಗೂ ಕೂಡ ವಿಚಿತ್ರವೆನಿಸಿರಬೇಕು. ಅದಕ್ಕೇನೇ ಅದು ಇವರ ಗಿಡದ ಕಡೆಗೆ ಬಂದಿತು. ಅವರ ಕೈಯಲ್ಲಿದ್ದ ಕೋವಿಯನ್ನು ಕಂಡು, ಅವರನ್ನು ವೈರಿಯೆಂದು ಭಾವಿಸಿ ತೊಟ್ಟಿಲದ ಕಡೆ ಹಾರತೊಡಗಿತು. ಅದನ್ನು ನೋಡಿದ ಕೂಡಲೇ ಸಾಹೇಬರ ಕೈಕಾಲೇ ಹೋದವು. ಅವರು ಹಾರಿಸಿದ ಗುಂಡಿನ ಗುರಿಯು ತಪ್ಪಿಹೋಯಿತು. ಗಾಬರಿಯಿಂದ ಅವರ ಕೈಯಲ್ಲಿದ್ದ ಕೋವಿ ಜಾರಿ ಕೆಳಗೆ ಬಿತ್ತು. 'ಬೆಕ್ಕಿಗೆ ಆಟ ಇಲಿಗೆ ಪ್ರಾಣಸಂಕಟ'. ಕತ್ತಲೆಯಾಗುತ್ತ ಬಂದಿತ್ತು. ದೂರದಲ್ಲಿದ್ದ ಪರಿವಾರದವರು ಹುಲಿಯ ಘರ್ಜನೆ ಕೇಳಿ ಕಾಲಿಗೆ ಬುದ್ಧೀ ಹೇಳಿದರು. ಪಾಪ ಅವರು ಬೈಲುಸೀಮೆಯವರು. ಹುಲಿಯನ್ನೇ ಕಂಡರಿಯರು. ಸಾಹೇಬರಿಗೆ ನಡುಕ ಹತ್ತಿ ಅವರು ಯೇಸು ಕ್ರಿಸ್ತನ ಮೊರೆಹೊಕ್ಕರು. ಅಷ್ಟು ಹೊತ್ತಿಗೆ ಸರಿಯಾಗಿ

ಸಮೀಪದ ಗಿಡದ ಮರೆಯಿಂದ ಒಂದು ವ್ಯಕ್ತಿಯು ಹೊರಗೆ ಬಂದಿತು. ಹುಲಿಯು ಆ ವ್ಯಕ್ತಿಯನ್ನು ತೋಡಿ ಅವರ ಮೇಲೆ ಧುಮುಕುವಷ್ಟರಲ್ಲಿಯೇ, ಆ ವ್ಯಕ್ತಿಯ ಕೈಯೊಳಗಿನ ಕೋವಿಯೊಳಗಿಂದ ಒಂದು ಗುಂಡು ಹೊರಟು ಆ ಹುಲಿಯ ಹಣೆಯನ್ನು ಸೀಳಿತು. ಹುಲಿಯು ನಾಲ್ಕು ಮಾರು ದೂರ ಸಿಡಿದುಬಿದ್ದಿತು. ಸಾಹೇಬರು ಕಣ್ಣು ಕಣ್ಣು ಬಿಟ್ಟರು. ಆ ವ್ಯಕ್ತಿಯೇ ನಮ್ಮ ಅಪ್ಪಯ್ಯ. ಸಾಹೇಬರ ಕೈಚಳಕವನ್ನು ನೋಡಲು ಅಲ್ಲಿ ಬಂದು ನಿಂತಿದ್ದನಂತೆ. ಸಾಹೇಬರು ಮರುದಿವಸವೇ ಗಂಟುಗಡಡಿಯೊಂದಿಗೆ ಚಂದ್ರಹಳ್ಳಿಯನ್ನು ಬಿಟ್ಟು ಹೊರಟರು. ಹೋಗುವಾಗ ಅಪ್ಪಯ್ಯನಿಗೆ ತಮ್ಮ ಸ್ವಂತ ಕೋವಿಯನ್ನೂ ಇಪ್ಪತ್ತೈದು ರೂಪಾಯಿಗಳನ್ನೂ ಕಾಣಿಕೆಯಾಗಿ ಕೊಟ್ಟರು.

“ಹೀಗಿರಲು ಒಮ್ಮೆ ಒಂದು ಕಾಡಾನೆಯು ಹಿಂಡಿನಿಂದ ಹೇಗೋ ತಪ್ಪಿಸಿಕೊಂಡು ನಮ್ಮೂರ ಕಾಡನ್ನು ಸೇರಿತು. ಕಟ್ಟಿಗೆ ತರಲು ಬೆಟ್ಟಕ್ಕೆ ಹೋದವನೊಬ್ಬನು ಈ ಆನೆಯ ಕೈಯಲ್ಲಿ ಸಿಲುಕಿ ಪರಲೋಕವನ್ನು ಕಂಡನು. ಈ ಸುದ್ದಿಯನ್ನು ಕೇಳಿದ ಕೂಡಲೇ ನಮ್ಮೂರ ಆಬಾಲವೃದ್ಧರೆಲ್ಲರ ಜೀವವೂ ನೆತ್ತಿಯಿಂದಲೇ ಹಾರಿಹೋಯಿತು. ಜನರ ವ್ಯಾಪಾರಗಳೆಲ್ಲವೂ ನಿಂತುಹೋದವು. ಊರನ್ನು ಬಿಟ್ಟು ಹೊರಡಲಿಕ್ಕೆ ಜನರಿಗೆ ಧೈರ್ಯವಿಲ್ಲದಾಯಿತು. ಆನೆಯನ್ನು ಹೊಡೆಯುವವರು ನಮ್ಮೂರಲ್ಲಂತೂ ಯಾರೂ ಇದ್ದಿಲ್ಲ. ಅಪ್ಪಯ್ಯನಿಗೂ ತಾನು ಅದನ್ನು ಹೊಡೆಯುವೆನೆಂಬ ಧೈರ್ಯವಿದ್ದಿಲ್ಲ. ಹೀಗೆ ಐದಾರು ದಿನಗಳು ಕಳೆಯಲು ಒಂದು ದಿನ ಚಂದ್ರಹಳ್ಳಿಯ ಸಮೀಪದಲ್ಲಿಯೇ ಆನೆಯ ಸುಳಿವು ಕಂಡುಬಂತು. ಅಪ್ಪಯ್ಯನ ಮನೆಯು ಊರ ಹೊರಗಡೆ ಇರುವದಷ್ಟೆ! ಅವನಿಗೆ ಆನೆಯ ಚೀತ್ಕಾರವು ಚನ್ನಾಗಿ ಕೇಳಬಂತು. ಆಗಮಾತ್ರ ಅವನು ತಡೆಯದಾದನು. ತಾನು ಆಗ ಅದನ್ನು ತಡೆಯದಿದ್ದರೆ ಅದು ಊರೊಳಗೆ ನುಗ್ಗುವದೆಂದು ಭಯಪಟ್ಟನು. ಕೂಡಲೇ ಎರಡು ನಳಿಕೆಯ ಕೋವಿಯನ್ನು ಸಜ್ಜುಮಾಡಿಕೊಂಡ. ಹೆಗಲಿಗೇರಿಸಿ ಕಾಡೊಳಗೆ ನಡೆದನು. ಊರ ಜನರೆಲ್ಲರೂ ಗೋಳಾಡಿ ಅವನು ಹೋಗಕೂಡದೆಂದು ಅಡ್ಡಿ ಮಾಡಿದರು. ಆದರೆ ಅವನು ಕೇಳಲಿಲ್ಲ. ಇಡೀ ಊರ ಸಲು

ವಾಗಿ ತಾನೊಬ್ಬ ಬಲಿದಾನ ಮಾಡಲು ಸಿದ್ಧನಿರುವೆನೆಂದೂ ತಾನೊಂದು ವೇಳೆ ಸತ್ತರೆ ತನ್ನ ಹೆಣವನ್ನು ಬೆಟ್ಟದ ಮೇಲೆಯೇ ಸಮಾಧಿ ಮಾಡ ಬೇಕೆಂದೂ ಹೇಳಿ ನಡೆದನು.


ಆ ದಿವಸ ನಮ್ಮೂರಿನವರ ಕಣ್ಣು ಮತ್ತು ಕಿವಿಗಳು ಕಾಡಿನ ಕಡೆ ಗೆಯೇ ಇದ್ದವು. ಮಧ್ಯಾಹ್ನ ಎಂಟು ತಾಸಿನ ಸುಮಾರಕ್ಕೆ ಬೆಟ್ಟದ ಮೇಲಿಲ್ಲೊ ಎರಡು ಬಾರಿ ಗುಂಡನ್ನು ಹಾರಿಸಿದ ಶಬ್ದವು ಕೇಳಬಂತು. ಆ ಶಬ್ದದೊಂದಿಗೆ ಕೋಪದಿಂದ ಪ್ರಜ್ವಲಿಸಿದ ಆನೆಯು ಕರ್ಣಕಠೋರ ವಾದ ಚೀತ್ಕಾರವೂ ಕೇಳಿಬಂತು. ಆ ಚೀತ್ಕಾರವು ಕ್ರಮಶಃ ಸಣ್ಣದಾಗಿ ಕೊನೆಗೆ ಸ್ತಬ್ಧವಾಯಿತು.

ಸಂಜೆಯಾದರೂ ಅಪ್ಪಯ್ಯನು ಹಿಂದಿರುಗಲಿಲ್ಲ. ಆಗ ನಮ್ಮೂರ ತರುಣರೆಲ್ಲರೂ ಕೂಡಿಕೊಂಡು ಕೋವಿ ಮತ್ತು ಅನೇಕ ಆಯುಧಗ ಳೊಂದಿಗೆ ಕಾಡಿನಲ್ಲಿ ಹೊರಟರು. ಅವರು ಕಾಡಿನ ಪ್ರತಿಯೊಂದು ಭಾಗವನ್ನೂ ಅರಸುತ್ತ ಬಂದರು. ನೀನು ಆಗ ಒಂದು ಗಿಡದ ಮೇಲೆ ಒಂದು ನಿಶಾನೆಯನ್ನು ನೋಡಿದೆಯಲ್ಲ. ಆ ಗಿಡದ ಬುಡದಲ್ಲಿಯೇ ಅಪ್ಪಯ್ಯನ ದೇಹವು ಬಿದ್ದಿತ್ತು. ಆನೆಯು ಸಿಟ್ಟಿನಿಂದ ತುಳಿದಿದ್ದರಿಂದ ಅವನ ಅಂಗಾಂಗಗಳೆಲ್ಲವೂ ಪುಡಿಯಾಗಿದ್ದವು. ಅವನ ಪಕ್ಕದಲ್ಲಿಯೇ ಅವನ ಕೋವಿಯು ಬರಿದಾಗಿ ಬಿದ್ದಿತ್ತು. ಕಾಡೆಲ್ಲವೂ ರಕ್ತದಿಂದ ತುಂಬಿದ್ದಿತು. ಅದು ಆನೆಯ ರಕ್ತವಿರಬೇಕೆಂದು ಊಹಿಸಿ ಕೆಲವರು ಆ ರಕ್ತದ ಗುಂಟ ಹೋದರು. ನಮ್ಮೂರಿಂದ ಸುಮಾರು ಐದು ಮೈಲು ದೂರದಲ್ಲಿ ಆ ಆನೆಯು ಸತ್ತುಬಿದ್ದಿತ್ತು. ಅಪ್ಪಯ್ಯನ ಗುಂಡುಗಳ ಹೊಡೆತವು ಆನೆಯ ಗಂಡಸ್ಥಳಕ್ಕೆ ತಾಗಿದ್ದಿತು. ಅದು ಆಯಕಟ್ಟಿನ ಸ್ಥಳವಾದದ್ದರಿಂದಲೇ ಆನೆಯು ಸತ್ತಿತ್ತು. ಆದರೆ ಅಪ್ಪಯ್ಯನಿಗೂ ಬದು ಕುವ ಯೋಗವಿರಲಿಲ್ಲ. ಅವನು ಆನೆಯ ಬೇಟೆಯಾಡಿದರೆ, ಆನೆಯು ಅವನ ಬೇಟೆಯಾಡಿತು.

ಅಪ್ಪಯ್ಯನ ಅಂತಿಮ ಇಚ್ಛೆಯಂತೆ ಅವನನ್ನು ಅವನು ಸತ್ತ ಸ್ಥಳ ದಲ್ಲಿಯೇ ಹೂಳಿದರು. ಅವನ ನೆನಪಿಗಾಗಿ ಅವನ ಸಮಾಧಿಯ ಹತ್ತಿ ರದ ಗಿಡದ ಮೇಲೆ ಆ ನಿಶಾನೆಯನ್ನು ನಿಲ್ಲಿಸಿದ್ದಾರೆ.

ತಿಮ್ಮಯ್ಯನೇ ಅಪ್ಪಯ್ಯನ ವಂಶೋದ್ಧಾರಕ ಮಗ, ಸಿಂಹದ ಹೊಟ್ಟೆಯಲ್ಲಿ ಜಂಬೂಕವು ಹುಟ್ಟಲಾರದು. ಕೋಳಿಯನ್ನು ಹೊಡೆದ ಕೂಡಲೇ ಅವನಿಗೆ ಅಪ್ಪಯ್ಯನ ನೆನಪಾಯಿತು. ‘ನಾನು ಇಂಥ ಗುರಿ ಹೊಡೆಯುವುದು ನಿನ್ನ ಆಶೀರ್ವಾದ ಬಲದಿಂದ’ ಎಂದು ಆ ನಿಶಾನೆಗೆ ಕೈಮುಗಿದ. ತಂದೆಯ ನೆನಪಿನಿಂದ ಅವನ ಕಣ್ಣಲ್ಲಿ ನೀರುತುಂಬಿ ಬಂತು. ಹೂಂ, ಮಧ್ಯರಾತ್ರಿಯಾಯಿತೆಂದು ಕಾಣುತ್ತೆ. ನಾವಿನ್ನು ಮಲಗುವಾ” ಎಂದು ನಿಟ್ಟುಸಿರಿನೊಡನೆ ರಾಮಯ್ಯ ಮೇಲಕ್ಕೆದ್ದ.

ನನಗೆ ತಿಳಿಯದಂತೆಯೇ ನನ್ನ ಕಣ್ಣುಗಳೂ ಸ್ವಲ್ಪ ಒದ್ದೆಯಾಗಿದ್ದವು.



# ನಂಜುಂಡ

ನಮ್ಮೂರಲ್ಲಿ ನಮ್ಮ ಕೇರಿಗೆ ಒಂದು ವಿಶಿಷ್ಟ ಸ್ಥಾನವಿದೆ. ಏಕೆಂದರೆ ಊರಲ್ಲಿ ಪ್ರಸಿದ್ಧರಾದವರೆಲ್ಲ ನಮ್ಮ ಕೇರಿಯಲ್ಲಿಯೇ ಉಂಟು. ವಿದ್ಯೆಯಲ್ಲಿ ಹೆಸರಾದವರು ಬೇಕೆ? ಆಚೆ ಮನೆ ರಾಮರಾಯರ ಹುಡುಗ ಮೆಟ್ರಿಕ್ ಪರೀಕ್ಷೆಯಲ್ಲಿ ಇಡೀ ಮುಂಬಯಿ ವಿಶ್ವವಿದ್ಯಾಲಯಕ್ಕೇ ಮೊದಲನೇ ನಂಬರು ಬಂದ. ಸಂಸ್ಕೃತ ಪಂಡಿತರು ಬೇಕೆ? ನಮ್ಮ ಕೇರಿಯ ರಾಮಭಟ್ಟರ ಮಕ್ಕಳಿಬ್ಬರೂ ಮೈಸೂರು ಪಾಠಶಾಲೆಯಲ್ಲಿ ಅಖಂಡ ಹನ್ನೆರಡು ವರುಷ ಕಲಿತು ಮೇಲ್ನಂಬರು ಬಂದು ಮಹಾರಾಜರಿಂದ ಪಟ್ಟಿಯ ಬಹುಮಾನವನ್ನು ಹೊಂದಿದ್ದಾರೆ. ದೇವು ಭಟ್ಟನಷ್ಟು ಪರೋಪಕಾರಿಯಾದ ಮನುಷ್ಯ ಇನ್ನೊಬ್ಬ ಹುಟ್ಟಲಿಲ್ಲ. ಎಲ್ಲಿಯಾದರು ಲಗ್ನವಾದರೆ ಪಾಕಶಾಲೆಯ ಆಧಿಪತ್ಯ ಅವನದು. ಎಲ್ಲಿಯಾದರೂ ಯಾರಾದರೂ ಸತ್ತರೆ ಅಲ್ಲಿಯೂ ಅವನು ಸಿದ್ಧ. ಇದುವರೆಗೆ ನಾನು ಒಂದು ಸಾವಿರ ಲಗ್ನವನ್ನು ಮಾಡಿದ್ದೇನೆ. ಅಷ್ಟೇ ಹೆಣವನ್ನು ಸುಟ್ಟಿದ್ದೇನೆ. ಎಂದು ಅವನು ಆತ್ಮತೃಪ್ತಿಯಿಂದ ಹೇಳುತ್ತಿದ್ದ. ಅವೆರಡರಲ್ಲೂ ಅವನಿಗೆ ಬೇಧವೇ ಇರಲಿಲ್ಲ. ಅವನ ಪಾಲಿಗೆ ಅವೆರಡೂ ಪರರಿಗೆ ಮಾಡುವ ಸಹಾಯಗಳು ಅಷ್ಟೇ! ನಮ್ಮೂರಿನ ಕುಬೇರನೆನಿಸಿಕೊಳ್ಳುವ ಕರಿಶಾನಭಾಗರ ಮೂರುಪ್ಪರಿಗೆಯ ಮನೆಯಿರುವದೂ ನಮ್ಮ ಕೇರಿಯಲ್ಲಿಯೇ, ದೈತ್ಯವೇಷ ಮಾಡುವದರಲ್ಲಿ ಹೆಸರಾದ ಶಂಭುವೂ ನಮ್ಮ ಕೇರಿಯವನೇ...ಊರಿದ್ದಲ್ಲಿ ಹೊಲಗೇರಿಯೂ ಇರಬೇಕಷ್ಟೇ. ನಮ್ಮ ತಾಲೂಕಿನ ಪೋಲೀಸ ಖಾತೆಯಿಂದ 'ಪಕ್ಕಾಪೋಕರಿ' ಎಂದು ಬಿರುದು ಸಂಪಾದಿಸಿದ ನಂಜುಂಡನೂ ನಮ್ಮ ಕೇರಿಯಲ್ಲಿಯೇ ಇದ್ದಾನೆ!

ನಂಜುಂಡನ ವಿಷಯ ಏನೂ ಹೇಳದೆಯೇ ಅವನನ್ನು ಪೋಕರಿಯೆಂದು ಕರೆದರೆ ನೀವು ಒಪ್ಪುವುದಿಲ್ಲ. ನಿಜವಾಗಿ ನೋಡಿದರೆ ಅವನು ಪೋಕರಿಗಳ ಸಾಲಿಗೆ ಸೇರತಕ್ಕವನೇ ಅಲ್ಲ. ನಮ್ಮೂರಲ್ಲಿ ಮೊಟ್ಟಮೊದಲು ಮುಲ್ಕಿ ಪರೀಕ್ಷೆಗೆ ಕೂತು ಪಾಸಾದವರಲ್ಲಿ ಅವನೂ ಒಬ್ಬ. ಆಗ ಮುಲ್ಕಿ ಪರೀಕ್ಷೆ ಪಾಸಾದರೆ ಶಾನಭೋಗನಾಗಿ ಅದೆಷ್ಟೋ ವರುಷ ಕೆಲಸ ಸಿಗುವದಂತೂ ಖಾತ್ರಿಯಿತ್ತು. ಸರಿ, ಇವನೂ ಶಾನಭೋಗನಾಗಿ ಅದೆಷ್ಟೋ ವರುಷ ಕೆಲಸಮಾಡಿದ. ಒಮ್ಮೆ ತಮಗೆ ಸಿಗುವ ಪಗಾರು

ಸಾಲದೆಂದೂ ಅದನ್ನು ಹೆಚ್ಚಿಸಬೇಕೆಂದೂ ನಮ್ಮ ಪ್ರಾಂತದ ಶಾನಭಾಗರೆಲ್ಲ ಸಂಪು ಮಾಡಿದರು. ಆದರೆ ಇಂತಹ ಅಸಹಕಾರಗಳನ್ನು ಮುರಿಯಲು ಸರಕಾರಕ್ಕೆ ಕಲಿಸಬೇಕೆ? ಸಂಪು ಹೂಡಿದವರನ್ನೆಲ್ಲ ಮನೆಗೆ ಕಳಿಸಿ ಉಳಿದವರ ಪಗಾರನ್ನು ಹೆಚ್ಚಿಸಿದರು. ಸಂಪು ಯಶಸ್ವಿಯಾದರೂ ಮನೆಗೆ ಬಂದವರಲ್ಲಿ ನಂಜುಂಡನೂ ಒಬ್ಬ. 'ಸರಿ, ಹೊಟ್ಟೆಯ ಸಲುವಾಗಿ ಏನಾದರೂ ಉದ್ಯೋಗ ಮಾಡಬೇಕಷ್ಟೇ. ನನಗೆ ಸಾಧ್ಯವಿದ್ದ ಉದ್ಯೋಗ ನಾನು ಕೈಕೊಂಡೆ. ಅದು ಸರಕಾರದ ಮನಸ್ಸಿಗೆ ಬರಲಿಲ್ಲ. ಅದಕ್ಕೆ ನಾನೇನು ಮಾಡಲಿ?' ಎಂದು ನಂಜುಂಡ ಕೇಳುವ ಪ್ರಶ್ನೆಗೆ ಉತ್ತರ ಕೊಡಲು ಸಾಧ್ಯವೇ ಇಲ್ಲ.

ಅರಿಯದವರು ಯಾರಾದರೂ ನಂಜುಂಡನನ್ನು ನೋಡಿದರೆ ಅವನೊಬ್ಬ ದೇಶಸೇವಕನೆಂದೇ ಭಾವಿಸಿಕೊಳ್ಳಬೇಕು. ಮೈಯಲ್ಲಿ ಧರಿಸುವದು ಅತಿ ಶುಭ್ರವಾದ ಖಾದಿ ಧೋತ್ರ ಮತ್ತು ಶರ್ಟ. ಪ್ರತಿ ನಿತ್ಯವೂ ಅದನ್ನು ೫೦೧ ಸೋಪಿನಿಂದ ಸ್ವಚ್ಛವಾಗಿ ತೊಳೆಯಬೇಕು. ಕೊಂಚ ನರೆಯುತ್ತಿರುವ ಕೂದಲಿಗೂ, ಬಿಳೀ ಮುಖಕ್ಕೂ, ಈ ಬಿಳೀ ಬಟ್ಟೆಗಳು ಸರಿಯಾಗಿ ಹೊಂದಿಕೊಳ್ಳುವವು. ಬಲಗೈಲೊಂದು ಬೆತ್ತ. ಎಡಗೈಯಲ್ಲಿ ಶುಭ್ರವಾದ ಬಿಳೀ ಕರವಸ್ತ್ರದಿಂದ ಸುತ್ತಿದ ಒಂದು ಗಂಟು. ಈ ಗಂಟಿನಲ್ಲಿರುವದು ಒಂದು ಬೆಂಕಿಪೆಟ್ಟಿಗೆ ಮತ್ತು ಕೆಲವು ಬೀಡಿಗಳು. ನಂಜುಂಡನ ಈ ವೇಷ ನೋಡಿಬಿಟ್ಟರೆ ಎಂಥವರೂ ಮರುಳಾಗಬೇಕು.

ಮೊನ್ನೆ ಆದ ಜನಗಣನೆಯ ಸಮಯಕ್ಕೆ ಮನೆಗೆ ಬಂದ ಆಫೀಸರನು 'ನಿಮ್ಮ ಉದ್ಯೋಗವೇನು?' ಎಂದು ನಂಜುಂಡನನ್ನು ಕೇಳಿದಾಗ ನಂಜುಂಡ ತಟ್ಟನೆ ಉತ್ತರ ಕೊಟ್ಟ 'ಉದ್ಯೋಗ? ನನಗೇಕಯ್ಯ ಉದ್ಯೋಗ? ನಾನೇನು ಹೆಂಡರು ಮಕ್ಕಳ ಹೊಟ್ಟೆಹೊರೆಯುವದಿದೆಯೇ? ಇರುವವ ನಾನೊಬ್ಬ. ಎಲ್ಲಿಯೋ ದೂರದ ಸಂಬಂಧದ ಅಜ್ಜಿಯೊಬ್ಬಳು ನನ್ನ ಹೆಸರಿಗೆಂದು ಬರೆದಿಟ್ಟ ಕೆಲವು ಭೂಮಿಯುಂಟು. ಮನೆ ಮುಂದಿರುವ ತೆಂಗಿನ ಮರಗಳಲ್ಲಿ ದೇವರು ಕೊಡುವ ಕಾಯಿಗಳುಂಟು. ನನಗೆಷ್ಟು ಬೇಕು?...ಇದ್ದಷ್ಟು ತಿಂದು ಪಾರಾಯಣ

ಮಾಡುತ್ತಿರುವುದೇ ನನ್ನ ಉದ್ಯೋಗ.' ಅವನಿಗೆ ಏನು ಬರೆದುಕೊಳ ಬೇಕೆಂದೇ ತಿಳಿಯಲಿಲ್ಲ. ಕೊನೆಗೆ 'ಉದ್ಯೋಗ ಪಾರಾಯಣೆ' ಎಂದು ಬರೆದುಕೊಂಡು ಮುಂದೆ ಸಾಗಿದ. ಮುಂದಿನ ಮನೆಗೆ ಹೋಗಿ 'ಪಾರಾಯಣೆ ಎಂದರೇನು ಸ್ವಾಮಿ?' ಎಂದು ಕೇಳಿದಾಗ 'ನಂಜುಂಡನ ಪಾರಾಯಣೆಯೇ? ಅವನ ಪಾರಾಯಣೆಯೆಂದರೆ ಭಗವದ್ಗೀತೆ ಪಾರಾಯಣೆ—ಅಂದರೆ ಇಸ್ಪೀಟು ಆಟ!' ಎಂದು ಹೇಳಿಬಿಟ್ಟರು. ಅದನ್ನು ಕೇಳಿ ಆಫೀಸರನು ತಾನು ಬರೆದುಕೊಂಡಿದ್ದನ್ನೆಲ್ಲ ಕಾಟುಹೊಡೆದು ಬಿಟ್ಟನಂತೆ.

ಹೀಗೆ ನಂಜುಂಡ ತನ್ನ ಉದ್ಯೋಗವನ್ನು ಮುಚ್ಚಿಟ್ಟಿರಲಿಲ್ಲ. 'ರಾಜಾರೋಷವಾಗಿ ಮಾಡುವ ಕೆಲಸ ಅದು. ಅದಕ್ಕೇಕೆ ಹೆದರಬೇಕು' ಎಂದು ಅವನು ಕೇಳುತ್ತಿದ್ದ. ಆದರೆ ಅದು ಬರೀ ಇಸ್ಪೀಟು ಆಟವಲ್ಲ, ರೊಕ್ಕ ಹಚ್ಚಿ ಆಡುವ ಆಟ ಎಂಬುದನ್ನು ಮಾತ್ರ ಯಾರಿಗೂ ಅವನು ಹೇಳುತ್ತಿರಲಿಲ್ಲ. ಆದರೆ ಅದನ್ನು ಅವನು ಬಾಯಿಬಿಟ್ಟು ಹೇಳದಿದ್ದರೂ ಎಲ್ಲರಿಗೂ ಗೊತ್ತಿದ್ದಿತು. ಅವರು ಹಣಹಚ್ಚಿ ಆಡುತ್ತಿರುವಾಗಲೇ ಹಿಡಿಯಬೇಕೆಂದು ಪೋಲೀಸರು ವಿಶ್ವಪ್ರಯತ್ನ ಮಾಡಿದರು. ಅದೆಷ್ಟೋ ಬಾರಿ ಮಧ್ಯರಾತ್ರಿಯ ಸುಮಾರಕ್ಕೆ ಪೋಲೀಸರ ಸವಾರಿ ನಂಜುಂಡನ ಮನೆಗೆ ಬಂದುಬಿಡುತ್ತಿತ್ತು. ಒಳಗಿನಿಂದ ಚಿಲಕಹಾಕಿದ ಬಾಗಿಲು ತೆರೆಯಲು ನಂಜುಂಡನಿಗೆ ಐದು ನಿಮಿಷ ತಡವಾಗುತ್ತಿತ್ತು. ನಂತರ ಪೋಲೀಸರು ಒಳಗೆ ಹೋಗಿ ನೋಡಿದರೆ ಐದಾರು ಸದ್ಗೃಹಸ್ಥರು ಕೂಡಿ ಇಸ್ಪೀಟು ಆಡುವ ದೃಶ್ಯ. ಕಾಯಿದೆಯ ದೃಷ್ಟಿಯಲ್ಲಿ ಇಸ್ಪೀಟು ಆಡುವದೇನೂ ತಪ್ಪಿಲ್ಲ ತಾನೆ? ಹಣ?...ಛೀ...ಹಣ ಹಚ್ಚಿ ಆಡುವದೇ?...ಶಾಂತಂ ಪಾಪಂ! ನಾವೆಲ್ಲ ಕುಂಪಣಿ ಸರಕಾರದ ಪ್ರಾಮಾಣಿಕ ಪ್ರಜೆಗಳು. ಅಂತಹ ಕೆಲಸ ಎಂದೂ ಮಾಡುವವರಲ್ಲ...ಜೇಬಿನಲ್ಲಿ? ಜೇಬಿನಲ್ಲಿ ಹಣವಿದೆ... ಅದರಲ್ಲೇನು ತಪ್ಪು?' ಪಾಪ ಪೋಲೀಸರು ಒಣಗಿದ ಮೋರೆಯಿಂದ ಹಿಂತಿರುಗುತ್ತಿದ್ದರು. 'ರಾತ್ರಿ ಸಾವಧಾನದಿಂದ ಹೋಗಿ, ಹುಚ್ಚು ನರಿ ಕಾಟ ಬೇರೆ' ಎಂದು ನಂಜುಂಡನು ಅವರಿಗೆ ಎಚ್ಚರಿಕೆ ಹೇಳಿ ಬೀಳ್ಕೊಡುತ್ತಿದ್ದನು.

೨

ಪ್ರತಿ ವರುಷ ನಮ್ಮೂರ ವೈದಿಕರಲ್ಲನೇಕರು ಮಳೆಗಾಲ ಸುರುವಾದೊಡನೆಯೇ ಜನಿವಾರ ತೆಗೆದುಕೊಂಡು ಘಟ್ಟ ಹತ್ತುವರು. ನಮ್ಮೂರ ಜನಿವಾರಗಳೆಂದರೆ ಸುಪ್ರಸಿದ್ಧ ಉತ್ತರ ಹಿಂದೂಸ್ಥಾನದವರೆಗೂ ಅವು ಹೋಗಿ ಬರುತ್ತಿದ್ದವು. ಆದರೆ ಅವಕ್ಕೆ ನಮ್ಮೂರ ಜನಿವಾರವೆಂದು ಕರೆಯುವದಿಲ್ಲ. ಗೋಕರ್ಣ ಜನಿವಾರವೆಂದು ಕರೆಯುವರು. ಏಕೆಂದರೆ ಜನರಲ್ಲಿ ವಿಶ್ವಾಸ ಹುಟ್ಟಲೆಂದು ನಮ್ಮೂರವರೆಲ್ಲ ತಾವು ಗೋಕರ್ಣಸ್ಥರೆಂದು ಹೇಳಿಬಿಡುವರು. ದೊಡ್ಡವರ ಹೆಸರು ಹೇಳಿ ಸಣ್ಣವರು ಜೀವಿಸುವುದು ಸಹಜ ತಾನೆ. ಆದರೆ ಇದರಿಂದೇನೂ ಸುಳ್ಳಾಡಿದಂತಾಗಲಿಲ್ಲ. ಗೋಕರ್ಣ ಮಂಡಲದಲ್ಲಿರುವವರೆಲ್ಲರೂ ಗೋಕರ್ಣಸ್ಥರೆಂದರೆ ತಪ್ಪೇ?

ಪ್ರತಿ ವರುಷ ಎಲ್ಲರಂತೆ ನಂಜುಂಡನೂ ಘಟ್ಟಹತ್ತುತ್ತಿದ್ದನು. ಆದರೆ ಅವನು ಜನಿವಾರವನ್ನು ಒಯ್ಯುತ್ತಿರಲಿಲ್ಲ. ಹೋಗುವಾಗ್ಗೆ ಬರೀ ಕೈಯಿಂದ ಹೋಗಿ ಬರುವಾಗ್ಗೆ ಒಂದು ಮೂಟೆಯನ್ನು ಹೊತ್ತು ತರುತ್ತಿದ್ದ. ಆ ಮೂಟೆಯನ್ನು ಪ್ರತಿ ವರುಷ ಪೋಲಿಸರು ತಪಾಸು ಮಾಡಿಯೇ ತೀರಬೇಕು. ಆದರೆ ಅದರಲ್ಲಿ ಅವರಿಗೆ ಸಿಕ್ಕುವುದು ಕಾಚಿನ ಗುಳಿಗೆಗಳು, ಜುಲಾಬಿನ ಪುಡಿ, ಹುರುಕು ತದ್ದಿನ ಬಗ್ಗ ರಾಮಬಾಣ ಮುಂತಾದ ಚಿಲ್ಲರೆ ಔಷಧಗಳು ಮಾತ್ರ. ನಂಜುಂಡನ ಮನೆಯಲ್ಲಿ ಇವೆಲ್ಲವುಗಳ ಚಿಕ್ಕ ದವಾಖಾನೆಯೇ ಇತ್ತು. 'ದವಾಖಾನೆಯ ಸಾಮಗ್ರಿ ತರುವದಕ್ಕಾಗಿ ಪ್ರತಿ ವರುಷ ನಾನು ಘಟ್ಟಕ್ಕೆ ಹೋಗಲೇ ಬೇಕು' ಎಂದು ಅವನು ಹೇಳುತ್ತಿದ್ದ.

ಜೂನ ತಿಂಗಳು ಕಳೆಯುತ್ತಿದೆ, ಎಲ್ಲರೂ ಘಟ್ಟಕ್ಕೆ ಹೋಗಲು ಅಣಿಯಾಗುತ್ತಿದ್ದರು. ಒಮ್ಮೆಲೇ ನಂಜುಂಡನಿಗೆ ತಾಲೂಕಿನ ಅಮಲ್ದಾರರಿಂದ ಕರೆ ಬಂದಿತು. ಅವನಿಗೇನೂ ಆಶ್ಚರ್ಯವಾಗಲಿಲ್ಲ. ಇವೆಲ್ಲ 'ಮಾಮೂಲು' ಭೇಟಿಗಳು!

ನಂಜುಂಡನ ಸವಾರಿ ಅಮಲ್ದಾರರ ಕಚೇರಿಗೆ ಬಂದಾಗ ಮಧ್ಯಾಹ್ನ ನಾಲ್ಕು ಗಂಟೆಯಾಗಿದ್ದಿತು. ಅಮಲ್ದಾರರು ತಾವು ಬರೆಯುತ್ತಿ

ರುವ ಲೇಖನಿಯನ್ನು ಕೆಳಗಿಟ್ಟು 'ಬಾ ನಂಜುಂಡ' ಎಂದು ಒರಟು ಧ್ವನಿಯಿಂದ ನುಡಿದರು. ನಂಜುಂಡ ಹೇಳದೆ ಕೇಳದೆ ಅಲ್ಲಿಯೇ ಇದ್ದ. ಕುರ್ಚಿಯೊಂದನ್ನು ಎಳೆದುಕೊಂಡು ಅದರಲ್ಲಿ ಕುಳಿತುಕೊಂಡ. ಒಂದು ಕ್ಷಣ ಅಮಲ್ದಾರರ ಕಣ್ಣು ದೊಡ್ಡದಾಯಿತು. ಮರುಕ್ಷಣದಲ್ಲಿಯೇ ಅವರು ಸ್ಥಿರಿಸಿಕೊಂಡರು.

"ನಂಜುಂಡ?"

"ಅಪ್ಪಣೆಯಾಗಬೇಕು!"

"ಘಟ್ಟಕ್ಕೆ ಹೊರಡುವ ದಿನಗಳು ಸಮೀಪಿಸಿದವು."

"ಹೌದು ಸ್ವಾಮಿ"

"ನಿಜವಾಗಿ ಹೇಳು. ನೀನು ಘಟ್ಟ ಹತ್ತುವದೇತಕ್ಕೆ?"

"ನಿಜವಾಗಿ...? ನಾನು ದೊಡ್ಡವನಾದಮೇಲೆ ಸುಳ್ಳಾಡಿದ ನೆನಪಿಲ್ಲ. ನಮ್ಮ ಹಿರಿಯರ ಶಿಕ್ಷಣವೇ ಅಂತಹದು. ಅದರಲ್ಲೂ ಸುಳ್ಳಾಡಿ ಉಪಯೋಗವೇನು? ಕಂಡದ್ದಾಡಿದರೆ ಕೆಂಡದಂತಹ ಕೋಪವಾದರೂ...

''ಅದಿರಲಿ...''

''ಹಾಂ! ನನ್ನ ದವಾಖಾನೆಯಿದ್ದದ್ದು ಮಹಾಸ್ವಾಮಿಯವರಿಗೆ ಗೊತ್ತಿರಲು ಸಾಕು. ಬಡಬಗ್ಗರ ಸಹಾಯಾರ್ಥವಾಗಿ ತೆರೆದ ಧರ್ಮಾರ್ಥ ದವಾಖಾನೆ. ಅದರಿಂದ ಎಲ್ಲರಿಗೂ ಸಹಾಯವಾಗದಿದ್ದರೂ ಯಥಾಶಕ್ತಿ ಉಪಕಾರಮಾಡುವ ಸ್ವಭಾವ ನನ್ನದು. ಈ ದವಾಖಾನೆಯ ಸಾಮುಗ್ರಿ ತರುವದರ ಸಲುವಾಗಿಯೇ ಪ್ರತಿ ವರುಷ ನಾನು ಘಟ್ಟ ಹತ್ತುವದು...ಇದು ಎಲ್ಲರಿಗೂ ಗೊತ್ತಿದ್ದ ವಿಷಯ.

''ಹೌದು, ಗೊತ್ತಿದ್ದ ವಿಷಯ ನನಗೆ ಬೇಡ. ಅನ್ಯರಿಗೆ ಗೊತ್ತಿರದ ಮುಚ್ಚುಮರೆಯೇನಾದರೂ ಇದ್ದರೆ ಅದೇ ನನಗೆ ಬೇಕಾದದ್ದು."

"ಮಹಾಸ್ವಾಮಿಯವರಿಗೆ ನನ್ನಲ್ಲಿ ಅವಿಶ್ವಾಸ. ಉಪಾಯವಿಲ್ಲ. ಇಬ್ಬರೂ ಒಂದು ಕ್ಷಣ ನೀರವವಾಗಿ ಕುಳಿತರು. ಒಮ್ಮೆಲೇ ಅಮಲ್ದಾರರು ಕೇಳಿದರು. "ನಂಜುಂಡ ತ್ರಿಶುಪರ್ಣ ಅಂದರೇನು?" ನಂಜುಂಡ ಅಪ್ರತಿಭವಾಗಿದ್ದರೆ ಅದು ಒಂದು ಕ್ಷಣಮಾತ್ರ 'ತ್ರಿಶುಪರ್ಣ...? ? ಹೋ...ತ್ರಿಶುಪರ್ಣ! ತ್ರಿಶುಪರ್ಣವೆಂದರೆ ಸೋನಾಮುಖಿ ಸೊಪ್ಪು.

ಆಯುರ್ವೇದದಲ್ಲಿ ಜುಲಾಬಿಗೆ ಹೆಸರಾದ ಮದ್ದು. ತಮಗೇಕೆ ಅದು ಬೇಕಾಗಿತ್ತು?"

ಅಮಲ್ದಾರರು ಒಂದೇಸಮನೆ ನಂಜುಂಡನ ಮೋರೆಯನ್ನು ಸೂಕ್ಷ್ಮವಾಗಿ ಪರೀಕ್ಷಿಸುತ್ತಿದ್ದರು. ಅವನ ಮೋರೆಯ ಒಂದು ರೇಖೆಯೂ ಬದಲಾಗಲಿಲ್ಲ.

"ಅದಕ್ಕೆ ಬೇರೆ ಅರ್ಥವೇನಾದರೂ ಇದೆಯೇ?

"ನನ್ನ ಆಯುರ್ವೇದದಲ್ಲಂತೂ ಇದ್ದದ್ದು ಅದೊಂದೇ ಅರ್ಥ. ಬೇರೆ ಅರ್ಥವೇನಾದರೂ ಇದ್ದರೆ ಅದು ನಾನರಿಯೆ."

ಅಮಲ್ದಾರರು ಒಂದು ಕ್ಷಣ ತೆಪ್ಪಗಿದ್ದರು. ನಂತರ ಮೇಜಿನ ಮೇಲಿದ್ದ ಕಬ್ಬಿಣದ ಪೆಟ್ಟಿಗೆಯೊಳಗಿಂದ ಎರಡು ಪತ್ರಗಳನ್ನು ತೆಗೆದರು. ಅದರಲ್ಲಿ ಒಂದನ್ನು ನಂಜುಂಡನ ಕಡೆಗೆ ಬಿಸಾಡಿದರು. ನಂಜುಂಡ ಅದನ್ನು ತೆಗೆದುಕೊಂಡು ಪರೀಕ್ಷಿಸಿದ. ಅವನ ಮೋರೆಯ ಮೇಲೆ ಆಶ್ಚರ್ಯ ಮೂಡಿತು.

"ಇದು ನನ್ನ ಪತ್ರ. ತಮ್ಮ ಕಡೆ ಹೇಗೆ ಬಂದಿತು?"

"ಹೌದು ಇದು ನಿನ್ನ ಪತ್ರ. ನನ್ನ ಅಪ್ಪಣೆಯ ಮೇರೆಗೆ ಪೋಸ್ಟಿನ ಅಧಿಕಾರಿಗಳು ನಿನ್ನ ಎಲ್ಲ ಪತ್ರ ಓದಿ ನೋಡಿ ಸಂಶಯಾರ್ಥ ಪತ್ರಗಳಿದ್ದಲ್ಲಿ ನನ್ನ ಕಡೆಗೆ ಕೊಡುತ್ತಿದ್ದರು ಈ ಪತ್ರದಲ್ಲಿಯ ಒಂದು ವಾಕ್ಯದ ಅರ್ಥ ಬೇಕಾಗಿದೆ. 'ತ್ರಿಶುಪರ್ಣ ತೀರ ಅಗ್ಗವಾಗಿದೆ ನಿಮಗೆ ಬೇಕಾದಷ್ಟು ಸಂಗ್ರಹಿಸಿಟ್ಟಿದ್ದೇನೆ. ಬೇಗನೆ ಒಯ್ಯಬೇಕು.' ಇದರ ಅರ್ಥವೇನು?" ಅಮಲ್ದಾರರು ಗಡುಸಿನಿಂದ ಮಾತನಾಡುತ್ತಿದ್ದರು. ನಂಜುಂಡನ ಮುಖದ ಮೇಲೆ ಮುಗುಳ್ನಗೆ ಸುಳಿದಾಡುತ್ತಿದ್ದಿತು. "ಮಹಾಸ್ವಾಮಿಯವರು ನಾನು ಹೇಳಿದ್ದನ್ನು ನಂಬುವಂತಿಲ್ಲ. ಪುಕ್ಕಟೆ ಮದ್ದು ಕೊಡುವವನು ನಾನು ಹೆಚ್ಚು ಖರ್ಚು ಬಂದರೆ ಪೂರೈಸಲು ಸಾಧ್ಯವಿಲ್ಲ. ಆದರಿಂದ ದರ ಅಗ್ಗವಾದಾಗ ಮದ್ದಿನ ಸಾಮಾನುಗಳನ್ನು ಕ್ರಯಕ್ಕೆ ತೆಗೆದಿಟ್ಟುಕೊಂಡಿರಲು ಘಟ್ಟದ ಮೇಲಿನ ನನ್ನ ಮಿತ್ರರಿಗೆ ನಾನು ಹೇಳಿಟ್ಟಿರುತ್ತೇನೆ...ಅದರಂತೆ ವ್ಯವಸ್ಥೆಯಾಗಿದೆಯೆಂದು ಇದರಲ್ಲಿ ಬರೆದಿದೆ...ಪತ್ರ ನನ್ನ ಕೈಗೆ ಸಿಕ್ಕದಿದ್ದಲ್ಲಿ ಅನ್ಯಾಯವಾಗು

ತ್ರಿತ್ತು...ಬಡವರ ಕಾರ್ಯಕ್ಕೆ ವಿಘ್ನ ಬರುತ್ತಿತ್ತು..."

"ನಿನ್ನ ಬೂಟಾಟಿಕೆಯನ್ನೆಲ್ಲ ಬಂದು ಮಾಡು ನಂಜುಂಡ" ಎಂದು ಅಮಲ್ದಾರರು ಜೋರಿನಿಂದ ಮೇಜನ್ನು ಬಡಿದು ನುಡಿದರು. ಅವರ ತಾಳ್ಮೆಯ ಚೀಲ ಬರಿದಾಗಿತ್ತು. 'ಬಡವರಂತೆ ಬಡವರು! ಈ ಎರಡನೆಯ ಪತ್ರದಲ್ಲಿ ಏನಿದೆ ಗೊತ್ತಿದೆಯೋ? ಜಿಲ್ಲಾಧಿಕಾರಿಗಳಿಂದ ನನಗೆ ಬಂದ ಪತ್ರವಿದು. ನನ್ನ ತಾಲೂಕಿನಲ್ಲಿ ಮತ್ತು ಅಜುಬಾಜುವಿನ ಪ್ರದೇಶಗಳಲ್ಲಿ ಕದ್ದು ಮುಚ್ಚಿ ನಡೆಯುವ ಅಫೀಮಿನ ವ್ಯಾಪಾರ ಹೆಚ್ಚಾಗಿದೆಯಂತೆ. ಈ ವ್ಯಾಪಾರದ ಮೂಲ ನಿನ್ನ ಊರಿನಲ್ಲಿಯೇ ಇದೆಯೆಂದು ಅಬಕಾರಿ ಅಧಿಕಾರಿಗಳಿಗೆ ಖಂಡಿತ ಗೊತ್ತಾಗಿದೆ. ಈಗ ನಿನ್ನ ಪತ್ರದಲ್ಲಿರುವ 'ತ್ರಿಶುಪರ್ಣ'ದ ಮತ್ತೊಂದು ಅರ್ಥ ನನಗೆ ಗೊತ್ತಿದೆ ತ್ರಿಶುಪರ್ಣವೆಂದರೆ ಗಾಂಜಾ ಇಲ್ಲವೆ ಅಫೀಮು."

"ಗಾಂಜಾ?" ನಂಜುಂಡನು ಆಶ್ಚರ್ಯಚಕಿತನಾಗಿ ನುಡಿದ 'ಮಹಾಸ್ವಾಮಿಗಳು ತಪ್ಪುತ್ತಿರುವಿರಿ...ನಾವು ಕುಂಪಣಿ ಸರಕಾರದ ಪ್ರಾಮಾಣಿಕ ಪ್ರಜೆಗಳು..."

"ನಿನ್ನ ರಗಳೆ ಸಾಕು ನಂಜುಂಡ. ನಿನ್ನ ಕುಂಪಣಿ ಸರಕಾರ ಹೋಗಿ ಈ ಹೊತ್ತಿಗೆ ಸರಿಯಾಗಿ ಎಪ್ಪತ್ತಮೂರು ವರುಷ ಮೂರು ತಿಂಗಳು ನಾಲ್ಕು ದಿವಸವಾಯಿತು. ಈಗ ಇರುವದು ಬ್ರಿಟಿಷ ಸರಕಾರ. ಈ ಸರಕಾರದಲ್ಲಿ ಇಂತಹ ಕೃತ್ಯಗಳಿಗೆ ಎಡೆಯಿಲ್ಲ...ಇದೊಂದು ಪತ್ರದ ಆಧಾರದ ಮೇಲಿಂದಲೇ ನಿನ್ನನ್ನು ಜೈಲಿಗಟ್ಟಲು ಬರುತ್ತಿತ್ತು. ಆದರೆ ಸಾಕಷ್ಟು ಪುರಾವೆ ಇಲ್ಲದ್ದರಿಂದ ನಿನ್ನನ್ನು ಕೆಲವು ಕಾಲ ಹೊರಗಿರಲು ಬಿಡಬೇಕಾಗಿದೆ...ನೀನು ಅತಿ ಚಾಣಾಕ್ಷನಿರುವೆಯೆಂಬುದು ಗೊತ್ತಿದೆ....ಆದರೆ ಸರಕಾರದ ಮುಂದೆ ನಿನ್ನ ಆಟ ಬಹುದಿನ ನಡೆಯಲಾರದು...ಈ ತಾಲೂಕಿನ ಇಡೀ ಅಬಕಾರಿ ಖಾತೆ ನಿನ್ನ ಬೆನ್ನುಹತ್ತಿದೆ. ಅದರಿಂದ ಕೊನೆಯ ಎಚ್ಚರಿಕೆ ಕೊಡುವುದಕ್ಕೆಂದು ನಿನ್ನನ್ನು ಇಲ್ಲಿಗೆ ಕರೆಸಿದೆ. ನನ್ನ ಮಾತಿನ ಮೇಲಿಂದಲೇ ನೀನು ಈ ಅಡ್ಡಹಾದಿ ಬಿಟ್ಟರೆ ಒಳಿತು...ಇಲ್ಲವಿದ್ದರೆ ಕೈಗೆ ಕೋಳ ಬರಲು ಬಹಳ ದಿವಸ ಬೇಡ..."
ನಂಜುಂಡನ ಮೋರೆ ಕೋಪದಿಂದ ಆರಕ್ತವಾಗಿತ್ತು. ಕುತ್ತಿಗೆಯ

ನರಗಳು ಉಬ್ಬಿ ಬಂದುವು. ಆದರೆ ಕ್ಷಣಾರ್ಧದಲ್ಲಿ ಅವನು ತನ್ನ ಕೋಪವನ್ನು ಸೈರಿಸಿಕೊಂಡನು. ಮರುಕ್ಷಣದಲ್ಲಿಯೇ ದೇಶಾವರಿನಗೆ ಮೋರೆಯ ಮೇಲೆ ಮಿಂಚುತ್ತಿತ್ತು.

"ಸರಕಾರದಿಂದ ನನಗೆ ಬಹಳ ಅನ್ಯಾಯವಾಗಿದೆಯೆಂದು ಮಹಾಸ್ವಾಮಿಗಳು ಮರೆತಿರುವಿರಿ... ಇಲ್ಲದಿದ್ದರೆ ಈ ಹೊತ್ತಿಗೆ ನಾನೂ ಒಬ್ಬ ಅಧಿಕಾರಿಯಾಗಿ ನಿರಪರಾಧಿಗಳನ್ನು ಹೆದರಿಸುತ್ತಿದ್ದೆ... ಆದರೆ ನಾನು ಸರಕಾರದ ಅನ್ಯಾಯ ಬಗೆಯುವವನಲ್ಲ... ಬಾಯಿಂದ ತಮಗೆ ಏನೂ ಹೇಳಿ ಪ್ರಯೋಜನವಿಲ್ಲ... ನಾನು ತಮ್ಮ ಕೈಗೆ ಅಪರಾಧಿಯಾಗಿ ಸಿಕ್ಕಿದಾಗ ತಾವು ಶೂಲಕ್ಕೇರಿಸಿದರೂ ಅದಕ್ಕೆ ನಾನು ಸಿದ್ಧ... ಅಪ್ಪಣೆಯೇ?" ನಂಜುಂಡ ಅಮಲ್ದಾರರಿಗೆ ನಮಸ್ಕಾರ ಮಾಡಿ ಹೊರಬಿದ್ದ.

× × × ×

ಘಟ್ಟದ ಮೇಲೆ ಹೋದವರೆಲ್ಲ ತಿರುಗಿ ಊರು ಸೇರುವ ದಿವಸ ಬಂದಿತು. ಕುಮಟೆ ನಾಕೆಯ ಹತ್ತಿರ ಅಬಕಾರಿ ಖಾತೆಯವರ ದೊಡ್ಡದೊಂದು ಗುಂಪೇ ವಸತಿಮಾಡಿದ್ದಿತು. ಘಟ್ಟದ ಮೇಲಿನಿಂದ ತಿರುಗಿ ಬರುವವರ ಗಂಟು ಮೂಟೆಗಳನ್ನೆಲ್ಲ ಸೂಕ್ಷ್ಮರೀತಿಯಿಂದ ಶೋಧಿಸಿ ಬಿಡುತ್ತಿದ್ದರು. ಕೊನೆಗೊಮ್ಮೆ ನಂಜುಂಡನ ಸವಾರಿಯೂ ಬಂತು. ಎಲ್ಲರಿಗಿಂತಲೂ ಅವನ ಗಂಟು ಮೂಟೆಗಳೇ ಹೆಚ್ಚು. ಕುಂಬಳಕಾಯಿಯ ಗಾತ್ರದ ಹತ್ತು-ಹದಿನೈದು ಗಂಟುಗಳನ್ನು ತಂದಿದ್ದನು. ಅವನ್ನೆಲ್ಲ ಶೋಧಿಸುವದಕ್ಕಾಗಿ ಕಚೇರಿಗೆ ಒಯ್ಯಬೇಕೆಂದು ಅಧಿಕಾರಿಯ ಅಪ್ಪಣೆಯಾಯಿತು. ನಂಜುಂಡನ ಪಿತ್ಥ ನೆತ್ತಿಗೇರಿತು. ಎಲ್ಲರಿಗೆ ಮಾಡಿದಂತೆಯೇ ತನ್ನ ಗಂಟುಗಳನ್ನೂ ಅಲ್ಲಿಯೇ ಶೋಧಿಸಬೇಕೆಂದು ಕೂಗಾಡಿದ ಅವನೆಲ್ಲಿ ಅಧಿಕಾರಿಗಳನ್ನು ಹೊಡೆದುಬಿಡುವನೋ ಎಂದು ಎಲ್ಲರಿಗೂ ಭಯವಾಯಿತು. ಅವನ ಕೈಲಿದ್ದ ಹತ್ತಿಂಚು ಗಾತ್ರದ ದೊಣ್ಣೆಯನ್ನು ಕಸಿದುಕೊಳ್ಳಬೇಕಾದರೆ ಸಾಕು ಬೇಕಾಯಿತು. ನಂಜುಂಡ ಅಧಿಕಾರಿಗಳನ್ನು ಶಪಿಸುತ್ತ ಕಚೇರಿಗೆ ಅವರನ್ನು ಹಿಂಬಾಲಿಸಿದ. ಕಚೇರಿಯಲ್ಲಿ ಅವನ ಮೂಟೆಗಳನ್ನೆಲ್ಲ ಬಿಚ್ಚಿ ಸೂರೆಮಾಡಿಯಾಯಿತು. ಆದರೆ ಅವೆಲ್ಲ ಸೋನಾಮುಖಿ ಸೊಪ್ಪಿನ ಗಂಟುಗಳು!

ಅವನ್ನೆಲ್ಲ ಒಂದು ತಾಸು ಸೋಯಿಸಿದರೂ ಏನೂ ಸಿಕ್ಕಲಿಲ್ಲ. ಅಧಿಕಾರಿಯ ಮೋರೆ ಕಪ್ಪಿಟ್ಟಿತ್ತು. ಆ ಗಂಟುಗಳನ್ನೆಲ್ಲ ಪುನಃ ವ್ಯವಸ್ಥಿತ ರೀತಿಯಿಂದ ಕಟ್ಟಿಸಿ 'ಇವನ್ನು ತೆಗೆದುಕೊಂಡು ಹೋಗು ನಂಜುಂಡ. ಈ ಬಾರಿಯೂ ನಮ್ಮ ಕಣ್ಣಿಗೆ ಮಣ್ಣು ತೋಚಿದೆ...' ಎಂದು ನುಡಿದನು. ನಂಜುಂಡನ ಕೋಪ ಇನ್ನೂ ಇಳಿದಿರಲಿಲ್ಲ. '...ಮಣ್ಣಂತೆ ಮಣ್ಣು. ನಿಮ್ಮ ಕಾಲದಲ್ಲಿ ಮರ್ಯಾದೆಯಿಂದ ಪ್ರವಾಸ ಮಾಡಲೂ ಸಾಧ್ಯವಿಲ್ಲ...ನಾಳೆಯೇ ಜಿಲ್ಲಾಧಿಪತಿಗಳಿಗೆ ಇವನ್ನೆಲ್ಲ ತಿಳಿಸಿ ನಿಮಗೆ ಶಾಂತಿ ಮಾಡಿಸುವೆ...ನನ್ನ ದೊಣ್ಣೆ ?'

ಆ ಅಧಿಕಾರಿ ಅಲ್ಲಿಯೇ ಇಟ್ಟಿದ್ದ ದೊಣ್ಣೆಯನ್ನು ಕೊಡುತ್ತ 'ಅಬ್ಬಾ ದೊಣ್ಣೆಯೇ! ಒಂದೂವರೆ ಮಾರುದ್ದ. ಇಂತಹ ದೊಣ್ಣೆ ಏತಕ್ಕೆ ನಿನಗೆ ನಂಜುಂಡ?' ಎಂದು ಕೇಳಿದರು.

"ಅನ್ಯರಿಗೆ ವಿನಾಕಾರಣ ತ್ರಾಸುಕೊಡುವ ನಿಮ್ಮಂಥವರ ತಲೆ ಒಡೆಯಲಿಕ್ಕೆ" ಎಂದು ದರ್ಪದಿಂದ ನುಡಿದು ನಂಜುಂಡನು ಕಚೇರಿಯಿಂದ ಹೊರಬಿದ್ದ.

× × × ×

ಅದೆಷ್ಟೋ ದಿವಸಗಳನಂತರ ಬತ್ತ ಕುಗಿಸುವ ಕಾಲಕ್ಕೆ ನಂಜುಂಡ ತನ್ನ ದೊಣ್ಣೆಯನ್ನು ಒಲೆಗೆ ಹಾಕುತ್ತಿರುವದನ್ನು ನೋಡಿ ನೆರಮನೆಯ ಭಟ್ಟರು 'ಇದೇನು ನಂಜುಂಡ, ದೊಣ್ಣೆಯನ್ನು ಸುಡುತ್ತಿರುವೆ?" ಎಂದು ಕೇಳಿದರು. ಅರ್ಧ ಸುಟ್ಟ ಆ ದೊಣ್ಣೆಯನ್ನು ನಂಜುಂಡ ಬೆಂಕಿಯಿಂದ ತೆಗೆದು ಭಟ್ಟರೆದುರು ಹಿಡಿದ. ಭಟ್ಟರ ಮೋರೆಯ ಮೇಲೆ ಆಶ್ಚರ್ಯ ಮೂಡಿ ನಿಂತಿತು. 'ಇದೇನು ನಂಜುಂಡ? ದೊಣ್ಣೆ ಪೊಳ್ಳಿದೆಯಲ್ಲ!' ಎಂದು ಅವರು ಕೇಳಿದರು. 'ಅದಕ್ಕೇ ಅದನ್ನ ಸುಡುತ್ತಿರುವೆ!' ಎಂದು ನಂಜುಂಡ ಶಾಂತರೀತಿಯಿಂದ ಉತ್ತರವಿತ್ತನು.

× × × ×

ತಾಲೂಕಿನ ಅಬಕಾರಿ ಇನ್ಸ್‌ಪೆಕ್ಟರರಿಗೆ ಒಮ್ಮಿಂದೊಮ್ಮೆಲೇ ವರ್ಗವಾದದ್ದರಿಂದ ಎಲ್ಲರಿಗೂ ಆಶ್ಚರ್ಯವಾಯಿತು. ಅವರು ಬಂದು ಇನ್ನೂ ಒಂದು ವರುಷವೂ ಆಗಿರಲಿಲ್ಲ. ದೇಶದಲ್ಲಿ ಅಫೀಮು, ಗೋವೆ

ಹಣ್ಣಿನ ಶರಬತ್ತಿನ ಕಳ್ಳವ್ಯಾಪಾರ ಹೆಚ್ಚುತ್ತಿದೆಯಂತೆ. ಅದನ್ನು ತಡೆಯಲು ಅವರಿಂದ ಸಾಧ್ಯವಾಗಲಿಲ್ಲವಂತೆ. ಅದರಿಂದಲೇ ಅವರಿಗೆ ವರ್ಗಮಾಡಿ ಮತ್ತೊಬ್ಬ ಇನಸ್ಪೆಕ್ಟರನನ್ನು ತಂದಿದ್ದಾರಂತೆ. ಈಗ ಬಂದವ ಮುಸಲ್ಮಾನನವ. ಪಕ್ಕಾ ಘಾತಕನಂತೆ...ಎಂಬ ಅಂತೆಗಳು ನಮ್ಮೂರಲ್ಲಿ ಹರಡಲು ಮೊದಲುಮಾಡಿದವು.

ಹೊಸತಾಗಿ ಬಂದ ಇನಸ್ಪೆಕ್ಟರ ಸಾಹೇಬರು ಆ ದಿವಸ ಬೇಗನೆ ಕಚೇರಿಗೆ ಬಂದು ಹಳೇ ಕೇಸಿನ ದಾಖಲೆಗಳನ್ನು ನೋಡುತ್ತ ಕುಳಿತಿದ್ದರು. ಕಚೇರಿಯ ಅತಿ ದೂರದ ಮೂಲೆಯಲ್ಲಿ ಕುಳಿತಿರುವ ಸಿಪಾಯಿಯನ್ನು ಬಿಟ್ಟರೆ ಮತ್ತಾವ ನರಪ್ರಾಣಿಯೂ ಇರಲಿಲ್ಲ. ಆಪಾದ ಮಸ್ತಕ ಖಾದಿಧಾರಿಗಳಾದ ಗೃಹಸ್ಥರೊಬ್ಬರು ಸಾವಕಾಶ ಆಫೀಸಿನಲ್ಲಿ ಬಂದರು. ಇನಸ್ಪೆಕ್ಟರರಿಗೆ ಅವರ ಗುರುತಿರಲಿಲ್ಲ, ಅಲ್ಲಿಯೇ ಇದ್ದ ಕುರ್ಚಿಯನ್ನು ತೋರಿಸುತ್ತ 'ತಾವು ಯಾರು?' ಎಂದು ಕೇಳಿದರು.

"ನಾನೇ ಇಲ್ಲಿಯ ತಲವಾಟದವ. ಶಾಸ್ತ್ರಿಯೆಂದು ನನ್ನ ಹೆಸರು."

"ತಲವಾಟದವರೇ? ತಲವಾಟದವರ ಪ್ರಸಿದ್ಧಿ ಹಮಕೊ ಮಾಲೂಮ್ ಹೈ. ಏನು ಕಾರಣ ಬಂದಿರಿ?"

"ಹೀಗೆಯೇ ಸಹಜವಾಗಿ ಬಂದೆ. ನನಗೂ ಅಬಕಾರಿ ಖಾತೆಯವರಿಗೂ ವಿಶೇಷ ಪರಿಚಯ. ತಾವು ಹೊಸತಾಗಿ ಬಂದವರು. ಹೀಗೆಯೇ ಪರಿಚಯ ಮಾಡಿಕೊಳ್ಳೋಣವೆಂದು ಬಂದೆ."

"ಬಹುತ್ ಅಚ್ಛಾ. ನಿಮ್ಮದು ತಲವಾಟಕ್ಕೆ ನಾನೊಮ್ಮೆ ಬರಬೇಕು. ಅಲ್ಲಿ ಸರಾಯಿ ಬಹಳ ಮಾಡ್ತಾರಂತೆ."

"ಸರಾಯಿ?...ಹೌದು ಅಲ್ಲೊಂದು ಸರಕಾರಿ ಗಡಂಗವಿದೆ."

"ಗಡಂಗ ನೈಜೀ! ನಾ ಹೇಳೋದು ನಿಮ್ಮ ಗೋವೆ ಹಣ್ಣಿನ ಶರಬತ್. ಅದನ್ನು ಬಂದುಮಾಡಲಿಕ್ಕೇ ನಾನಿಲ್ಲಿಗೆ ಬಂದದ್ದು."

"ಹ್ಞಾ, ಅದನ್ನು ಬಂದುಮಾಡಲಿಕ್ಕೇ ಬೇಕು. ಇಲ್ಲದಿದ್ದರೆ ನಮ್ಮೂರಿಗೊಂದು ಕಲಂಕ ಅದು...ನಾವೆಲ್ಲ ನಿಮಗೆ ಬೇಕಾದಷ್ಟು ಸಹಾಯ ಮಾಡುವೆವು...ನಮ್ಮೂರೆಲ್ಲ ಕುಂಪಣೀ ಸರಕಾರದ ಪ್ರಾಮಾಣಿಕ ಪ್ರಜೆಗಳು..."

"ಕುಂಪಣೀ?"

"ಅಲ್ಲ, ಬ್ರಿಟಿಷ ಸರಕಾರದ ಪ್ರಜೆಗಳು. ನನಗೆ ಅದು ಮರೆತೇ ಹೋಗುತ್ತದೆ. ನಮ್ಮಪ್ಪ ಕಲಿಸಿದ ಮಾತದು...ಬರ್ತೇನೆ ಸಾಹೇಬರೇ ನೀವು ಅವಶ್ಯ ಒಮ್ಮೆ ಬನ್ನಿ ಸವಾರಿ."

ಆ ಗೃಹಸ್ಥ ಸಲಾಂ ಮಾಡಿ ಹೊರಬೀಳುವದಕ್ಕೂ ಪೋಲೀಸು ಜಮಾದಾರನೊಬ್ಬ ಒಳಗೆ ಬರುವದಕ್ಕೂ ಸರಿಹೋಯಿತು. ಜಮಾದಾರ ಸಾಹೇಬರಿಗೆ ಸಲಾಂ ಮಾಡಿ "ಸಾಹೇಬರು ಬಹು ಬೇಗ ಕೆಲಸ ಮಾಡುವವರು! ನಂಜುಂಡನನ್ನು ಈಗಾಗಲೇ ಕರೆಸಿಬಿಟ್ಟಿದ್ದಿರಿ!" ಎಂದು ನುಡಿದ.

"ನಂಜುಂಡ? ಎಲ್ಲಿಯ ನಂಜುಂಡ?" ಸಾಹೇಬರು ಆಶ್ಚರ್ಯಚಕಿತರಾಗಿ ಕೇಳಿದರು.

"ಇದೇ ಈಗ ಇಲ್ಲಿಂದ ಹೊರಬಿದ್ದವನೇ ನಂಜುಂಡ .."

"ತನ್ನ ಹೆಸರು ಶಾಸ್ತ್ರಿಯೆಂದು ಅವನು ಹೇಳಿದನಲ್ಲ...?"

"ಅಹುದು. ಅವನೇ ನಂಜುಂಡ ಶಾಸ್ತ್ರಿ ತಮಗೆ ಗೊತ್ತಿಲ್ಲವೇ?" ಜಮಾದಾರ ನಂಬದೆ ಕೇಳಿದ.

ಸಾಹೇಬರು ಮಾತಾಡಲಿಲ್ಲ. ಅವರ ಮೋರೆ ಗಂಭೀರವಾಗಿತ್ತು. 'ಯಾ ಅಲ್ಲಾ..., ನಂಜುಂಡ, ನೀನೇ ಬಂದು ನನಗೆ ಆಮಂತ್ರಣವಿತ್ತೆ. ಒಮ್ಮೆ ಬರುವೆ, ಬೇಗನೆ ಬರುವೆ' ಎಂದು ಅಸ್ಪಷ್ಟವಾಗಿ ಅಂದುಕೊಂಡರು.

× × × ×

ಅಮಾವಾಸ್ಯೆಯ ಕತ್ತಲಿನಲ್ಲಿ ಸರಿ ರಾತ್ರಿಗೆ ಸಾವಕಾಶವಾಗಿ ಹೊಳೆಯಲ್ಲಿ ಇಳಿದವನ ಧೈರ್ಯವೇ ಹೆಚ್ಚಿನದು. ಧೈರ್ಯಕ್ಕೆಂದೋ ಏನೋ ಅವನು ಎಡಗೈಲಿ ದೊಡ್ಡದೊಂದು ದೊಣ್ಣೆಯನ್ನು ಹಿಡಿದಿದ್ದನು. ಬಲಗೈಲಿ ಅವನು ಈಜುತ್ತ ಹೊರಟಂತೆ ಅವನ ಹಿಂದೆಯೇ ಐದಾರು ದುಂಡಗಿನ ಪದಾರ್ಥಗಳು ತೇಲುತ್ತ ಹೊರಟವು. ಅವನು ಈಜುತ್ತ ಸುಮಾರು ಅರ್ಧಮೈಲು ಬಂದೊಡನೆಯೇ ದಟ್ಟವಾದ ಗಿಡಗಳ ಗುಂಪೊಂದು ಬಂದಿತು ಅವನು ಆ ಗುಂಪಿನ ಸಮೀಪಕ್ಕೆ ಬಂದದ್ದೇ ತಡ ಒಮ್ಮೆಲೇ ಕರ್ಕಶವಾಗಿ ಸೀಟಿಯು ಸಪ್ಪಳವಾಯಿತು. ಗಿಡದ ಗುಂಪಿ

ನೊಳಗಿಂದ ಅದೆಷ್ಟೋ ದೀಪದ ಪ್ರಕಾಶಗಳು ತೂರಿಕೊಂಡು ಬಂದು ಹೊಳೆಯನ್ನು ಬೆಳಗಿಬಿಟ್ಟವು ಧಡಧಡನೆಂದು ಎಂಟ್ಹತ್ತು ಜನರು ಹೊಳೆಯಲ್ಲಿ ಹಾರಿದರು. ತಟ್ಟನೆ ಹೊಳೆಯಲ್ಲಿ 'ಧಬ್' ಎಂಬ ಸಪ್ಪಳವಾಯಿತು ಎಲ್ಲ ಕಡೆಯೂ ಗೊಂದಲವೋ ಗೊಂದಲ.

ಕೊಂಚಹೊತ್ತಿನ ಮೇಲೆ ಹೊಳೆಯಲ್ಲಿ ಹಾರಿದವರು ಒಂದು ದೊಡ್ಡ ಹಗ್ಗವನ್ನೂ ಒಂದು ಕೋಲನ್ನೂ ದಂಡೆಗೆ ತಂದರು. ಇನೆಸ್ಪೆಕ್ಟರ ಸಾಹೇಬರು ಒಡ್ಡೆಯಾಗಿ ಗಡಗಡನೆ ನಡಗುತ್ತ...'ಅಬ್ಬಾ! ಪಕ್ಷಿ ಹಾರಿಹೋಯಿತು...!' ಎಂದು ತ್ವೇಷದಿಂದ ನುಡಿದರು.

"ನಾವು ಎಷ್ಟು ತ್ವರೆಯಿಂದ ಈಜಿದರೂ ಅವನು ಪಾರಾಗಿಬಿಟ್ಟ!" ಎಂದು ಇನ್ನೊಬ್ಬ ನುಡಿದ.

"ಹೌದು...ಅವನ ಉಪಾಯ ನನಗೆ ಮೊದಲೇ ತಿಳಿಯಲಿಲ್ಲ. ಈ ಹಗ್ಗಕ್ಕೆ ಸೋರೆಕಾಯಿ ಬುರುಡೆ ಕಟ್ಟಿದ್ದ. ಬುರುಡೆಯಲ್ಲಿದ್ದದ್ದು ಗೋವೇ ಹಣ್ಣಿನ ಸರಾಯಿ. ಇವನು ಈಜುತ್ತ ಹೋದಂತೆ ಸರಾಯಿಯ ಬುರುಡೆ ಹಿಂದಿನಿಂದ ಬರುತ್ತಿತ್ತು...ನಮ್ಮ ಸುಳಿವು ಹತ್ತಿದೊಡನೆಯೇ ಅವನು ದೊಣ್ಣೆಯಿಂದ ಎಲ್ಲ ಬುರುಡೆಗಳನ್ನೂ ಒಮ್ಮೆಲೇ ಒಡೆದು ಹೊಳೆಯಲ್ಲಿ ಮುಳುಗಿಬಿಟ್ಟ.. ಇಲ್ಲದಿದ್ದರೆ ಮುದ್ದೇಮಾಲು ಸಹಿತವಾಗಿ ಹಿಡಿಯಬಹುದಿತ್ತು ... ಬದ್ಮಾಷ್... ನಡೆಯಿರಿ ಅವನ ಮನೆಗೆ ಹೋಗೋಣ."

ಅವರು ಬಂದದ್ದು ನಂಜುಂಡನ ಮನೆಗೆ. ನಂಜುಂಡನ ಮನೆಯಲ್ಲಿ ಇನ್ನೂ ದೀಪವು ಉರಿಯುತ್ತಿದ್ದಿತು. ಪೋಲೀಸರು ಬಂದು ಐದು ನಿಮಿಷ ಬಾಗಿಲು ಬಡಿದು ಒದರಾಡಿದ ಮೇಲೆ ಬಾಗಿಲು ತೆರೆಯಿತು. ಕೈಯಲ್ಲಿ ಕಂದೀಲು ಹಿಡಿದುಕೊಂಡು ಮೈಯೆಲ್ಲ ನೀರು ಸುರಿಸುತ್ತ ನಂಜುಂಡ ನಿಂತಿದ್ದ. "ಓಹೋ ಇನೆಸ್ಪೆಕ್ಟರ ಸಾಹೇಬರು! ತಮಗೆ ನಾನು ಬರಲು ಹೇಳಿದ್ದೆ. ಆದರೆ ಇಷ್ಟು ಬೇಗ...ಇಂತಹ ಅವೇಳೆಯಲ್ಲಿ...ಇದಲ್ಲದೆ ಎಲ್ಲರೂ ಒದ್ದೆಯಾಗಿ ನಡಗುತ್ತಿರುವಿರಿ... ನಮ್ಮೂರ ಹೊಳೆಯಲ್ಲಿ ಸ್ನಾನವಾದಂತೆ ತೋರುತ್ತದೆ...ಆದರೆ ಇಲ್ಲಿಯದು ಉಪ್ಪುನೀರು...ದೇಹಕ್ಕೆ ಹಾಳು..." "ಬಾಯ್ಮುಚ್ಚು ಬದ್ಮಾಷ್"

ಎಂದು ಸಾಹೇಬರು ಕೂಗಿದರು. ಇದುವರೆಗೆ ಆದದ್ದೇ ಅವರಿಗೆ ಸಾಕಾಗಿತ್ತು. 'ಈ ಅವೇಳೆಯಲ್ಲಿ ನೀನೇನು ಮಾಡುತ್ತಿದ್ದೆ. ನಿನ್ನ ಮೈ ಒದ್ದೆಯಾಗಿದೆಯೇಕೆ...? ಹೂಂ, ಬೇಗನೆ ಉತ್ತರ ಕೊಡು...'

ನಂಜುಂಡ ಒಮ್ಮೆಲೇ ಗಂಭೀರನಾಗಿ ನಿಂತನು. 'ಸ್ವಲ್ಪ ಬಾಯಿ ಬಿಗಿಹಿಡಿದು ಮಾತಾಡಿರಿ ಸಾಹೇಬರೇ. ಇದು ಕುಂಪಣಿ...ಅಲ್ಲ ಬ್ರಿಟಿಷರ ರಾಜ್ಯ. ಅನ್ಯಾಯಕ್ಕೆ ಇಲ್ಲಿ ಎಡೆಯಿಲ್ಲ. ನಾನು ಇಂತಿಷ್ಟು ಹೊತ್ತಿಗೆ ಮಲಗಬೇಕೆಂಬ ನಿಯಮವಿಲ್ಲ. ನನ್ನ ಮೈ ಒದ್ದೆಯಾಗಿದ್ದರೆ ಅದರಿಂದ ನನಗೆ ಕೇಡು. ತಾವು ಅದನ್ನು ವಿಚಾರಿಸುವ ಕಾರಣವಿಲ್ಲ.' ಇನೆಸ್ಪೆಕ್ಟರ ಸಾಹೇಬರು ಮುಂದೆ ಬಂದು ನಂಜುಂಡನ ಮೈಮುಟ್ಟಿ ನೋಡಿದರು. 'ಹೂಂ, ಉಪ್ಪು ನೀರು...ಈ ಹೊತ್ತಿನಲ್ಲಿ ನಿನ್ನ ಮೈ ಮೇಲೆ ಉಪ್ಪು ನೀರು ಎಲ್ಲಿಂದ ಬಂತು? ಸಮಾಧಾನವಾದ ಉತ್ತರ ಬರದಿದ್ದರೆ ನಿನ್ನನ್ನು ಈಗಲೇ ಕಚೇರಿಗೆ ಕರೆದೊಯ್ಯುವೆ...'

ನಂಜುಂಡ ಒಂದು ಕ್ಷಣ ಸಾಹೇಬರನ್ನು ದುರದುರನೆ ನೋಡಿದ. ಮರುಕ್ಷಣದಲ್ಲಿ ಮುಗುಳ್ನಗೆಯಿಂದ ನುಡಿದ...'ಓಹೋ ನನ್ನ ವಿಷಯ ನಿಮ್ಮ ಮನಸ್ಸನ್ನೂ ಕೆಡಿಸಿದಂತಿದೆ...ಆಗಲಿ ನಾನು ಪ್ರಾಮಾಣಿಕನಿದ್ದರೆ ಸಾಕು. ಅಲ್ಲಾನು ನನಗೆ ಕಾಯುವ...ಈಗ ನಿಮ್ಮ ಪ್ರಶ್ನೆಗೆ ಉತ್ತರ. ನಾನು ಹಿತ್ತಲಲ್ಲಿ ಉಪ್ಪು ಮಾಡುತ್ತಿದ್ದೆ...ನಾನು ಬಡವ. ಸರಕಾರವು ನನಗೆ ಬಹಳ ಅನ್ಯಾಯ ಮಾಡಿದೆ. ಈಗ ಏನಾದರೂ ಮಾಡಿ ಹೊಟ್ಟೆ ತುಂಬಿಕೊಳ್ಳಬೇಕಷ್ಟೇ...ಉಪ್ಪು ಮಾಡುವುದೂ ನನ್ನ ಕಸುಬು. ಅದೇನು ತಪ್ಪಲ್ಲತಾನೆ...ಕೆಲವು ದಿವಸಗಳ ಹಿಂದೆ ಉಪ್ಪು ಮಾಡಿದರೂ ನೀವು ಹಿಡಿಯುತ್ತಿದ್ದಿರಿ. ಆದರೆ ಗಾಂಧೀ ಮಹಾರಾಜನ ಕೃಪೆಯಿಂದ ಆ ಹೆದರಿಕೆಯೊಂದು ದೂರವಾಯಿತು. ನನ್ನಂತಹ ಬಡವರು ಉಳಿದುಕೊಂಡರು...ನಾನು ಮಾಡುತ್ತಿರುವ ಉಪ್ಪಿನ ನೀರೆಲ್ಲ ಮೈತುಂಬ ಹಿಡಿದುಕೊಂಡಿದೆ...ಅಷ್ಟೇ...ನಾನು ಹಿತ್ತಲಲ್ಲಿ ಉಪ್ಪುಮಾಡುತ್ತಿದ್ದೆ...ಅದರಿಂದ ನೀವು ಕೂಗಿದ್ದು ಕೇಳಿಸಲಿಲ್ಲ...ಆದರಿಂದಲೇ ಬಾಗಿಲು ತೆರೆಯಲು ತಡವಾದದ್ದು...ಬೇಕಾದರೆ ಹಿತ್ತಲ ಕಡೆಗೆ ನಡೆಯಿರಿ...ಬಡವನ ಕಸಬನ್ನು ತೋರಿಸುವೆ...'

ಸಾಹೇಬರು ಮರುಮಾತಿಲ್ಲದೆ ನಂಜುಂಡನನ್ನು ಹಿಂಬಾಲಿಸಿದರು. ನಂಜುಂಡ ಹೇಳಿದ್ದೆಲ್ಲ ಅಕ್ಷರಶಃ ನಿಜವಿತ್ತು. ಹಿತ್ತಲಲ್ಲಿಯೇ ಒಂದು ಸಣ್ಣ ದೋಣಿ. ದೋಣಿಯಲ್ಲಿ ಅರ್ಧ ಉಪ್ಪು ತಯಾರಾಗಿತ್ತು. ದೋಣಿಯ ಬಾಜು ದೊಡ್ಡ ಕಲ್ಲಿನ ಮರಿಗೆ ಅದರಲ್ಲಿ–ಉಪ್ಪಿನ ಮಣ್ಣನ್ನು ಅದೇ ಆಗ ಕದಡಿದಂತಿತ್ತು. ಸಮೀಪದಲ್ಲಿಯೇ ಉಪ್ಪಿನ ಮಣ್ಣಿನ ದೊಡ್ಡ ಗುಂಪೆಯೊಂದು. ನಂಜುಂಡ ಕೈಮುಗಿದುಕೊಂಡೇ ತೋರಿಸಿದ. ಸಾಹೇಬರು ಕೋಪ ಉಕ್ಕಿ ಬರುತ್ತಿದ್ದರೂ ಮರುಮಾತಿಲ್ಲದೆ ತಿರುಗಿದರು. ಮನೆಯ ಬಾಗಿಲು ದಾಟಿ ಅವರು ಹೊರಬೀಳುವಾಗ್ಗೆ ನಂಜುಂಡ ಸಾಹೇಬರನ್ನು ಕುರಿತು ವಿಲಕ್ಷಣ ಧ್ವನಿಯಿಂದ ನುಡಿದ 'ಸಾಹೇಬರೇ ಈ ದೇಶ ಹೊಸದು. ಹೊಸಬರನ್ನು ಈ ದೇಶ ಸ್ವೈರು ವಂತಿಲ್ಲ...ಅದರಲ್ಲಂತೂ ಇಲ್ಲಿಯ ಉಪ್ಪು ನೀರಿನಷ್ಟು ಹಾಳಾದದ್ದು ಇನ್ನೊಂದಿಲ್ಲ. ಅದರ ಅನುಭವ ಈ ಹೊತ್ತು ತಮಗಾಗಿರಲು ಸಾಕು' ಸಾಹೇಬರು ಕೆಂಗಣ್ಣಿನಿಂದ ಅವನನ್ನು ನೋಡಿದರೂ ಅವನ ಮುಗುಳ್ನಗೆ ಮಾತ್ರ ಮಾಯವಾಗಲಿಲ್ಲ.

× × × ×

ಮರುದಿನವೇ ಸಾಹೇಬರು ತಮ್ಮ ಹೆಂಡತಿಗೆ ಶೀಕೆಂದು ತಿಂಗಳ ರಜದಮೇಲೆ ಹೋದವರು ಇತ್ತ ಬರಲೇ ಇಲ್ಲ.

× × × ×

'ಕುಂಪಣಿ' ಸರಕಾರದ ಪ್ರಾಮಾಣಿಕ ಪ್ರಜೆಯಾದ ನಂಜುಂಡನ ಜೀವನ ಯಥಾಪ್ರಕಾರ ನಡೆದಿದೆ.

# ಪುಟ್ಟು

ಅಮೇರಿಕೆಯ ಕೆಲವು ಸಂಸ್ಥೆಗಳು ಪ್ರಸಿದ್ಧ ಭಾರತೀಯ ವೈಜ್ಞಾನಿಕನೊಬ್ಬನ ಮಿದುಳನ್ನು ಅವನ ಮರಣಾನಂತರ ಪಡೆಯಲು ಪೈಪೋಟಿ ನಡೆಸುತ್ತಿವೆಯೆಂದು ನಾನೊಮ್ಮೆ ಕೇಳಿದ್ದೆ. ಇದರಲ್ಲಿ ತಥ್ಯಾಂಶವೆಷ್ಟಿದೆಯೋ ನಾನರಿಯೆ. ಆದರೆ ನಮ್ಮ ಪುಟ್ಟುವಿನ ಮಿದುಳನ್ನು ಮಾತ್ರ ಮರಣಾನಂತರ ಪರೀಕ್ಷೆ ಮಾಡಿಸಿಯೇ ತೀರಬೇಕೆಂದು ನಾನು ನಿರ್ಧರಿಸಿದ್ದೇನೆ.

ಇದಕ್ಕೆ ಕಾರಣ ಇಷ್ಟು. ಪುಟ್ಟುವಿನ ಮಿದುಳಿನಷ್ಟು ಸುಪೀಕಾದ ಮಿದುಳು ನನಗೆ ತಿಳಿದಮಟ್ಟಿಗೆ ಇನ್ನೊಂದಿಲ್ಲ. ಈ ಜಗತ್ತಿನಲ್ಲಿ ಅದಕ್ಕೆ ಗೊತ್ತಿಲ್ಲದ ಸಂಗತಿಯೇ ಇಲ್ಲ. ಅದಕ್ಕಾಗಿಯೇ ಪುಟ್ಟು ನಮ್ಮೂರಿನ ಪ್ರತಿಯೊಂದು ಕಾರ್ಯದಲ್ಲಿಯೂ ಮುಂದೆ. ಲಗ್ನ-ಮುಂಜಿಗಳಾದರೆ ಇವನು ಬೇಕೇಬೇಕು. ಇವನಷ್ಟು ಉತ್ತಮ ಮಂಟಪ ಶೃಂಗಾರ ಮಾಡುವವರು ನಮ್ಮ ಪ್ರಾಂತ್ಯ ಯಾರೂ ಇರಲಿಲ್ಲ. ಭಾಗವತರ ಮನೆ ಲಗ್ನದಲ್ಲಿ ಎರಡಂತಸ್ತಿನ ಮಂಟಪ ಕಟ್ಟಿದಾಗ ಬರೀ ಮಂಟಪ ನೋಡಲಿಕ್ಕೆ ಹುತ್ತು ಮೈಲು ದೂರದಲ್ಲಿದ್ದ ಹಳ್ಳಿಯವರೆಲ್ಲರೂ ಬಂದಿದ್ದರು. ಪಾಕಶಾಸ್ತ್ರದಲ್ಲೂ ಪ್ರವೀಣ. ಇವನು ಅಡಿಗೆ ಪರೀಕ್ಷೆಮಾಡುವ ವಿಧಾನ ಅತಿ ವಿಚಿತ್ರವಾದುದು. ಕೈಯ್ಯಲ್ಲೊಂದು ಕಬ್ಬಿಣದ ಕೋಲು ತೆಗೆದುಕೊಂಡು ಪ್ರತಿಯೊಂದು ಪಾತ್ರೆಯನ್ನೂ ಬಡಿಯುತ್ತ ಹೋಗುತ್ತಾನೆ. ಸಪ್ಪಳವನ್ನು ಲಾಲಿಸಿ 'ಇದಕ್ಕೆ ಸ್ವಲ್ಪ ಉಪ್ಪು ಬೇಕು; ಇದಕ್ಕೆ ಸ್ವಲ್ಪ ಖಾರ ಹೆಚ್ಚು; ಇದಕ್ಕೆ ಸ್ವಲ್ಪ ಹುಳಿ ಹಿಂಡು,' ಎಂದು ಹೇಳಿಬಿಡುತ್ತಾನೆ. ಅವನ ಈ ಪರೀಕ್ಷೆ ಅಕ್ಷರಶಃ ಸರಿಯಿರುತ್ತದೆ. 'ಜಲತರಂಗದಲ್ಲಿ ಬೇರೆ ಬೇರೆ ಸ್ವರಗಳು ಹೊರಡುವಂತೆ ಮಸಾಲೆ ಸರಿಯಾಗಿ ಬೀಳುತ್ತಲೆ ಒಂದು ತರದ ವಿಶಿಷ್ಟ ಸಪ್ಪಳ ಹೊರಡುತ್ತದೆ' ಎಂದು ಅವನ ಸಿದ್ಧಾಂತ. ಆದರೆ ಎಂತಹ ಸಪ್ಪಳವೆಂಬ ಗುಟ್ಟನ್ನು ಯಾರಿಗೂ ಕೊಟ್ಟವನಲ್ಲ.

ಪುಟ್ಟುವಿಗೆ ಗಾಯನ ಬರುತ್ತದೆ; ಕಲಾಕೋವಿದ; ಅಭಿನಯ ಚತುರ; ಹೆಸರಾದ ಗುರಿಕಾರ; ಉತ್ತಮ ನಕ್ಷೆಯನ್ನು ಬಿಡಿಸಬಲ್ಲ. ಒಟ್ಟಿನಲ್ಲಿ ಹಳೇಕಾಲದವರ ಅರವತ್ತನಾಲ್ಕು ವಿದ್ಯೆಗಳನ್ನೂ ಅವನು ಬಲ್ಲ. ತಾಳ ಬಡಿಯಲು ತೊಡಗಿದರೆ ಅವನ ತಾಳಕ್ಕೆ ತಕ್ಕಂತೆ

ಕುಣಿಯುವವರೇ ಇಲ್ಲ. ಒಮ್ಮೆ ನಮ್ಮೂರಲ್ಲಿ 'ಸಂಧಾನ' ಆಟ ಮಾಡಿಸಿ ದೊಡ್ಡ ನೌಕರಸ್ಥರನ್ನೆಲ್ಲ ಆಮಂತ್ರಿಸಲಾಗಿತ್ತು. ಕರ್ಕಿಯ ಮೇಳವೆಂದರೆ ಕೇಳಬೇಕೆ. ರಂಗಸ್ಥಳದ ಮೇಲೆ ನಿಂತರೆ ದೃಷ್ಟಿ ಹರಿಯುವ ವರೆಗೂ ಜನಸ್ತೋಮ. ಆದರೆ ಹಾಲು ಬರುವ ಸಮಯಕ್ಕೆ ಸರಿಯಾಗಿ ಗಾಣ ಮುರಿದಂತೆ ಕೃಷ್ಣನ ಪಾತ್ರ ವಹಿಸುವ ಹಾಸ್ಯಗಾರರಿಗೆ ಒಮ್ಮೆಲೇ ಚಳಿ-ಜ್ವರ ಬಂದುಬಿಟ್ಟಿತು. 'ಗಡಗಡ' ನಡಗುತ್ತ ಎಂಟ್ಟತ್ತು ಕಂಬಳಿ ಹೊದೆದುಕೊಂಡು ಮಲಗಿಬಿಟ್ಟರು. ಹಾಸ್ಯಗಾರರ ಕೃಷ್ಣ ನಿಲ್ಲದಿದ್ದರೆ ಆಟ ಆಡಿ ಉಪಯೋಗವೇ ಇರಲಿಲ್ಲ. ಮೇಳಗಾರರಿಗೆಲ್ಲ ಚಿಂತೆಗಿಟ್ಟುಕೊಂಡಿತು. ಅಷ್ಟರಲ್ಲಿ ಪುಟ್ಟು ಅವರ ಸಹಾಯಕ್ಕೆ ಬಂದ. "ಹರಿಯೂ ಮೈ ಮುರಿದೆದ್ದು..." ಎಂದು ಹಾಡುತ್ತ ಕೃಷ್ಣನ ಪಾತ್ರ ರಂಗಸ್ಥಳದ ಮೇಲೆ ತೋರಿದಾಗ ಜನರಲ್ಲಿ "ಹೋ" ಎಂದು ದೊಡ್ಡ ಗೊಂದಲವೆದ್ದುಬಿಟ್ಟಿತು. ಹೊಸ ಕೃಷ್ಣ; ಅದ್ಭುತ ಅಭಿನಯ; ಎಲ್ಲರೂ ಬೆರಗಾದರು. ಆದರೆ ಯಾರಿಗೂ ಪುಟ್ಟುವಿನ ಗುರುತು ಹಿಡಿಯಲು ಸಾಧ್ಯವಾಗಲಿಲ್ಲ. ಎಲ್ಲಿಯೋ ಒಬ್ಬ ಘಟ್ಟದ ಮೇಲಿನವನನ್ನು ಕರೆದುಕೊಂಡು ಬಂದಿರಲು ಸಾಕು ಎಂದು ಎಲ್ಲರೂ ಅಂದುಕೊಂಡರು. ಅದರೆ ಅವನು ಪುಟ್ಟುವೆಂದು ತಿಳಿದ ಮೇಲೆ ಅವರಿಗಾದ ಆಚ್ಚರಿ ಅಷ್ಟಿಷ್ಟಲ್ಲ. ಮಾಮಲೇದಾರರು ರಂಗಸ್ಥಳದ ಮೇಲೆ ಬಂದು ತಮ್ಮ ಶಲ್ಲೆಯನ್ನು ಪುಟ್ಟುವಿಗೆ ಹಾಕಿ ಅವನನ್ನು ಗೌರವಿಸಿದರು. ಆ ಹೊತ್ತಿನ ಆರತಿ ಬಟ್ಟಲು ಸಾಲದೆ ದುಡ್ಡಿಗಾಗಿ ಹಿಂದಿನಿಂದ ಬುಟ್ಟಿಯನ್ನು ಹಿಡಿದುಕೊಂಡು ಓಡಾಡಬೇಕಾಯಿತು. ಕಡತೋಕೆ ಭಾಗವತರಂತೂ ಆನಂದಾಶ್ರು ಸುರಿಸುತ್ತ ಅವನನ್ನು ಅಪ್ಪಿಕೊಂಡು "ನಿಜವಾದ ಗೋಕುಲ ಕೃಷ್ಣ ಕುಣಿದಂತಾಯಿತು ಪುಟ್ಟಣ್ಣ! ನಿನಗೆ ದೇವರ ವರವಿದೆ. ಈ ಕಸಬು ನೀನು ಬಿಡಬಾರದು" ಎಂದು ಬೇಡಿಕೊಂಡರು. ಆದರೆ ನಮ್ಮ ಪುಟ್ಟು ಒಂದು ಕಸಬಿಗೆ ಅಂಟಿದವನೇ ಅಲ್ಲ.

ಪುಟ್ಟು ಮನಸ್ಸು ಮಾಡಿದರೆ ಯಾವದಾದರೊಂದು ಕಸಬಿಗೆ ಅಂಟಿಕೊಂಡು ಬೇಕಾದಷ್ಟು ಹಣ ಗಳಿಸಬಹುದಾಗಿತ್ತು. ಕಲ್ಲಿನಲ್ಲಿ ಮೂರ್ತಿಗಳನ್ನು ಕೊರೆಯುವದರಲ್ಲಂತೂ ಅವನು ಪ್ರವೀಣ. ಜವಾ

ಹರಲಾಲ ನೆಹರುರವರು ಚುನಾವಣೆ ಸಮಯದಲ್ಲಿ ನಮ್ಮೂರಿಗೆ ಬಂದಿದ್ದಾಗ ಒಂದಂಗುಲ ಕಲ್ಲಿನಲ್ಲಿ ಅವರ ಇಡೀ ಮೂರ್ತಿಯನ್ನು ಕೆತ್ತಿ ಕೊಟ್ಟು ಅವರಿಂದ ಸನ್ಮಾನ ಪಡೆದಿದ್ದ. ಮೊನ್ನೆ ಮಠದ ಸ್ವಾಮಿಗಳು ಮಠಕ್ಕೊಂದು ಮರಿ ಮಾಡಿದಾಗ (ಮುಂದೆ ಸ್ವಾಮಿಯಾಗುವವನನ್ನು ನೇಮಿಸಿದಾಗ) ಆ ಮರಿಯ ಸರ್ವ ಸಾಮಾನುಗಳನ್ನು ತಯಾರಿಸಿ ಕೊಟ್ಟವನೂ ಅವನೇ. ಸನ್ಯಾಸಿಗಳು ಲೋಹದ ಸಾಮಾನುಗಳನ್ನು ಮುಟ್ಟಬಾರದಷ್ಟೇ- ಅವರಿಗಾಗಿ ಪುಟ್ಟುವು ರಾಮನಗಿಂಡಿ ಗುಡ್ಡೆಯ ಮೇಲೆ ನಾಲ್ಕು ದಿವಸ ಇದ್ದು ಅಲ್ಲಿಯ ಶೇಡಿ ಕಲ್ಲಿನಿಂದ ಗಿಂಡಿ, ಸವಟಿ, ಜಲಹರಿಣಿ ಮೊದಲಾದ ಪೂಜೋಪಕರಣಗಳನ್ನು ಕಡಿದು ಕೊಟ್ಟಿದ್ದನು. ಅವನು ತಯಾರಿಸಿದ ಕಮಂಡಲವಂತೂ ಮಿಷನ್ನಿನಿಂದ ತಯಾರಿಸಿದಂತಿತ್ತು. ಸ್ವಾಮಿಗಳಿಂದ ಬಹುಮಾನದ ಗೊಂಡೆಯೂ ದೊರೆಯಿತು. 'ಜಕಣಾಚಾರ್ಯರ ಒಂದಂಶ ನಿನ್ನಲ್ಲಿ ಮೂಡಿದೆ' ಎಂದು ಅವರು ಶ್ಲಾಘಿಸಿದರು. ಆದರೆ ಅವನಲ್ಲಿದ್ದದ್ದು ಅದೇ ಒಂದಂಶವಾಗಿದ್ದರೆ ಒಳ್ಳೆಯದಾಗಿತ್ತು. ಅವನಲ್ಲಿ ಇಂತಹ ಸಾವಿರಾರು ಅಂಶಗಳು ಕೂಡಿದ್ದರಿಂದಲೇ ಅವನೊಂದು ಎಲ್ಲ ಅಂಶಗಳಿಂದಲೂ ಭಿನ್ನವಾದ ವಿಚಿತ್ರ ವ್ಯಕ್ತಿಯಾಗಿಬಿಟ್ಟಿದ್ದ. ಏಳು ಬಣ್ಣದ ಕಿರಣಗಳು ಕೂಡಿ ಸೂರ್ಯನ ಒಂದು ಬೇರೆ ಕಿರಣವಾಗಿಲ್ಲವೇ, ಹಾಗೆಯೇ.

ಪುಟ್ಟು ಮಹಾ ಹಟವಾದಿ. ಎಂದು ಕೆಲಸವನ್ನು ಮಾಡುತ್ತೇನೆಂದರೆ ಶತ ಪ್ರಯತ್ನ ಮಾಡಿಯಾದರೂ ಅದನ್ನು ಮಾಡಿದ್ದೇ ಸಿದ್ಧ. ಒಮ್ಮೆ ನಮ್ಮೂರಿಂದ ಕುಮಟೆಗೆ ಹೋಗಲು ಹೊರಟ. ಮೋಟಾರ ಫ್ರಂಟ ಸೀಟು ಖಾಲಿಯಿದ್ದದ್ದನ್ನು ನೋಡಿ ಅದರಲ್ಲಿ ಕುಳಿತುಬಿಟ್ಟ. ಆದರೆ ಅವನ ಗ್ರಹಚಾರಕ್ಕೆ ಸರಿಯಾಗಿ ದೊಡ್ಡ ಅಮಲ್ದಾರರೊಬ್ಬರು ಕುಮಟೆಗೆ ಹೋಗಲು ಹಾಜರಾಗಿಬಿಟ್ಟರು. ಫ್ರಂಟ ಸೀಟು ದೊಡ್ಡ ರುಮಾಲದಾರರಿಗೆ ಕಟ್ಟಿಟ್ಟದ್ದಷ್ಟೇ. ಕೆಳಗೆ ಇಳಿಯಲು ಪುಟ್ಟುವಿಗೆ ಏಜಂಟನ ಆಜ್ಞೆಯಾಯಿತು. ಆದರೆ ಪುಟ್ಟು ಕುಳಿತಲ್ಲಿಂದ ಏಳಲೇ ಇಲ್ಲ...'ದೊಡ್ಡವರಾದರೇನಾಯಿತು. ಅವರು ಕೊಡುವುದೂ ನಾವು ಕೊಡುವಷ್ಟೇ ಹಣ ತಾನೆ. ಹೆಚ್ಚು ಕೊಡುತ್ತಿದ್ದರೆ ಹೇಳಿ. ನಾನೂ

ಅಷ್ಟೇ ಕೊಡುವೆ...ದೊಡ್ಡವರಾದರೆ ಮನೆಯಲ್ಲಿ...ಇಲ್ಲಿ ಎಲ್ಲರೂ ಸಮ ..." ಎಂದು ಸಿಕ್ಕಾಪಟ್ಟೆ ಕೂಗಾಡಿದನು. ಅಮಲ್ದಾರರಿಗೂ ಪಿತ್ಥ ನೆತ್ತಿಗೇರಿತು. ಅವರೂ ಕೂಗಾಡಲು ಮೊದಲು ಮಾಡಿದರು. ದೊಡ್ಡ ಜನಸ್ತೋಮವೇ ಸೇರಿತು. ಎಂಟು ಘಂಟೆಗೆ ಬಿಡಬೇಕಾದ ಮೋಟಾರು ಮಧ್ಯಾಹ್ನ ಹನ್ನೆರಡು ಘಂಟೆಯಾದರೂ ಅಲ್ಲಿಯೇ ಇತ್ತು. ಕೊನೆಗೆ ಅಮಲ್ದಾರರೇ ಗೆದ್ದರು. ಜನರೆಲ್ಲರೂ ಕೂಡಿ ಚಮತ್ಕಾರದಿಂದ ಪುಟ್ಟುವನ್ನು ಕೆಳಗೆತ್ತಿ ಇಟ್ಟರು. ಪುಟ್ಟು ಅಪಮಾನದಿಂದ ಕಿಡಿಕಿಡಿಯಾದ. ಎಲ್ಲ ಜನರೆದುರು ಭೀಷ್ಮ ಪ್ರತಿಜ್ಞೆ ಮಾಡಿದ... "ಭೊ! ಎಲ್ಲರೂ ಕೇಳಿರಿ. ಇನ್ನು ಒಂದು ವರುಷದೊಳಗೆ ನನ್ನ ಸ್ವಂತ ಕಾರಿನಲ್ಲಿ ಈ ಅಮಲ್ದಾರರ ಮುಂದೆ ಮೆರೆಯದಿದ್ದರೆ ನಾನು ನನ್ನ ಎಡ ಮೀಸೆ ತೆಗೆದುಬಿಡುತ್ತೇನೆ." ಆ ಹೊತ್ತೇ ಪುಟ್ಟು ಊರು ಬಿಟ್ಟ. ಐದಾರು ತಿಂಗಳುಗಳ ವರೆಗೆ ಅವನ ಸುದ್ದಿಯೇ ಇರಲಿಲ್ಲ. ಎಲ್ಲರಿಗೂ ಉಪಯೋಗವಿರುವ ಒಂದು ವಸ್ತು ಕಡಿಮೆಯಾಯಿತೆಂದು ಎಲ್ಲರೂ ಮರುಗಿದರು.

ಒಂದು ದಿವಸ ಸಾಯಂಕಾಲ ಒಂದು ಭರ್ಜರಿ ಹೊಸ ಕಾರು ದೂರ ಪೇಟೆಯಲ್ಲಿ ಬಂದು ನಿಂತಿತು. ತೀರ ಹೊಸ ಮಾದರಿಯದು. ನೋಡಿದರೆ ಕಣ್ಣು ಕುಕ್ಕುವಂತಿತ್ತು. ಮೋಟಾರು ಬಾಗಿಲು ತೆಗೆದು ಸಾಹೇಬರ ಪೋಷಾಕಿನಲ್ಲಿದ್ದ ಮೋಟಾರು ನಡೆಯಿಸುತ್ತಿದ್ದ ವ್ಯಕ್ತಿ ಕೆಳಗಿಳಿಯಿತು. ಅವನ ಉಡುಪನ್ನು ನೋಡಿ "ಇವರಾರಪ್ಪಾ? ಕಲೆಕ್ಟರ ಸಾಹೇಬರೇ" ಎಂದು ನಾವೆಲ್ಲ ಬೆರಗಾಗುವಷ್ಟರಲ್ಲಿ ಆ ವ್ಯಕ್ತಿಯ ಗುರುತು ಸಿಕ್ಕಿತು. ಅವನೇ ನಮ್ಮ ಪುಟ್ಟು! ಪುಟ್ಟು ಐದಾರು ಸಾವಿರ ಬೆಲೆ ಬಾಳುವ ಕಾರಿನಲ್ಲಿ! ಎಲ್ಲರೂ ಆಶ್ಚರ್ಯಚಕಿತರಾಗಿ ಅವನ ಸುತ್ತು ನೆರೆದೆವು. ಎಲ್ಲರೂ ಪುಟ್ಟುವಿಗೆ ಪ್ರಶ್ನೆ ಮಾಡುವವರೇ. ಪುಟ್ಟು ಠೀವಿಯಿಂದ ಸುತ್ತಲೂ ನೋಡುತ್ತ ನುಡಿದ..."ನನ್ನ ಪ್ರತಿಜ್ಞೆ ನೆನಪಿದೆಯೇ? ಇದು ನನ್ನ ಕಾರು...ಮಿ। ಪುಟ್ಟರಾಯರ ಕಾರು..." ಆ ಹೊತ್ತು ಪಾಪ ಅಮಲ್ದಾರರ ಮೋರೆ ನೋಡುವದು ಬೇಡ. ನಾಲ್ಕು ದಿವಸ ಅವರು ಹೋದಲ್ಲೆಲ್ಲ ಕಾರು ತೆಗೆದುಕೊಂಡು ಪುಟ್ಟು ಅವರ

ಬೆನ್ನುಹಿಂದೆಯೇ ಇರುತ್ತಿದ್ದ. ಅವರ ಹಿಂದೆ ಕಾರು! ಅವರ ಕಾರಿನ ಹಿಂದೆ ಸುತ್ತಲಿನ ಹಳ್ಳಿಯಿಂದ ಕಾರು ನೋಡಲು ಬಂದ ಜನಸ್ತೋಮ ಜಾತ್ರೆ ನೆರೆದಂತೆ. ಅಮಲ್ದಾರರು ನಾಚಿ, ಕರಗಿ ನೀರಾಗಿ ಹೋದರು. ಇನ್ನು ತಡೆಯದೆ ಅವರು ಪೋಲೀಸರಿಗೆ ಫಿರ್ಯಾದು ಕೊಡುವದೊಂದು ಉಳಿದಿತ್ತು. ಅಷ್ಟರಲ್ಲಿ ಪುನಃ ಪುಟ್ಟು ಕಾರಿನೊಡನೆ ಮಾಯವಾದ. ಐದಾರು ದಿನಗಳ ನಂತರ ಬರೀ ಪುಟ್ಟು ಮಾತ್ರ ತಿರುಗಿ ಬಂದ. ಕಾರು ಎಲ್ಲಿ ಹೋಯಿತು?' ಎಂದು ಕೇಳಿದರೆ 'ನನ್ನ ಪ್ರತಿಜ್ಞೆ ಪೂರೈಸಿತು. ಇನ್ನೇತಕ್ಕೆ ಆ ಕಾರು. ಮಾರಿಬಿಟ್ಟೆ' ಎಂದು ನುಡಿದುಬಿಡುತ್ತಿದ್ದನು. ಒಳಗಿನ ಗುಟ್ಟನ್ನು ನನಗೆ ಮಾತ್ರ ಅವನು ತಿಳಿಸಿದ. ಊರುಬಿಟ್ಟು ಹೋದ ಅವನು ಬೆಂಗಳೂರು, ಪುಣೆ ಎಲ್ಲಾ ಸುತ್ತಿ ಕೊನೆಗೆ ಬೊಂಬೈ ಯಲ್ಲಿ ಫೋರ್ಡ್ ಕಂಪನಿಯಲ್ಲಿ ಕೆಲಸಕ್ಕೆ ಉಳಿದನಂತೆ. ನಾಲ್ಕೈದು ತಿಂಗಳ ಕೆಲಸಮಾಡಿ ಕೆಲವು ಮೋಟಾರು ಮಾರಿ ಅವರ ವಿಶ್ವಾಸ ಸಂಪಾದಿಸಿದನಂತೆ. ನಂತರ ಒಂದು ಕಾರು ಈ ಕಡೆಗೆ ಒಬ್ಬರಿಗೆ ಬೇಕೆಂದು ಹೇಳಿ ಆ ಕಾರು ಎಬ್ಬಿಸಿಕೊಂಡು ಬಂದಿದ್ದನಂತೆ. ನಂತರ ಅವರಿಗೆ ತಾರ್ ಬೇಡವಂತೆ ಎಂದು ಹೇಳಿ ಅದನ್ನು ತಿರುಗಿ ಕೊಟ್ಟು ಕೆಲಸಕ್ಕೆ ರಾಜೀನಾಮೆ ಇತ್ತು ಬಂದನಂತೆ. ಹೀಗಿದೆ ಅವನ ಹಟ. ಅಂತೂ ಒಂದು ರೀತಿಯಿಂದ ಒಳ್ಳೆಯದೇ ಆಯಿತು. ಈಗ ಪುಟ್ಟು ಫ್ರಂಟ ಸೀಟಿನಲ್ಲಿ ಕೂಡಬೇಕಾದರೆ ಹಿಂದು ಮುಂದು ನೋಡಿ ಕೂಡುತ್ತಾನೆ. ಒಮ್ಮೆ ಅವನು ಕೂತರೆ ಅವನನ್ನು ಎಬ್ಬಿಸುವ ಗೊಡವೆಗೆ ಯಾರೂ ಹೋಗುವದಿಲ್ಲ. ಅಮಲ್ದಾರರಂತೆ ತಮಗೂ ಏನಾದರೂ ಫಜೀತಿ ಯಾದೀತೆಂದು.

ಪುಟ್ಟುವಿನಲ್ಲಿ ಇಷ್ಟು ಯೋಗ್ಯತೆಯಿದ್ದರೂ ಅವನ ಕೈಯಲ್ಲಿ ಒಂದು ಕುರುಡು ಕಾಸೂ ಇರಲಿಲ್ಲ. 'ನಾನು ಲಕ್ಷ್ಮಿಯ ವೈರಿ' ಎಂದು ಅವನು ಸದಾ ನುಡಿಯುತ್ತಿದ್ದ. ಆದರೆ ಹಣ ಗಳಿಸುವ ಉಪಾಯ ಮಾತ್ರ ಅವನಿಗೆ ಗೊತ್ತಿದ್ದಷ್ಟು ಇನ್ನಾರಿಗೂ ಗೊತ್ತಿರಲಿಲ್ಲ 'ಕಣ್ಣಿದ್ದ ವರಿಗೆ ಖಂಡುಗ ಹಣ ಕಣೋ' ಎನ್ನುತ್ತಿದ್ದ. ನಾವಿಬ್ಬರೂ ತಿರುಗಾಡಲು ಹೊರಟು ಗುಡ್ಡೆಯನ್ನು ಹತ್ತಿ ತುದಿಯಲ್ಲಿ ಕುಳಿತು ದಿಗಂತದ

ವರೆಗೆ ಹಬ್ಬಿರುವ ಸಮುದ್ರದ ಶೋಭೆಯನ್ನು ನೋಡುತ್ತ ಕುಳಿತಾಗ ಇವನ ಭಾಷಣಕ್ಕೆ ಸುರುವಾಗುತ್ತಿತ್ತು ...'ಹಣ... ಹಣ...ಹಣ... ಸೂಳೆಯೂ ಹಣ ಗಳಿಸಬಲ್ಲಳು...ಹಣ ಗುಂಡೂ... ತಾಕತ್ತಿದ್ದವ ಮಣ್ಣಿನಲ್ಲೂ ಹಣ ತೆಗೆಯಬಲ್ಲ...ಅಲ್ಲಿ ನೋಡು ಅಲ್ಲಿ ಕಾಣುವ ರಾಮನಗಿಂಡಿಯ ಗುಡ್ಡೆ...ಅಲ್ಲಿದ್ದದ್ದೆಲ್ಲವೂ ಮಣ್ಣೇ. ನೀವು ಅದನ್ನು ಚೀನೀ ಮಣ್ಣು ಎಂದು ಕರೆಯುವಿರಿ...ಆ ಮಣ್ಣಿನಿಂದ ಅತ್ಯುತ್ತಮ ಮೂರ್ತಿಗಳನ್ನು ಮಾಡಬಹುದು. ಆದರೆ ನಮ್ಮ ಜನರಿಗೆ ಅದರ ಕಡೆ ಲಕ್ಷ್ಯವೇ ಇಲ್ಲ. ಕಲಕತ್ತೆಯಿಂದಲೋ ದಿಲ್ಲಿಯಿಂದಲೋ ಬಂದ ಚೀನೀ ಮಣ್ಣಿನ ಸಾಮಾನುಗಳನ್ನು ಒಂದಕ್ಕೆರಡು ದರ ಕೊಟ್ಟು ತೆಗೆದು ಕೊಳ್ಳಲು ಮಾತ್ರ ಬಲ್ಲರು...ಹಿತ್ತಲ ಗಿಡ ಮದ್ದಲ್ಲವಂತೆ. ನಾನು ಇಡೀ ಗುಡ್ಡವನ್ನು ಸವರಿ ದೊಡ್ಡ ದೊಡ್ಡ ಚೀನಾ ಮಣ್ಣಿನ ಕಾರಖಾನೆ ಯನ್ನೆ ಸ್ಥಾಪಿಸುತ್ತಿದ್ದೆ...ಆದರೆ...ಅದಕ್ಕೆ ಬಂಡವಲು ಬೇಕು...'ಬಂಡ ವಲಿನ ಸುದ್ದಿ ಬಂದ ಕೂಡಲೇ ನನ್ನ ಎದೆ ಢವ ಢವ ಎನ್ನುತ್ತಿತ್ತು. ಎಲ್ಲಿ ಬಂಡವಲುಗಾರನಾಗುವ ಪಾಳಿ ನನಗೆ ಬರುತ್ತದೋ ಅಂತ. 'ಇದೇ ಈ ಗುಡ್ಡೆಯಲ್ಲಿ ಎಷ್ಟು ನಮೂನೆಯ ಲೋಹವಿದೆಯೋ ದೇ ವರೇ ಬಲ್ಲ. ಶೋಧಿಸುವವರಾರು...? ಈ ಮರಗಳು, ಬೂರಲ ದಂತಹ ಮರಗಳಿದ್ದರೆ ಅವುಗಳಿಂದ ಕಡ್ಡೀ ಪೆಟ್ಟಿಗೆ ತಯಾರಿಸಬಹುದು ...ಅಷ್ಟೇಕೆ ಗುಂಡೂ, ಉದುರಿ ಬಿದ್ದ ಈ ಮರಗಳ ಎಲೆಗಳಿಂದಲೂ ಹಣ ತೆಗೆಯಬಹುದು. ಈ ಎಲ್ಲ ಸೊಪ್ಪು, ಅದೋ ಅಲ್ಲಿ ಕಾಣುವ ಸಮುದ್ರದಲ್ಲಿರುವ ಅಸಂಖ್ಯಾತ ಮೀನುಗಳಲ್ಲಿ ಕೆಲವನ್ನು ಕೂಡಿಸಿ ಟ್ಟರೆ ಸ್ವಲ್ಪೇ ದಿವಸದಲ್ಲಿ ಉತ್ತಮ ಮೊಸಿನ ಗೊಬ್ಬರವಾಗುವದು. ಬೆಳೆಗೆ ಅದರಷ್ಟು ಉತ್ತಮವಾದದ್ದು ಯಾವದೂ ಇಲ್ಲ. ಅದನ್ನು ಮಾರಿ ಹಣ ತೆಗೆಯಬಹುದು. ಅದೋ ಆ ತೆಂಗಿನ ಮರಗಳು ಎಷ್ಟು ಹುಲುಸಾಗಿ ಬೆಳೆದಿವೆ, ನಮ್ಮ ಜನರಿಗೆ ಬುದ್ಧಿಯಿಲ್ಲ...ತೆಂಗಿನ ಸಿಪ್ಪೆಯನ್ನೆಲ್ಲ ಒಲೆಗೆ ಉರಿಸುತ್ತಾರೆ. ಆದರ ಬದಲು ಎಲ್ಲ ಮನೆಯ ಸಿಪ್ಪೆಗಳನ್ನು ಕೂಡಿಹಾಕಿದರೆ ಅತ್ಯುತ್ತಮ ಕತ್ತದ ಬಳ್ಳಿ ತೆಗೆಯ ಬಹುದು...ಅಷ್ಟೇಕೆ...ಹೊರಗೆ ಬಿಸಾಡುವ ತೆಂಗಿನ ಗರಟೆಯಿಂದ

ಲಕ್ಷಗಟ್ಲೆ ಹಣ ಗಳಿಸಬಹುದು. ಸುಟ್ಟ ತೆಂಗಿನ ಗರಟೆ ಹಲ್ಲುಪುಡಿಗೆ ಉಪಯೋಗಕ್ಕೆ ಬರುವುದು. ಅಲ್ಲದೆ ಅದು ವಿಷವಾಯುವನ್ನು ಶೋಧಿಸಬಲ್ಲದಂತೆ. ವಿಷವಾಯು ಪ್ರಯೋಗದ ಹೆದರಿಕೆ ಇರುವ ಈ ಸಮಯದಲ್ಲಿ ಬಹಳ ಉಪಯೋಗವುಂಟು...ಹೀಗೆ ಗುಂಡೂ ಪ್ರತಿಯೊಂದರಲ್ಲೂ ಹಣವುಂಟು. ಒಂದು ಸಣ್ಣ ಉದಾಹರಣೆ ತೆಗೆದುಕೋ ಗುಂಡೂ ನಾನು ಒಂದಿಪ್ಪತ್ತು ಸಣ್ಣ ಹುಡುಗರನ್ನು ನೇಮಿಸಿ ಪ್ರತಿಯೊಂದು ಊರಿನಲ್ಲಿ ಪ್ರತಿಯೊಂದು ಮನೆಗೆ ತಿರುಗಾಡಿ ಜನರು ಉಪಯೋಗಿಸಿ ಬಿಸಾಡುವ ಖಾಲಿ ಕಡ್ಡೀಪೆಟ್ಟಿಗೆಗಳನ್ನು ಒಟ್ಟು ಮಾಡಿದರೆ ಅದರಿಂದೆಷ್ಟು ಲಾಭವಿದೆ ಬಲ್ಲೆಯಾ? ಈ ರೀತಿ ಒಟ್ಟುಮಾಡಿದರೆ ನಮ್ಮ ತಾಲ್ಲೂಕೊಂದರಲ್ಲಿಯೇ ಒಂದು ತಿಂಗಳಲ್ಲಿ ಹತ್ತುಸಾವಿರ ಖಾಲೀ ಪೆಟ್ಟಿಗೆಗಳನ್ನು ಕೂಡಿಸಬಹುದು ಅದನ್ನು ಪುನಃ ಕಂಪನಿಗೆ ಮಾರಿದರೆ ಅವರು ಬಿಲ್ಲಿಗೆ ನಾಲ್ಕಾದರೂ ಪೆಟ್ಟಿಗೆ ತೆಗೆದುಕೊಳ್ಳಲಾರರೇ? ಇಂತಹ ಕ್ಷುಲ್ಲಕ ಸಂಗತಿಗಳಿಂದಾಗುವ ಲಾಭವನ್ನು ನೋಡಿದೆಯಾ...? ಇಂತಹ ವ್ಯವಸ್ಥೆ ಇಡೀ ಜಿಲ್ಲೆಯಲ್ಲಿ... ಇಡೀ ಪ್ರಾಂತದಲ್ಲಿ ಇದ್ದರೆ...ಹೊನ್ನಿನ ಸುರಿಮಳೆ ...ಆದರೆ ಅದಕ್ಕೆ ಬಂಡವಲು ಬೇಕು...ಬಂಡವಲು..." ಹೀಗೆ ಕೊನೆಗೆ ಅವನ ಭಾಷಣ ಬಂಡವಲಿಗೆ ಮುಕ್ತಾಯವಾಗುತ್ತಿತ್ತು. ಆದರೆ ಈ 'ಬಂಡವಲು' ನನಗೆ ಕಂಟಕಪ್ರಾಯವಾಗಿತ್ತು. ಏಕೆಂದರೆ ಪುಟ್ಟುವಿಗೆ ಇದ್ದ ಬಂಡವಲುಗಾರನೆಂದರೆ ನಾನೊಬ್ಬನೇ. "ಈ ಹೊತ್ತು ಹಾಗೆ ಮಾಡ್ತೇನೆ...ಹೀಗೆ ಮಾಡ್ತೇನೆ. ಅದರಿಂದ ಒಂದು ಸಾವಿರ ರೂಪಾಯಿ ಲಾಭವುಂಟು. ಈಗ ನೀನು ಹತ್ತು ರೂಪಾಯಿ ಕೊಟ್ಟರೆ ಸಾಕು. ನೀನು ಕೊಟ್ಟ ಹಣಕ್ಕೆ ನನ್ನ ಲಾಭದ ನಾಲ್ಕನೇ ಒಂದು ಪಾಲು ನಿನಗೆ ಕೊಡ್ತೇನೆ...ಇದೊಂದು ಬಾರಿ ನೀನು ಸಹಾಯ ಮಾಡಲೇಬೇಕು... ಎಂದು ನೂರೆಂಟು ಮಾತನಾಡಿ ಹತ್ತು ರೂಪಾಯಿ ಎಬ್ಬಿಸಿಕೊಂಡು ಹೋಗುತ್ತಿದ್ದ. ಲಾಭದ ಅಂಶ ಒತ್ತಟ್ಟಿಗಿರಲಿ, ನನ್ನ ಅಸಲಿನ ಅಂಶವೆ ನನಗೆ ಸಿಕ್ಕುತ್ತಿದ್ದಿಲ್ಲ. ಅದರಿಂದ 'ಬಂಡವಲು' ಎಂಬ ಶಬ್ದ ಬಂದೊಡನೆಯೇ ನಾನು ಮಾರುತ್ತರವೀಯದೆ ಸರಸರನೆ ಗುಡ್ಡ ಇಳಿದು ಬರುತ್ತಿದ್ದೆ.

ಆಹೊತ್ತು ನಾನು ಅದೇ ಊಟಮಾಡಿ ಗಾಳಿಗೆ ಅಡ್ಡಾಗಿದ್ದೆ. ಭರ್ತಿ ಊಟವಾದ್ದರಿಂದ ಜಂಪು ಹತ್ತುವದರಲ್ಲಿತ್ತು. ಅಷ್ಟರಲ್ಲಿ ಯಾರೋ ಗಟ್ಟಿಯಾಗಿ ನನ್ನ ಮೈಮುಟ್ಟಿ ಅಲ್ಲಾಡಿಸಿದರು. ನಾನು ಗಾಬರಿಯಾಗಿ ಒಮ್ಮೆಲೇ ಎದ್ದು ಕೂತೆ. ನೋಡುತ್ತೇನೆ, ಪುಟ್ಟು ಪ್ರತ್ಯಕ್ಷನಾಗಿದ್ದ.

"ಏನೊ ಮಾರಾಯ ಈ ಮಧ್ಯಾನ್ಹ ಬಿಸಿಲಲ್ಲಿ..."

"ಅವಸರ ಕೆಲಸವಿತ್ತು ಗುಂಡೂ. ನಿನ್ನ ನೆನಪಾಯಿತು..."

ನಿದ್ದೆಯೆಲ್ಲೋ ಓಡಿಹೋಯಿತು. ಬಹುಶಃ 'ಬಂಡವಲು' ಕೇಳಲು ಬಂದಿದ್ದಾನೆ. ಎದ್ದು ಓಡಿಹೋಗಲೂ ಆಸ್ಪದವಿರಲಿಲ್ಲ. ಹೊಟ್ಟೆ ಒಜ್ಜೆಯಾಯಿತು.

"ಇದ್ನೋಡು, ಪುಟ್ಟು ನೀನು ಬಂಡವಲಿನ ವಿಷಯ ಮಾತಾಡುವದಿದ್ದರೆ ಮುಂದೆ ಮಾತಾಡುವದೇ ಬೇಡ. ನನ್ನಲ್ಲಿ ಈಗ ಒಂದು ಕಾಸೂ ಇಲ್ಲ" ಎಂದು ನಾನು ನುಡಿದೆ.

"ಆದ್ರೆ ಗುಂಡೂ, ಇದು ಅತಿ ಮಹತ್ವದ ಕೆಲಸ. ಕಡಿಮೆಯೆಂದರೆ ಇಪ್ಪತ್ತೈದು ಸಾವಿರವಾದರೂ ಲಾಭವುಂಟು...."

"ಏನದು? ರಾಮನಗಿಂಡಿಯ ಗುಡ್ಡೆ ಕೀಳ್ತೀಯಾ?... ಇಲ್ಲವೆ ಕಡ್ಡಿ ಪೆಟ್ಟಿಗೆ..." ಎಂದು ನಾನು ತಿರಸ್ಕಾರದಿಂದ ನುಡಿದೆ.

"ಅದೊಂದೂ ಅಲ್ಲ ಗುಂಡೂ. ನಭೂತೋನಭವಿಷ್ಯತಿ. ಅಂತಹ ವಿಚಾರವಿದು. ಖರ್ಚು ಹೋಗಿ ಇಪ್ಪತ್ತೈದು ಸಾವಿರ ಲಾಭ..."

"ನಿನ್ನ ಇದುವರೆಗಿನ ಲಾಭವನ್ನೆಲ್ಲ ಒಟ್ಟುಗೂಡಿಸಿದರೆ ನೀನು ಅಬ್ಜಾಧಿಪತಿಯಾಗಿರಬೇಕಾಗಿತ್ತು!" ಆದರೆ ಇಂತಹ ಕೊಂಕುಮಾತು ಪುಟ್ಟುವಿಗೆ ತಾಗುತ್ತಿರಲಿಲ್ಲ.

"ನೀನು ನೋಡುತ್ತಿರು ಗುಂಡೂ... ಈ ಬಾರಿ... ಹೇಳಿ ಪ್ರಯೋಜನವಿಲ್ಲ. ಈಗ ನನಗೆ ಬರೀ ಐವತ್ತು ರೂಪಾಯಿಯಾದರೆ ಸಾಕು ಐವತ್ತರಲ್ಲಿ ಇಪ್ಪ...."

"ಐವತ್ತು ರೂಪಾಯಿ!" ನಾನು ಒಮ್ಮೆಲೇ ಹಾರಿಬಿದ್ದೆ. 'ಅಷ್ಟು ರೂಪಾಯಿ ನನ್ನಲ್ಲೆಲ್ಲಿಂದ ಬರಬೇಕು?"

"ಈ ಹೊತ್ತು ಮುಂಜಾನೆ ಪಟೇಲರು ನಿನ್ನಿಂದ ಕಡವಾಗಿ ತೆಗೆದು ಕೊಂಡಿದ್ದ ನೂರು ರೂಪಾಯಿಗಳನ್ನು ತಿರುಗಿ ಕೊಟ್ಟಿದ್ದಾರಂತೆ, ಗುಂಡೂ ನನಗೆ ನೂರೂ ಬೇಡ..."

ಅಯ್ಯೋ ಇದೆಲ್ಲ ಸಂಗತಿ ಇವನಿಗಾರು ತಿಳಿಸಿದರೋ ಏನೋ. 'ಒಂದು ನೂರು ಬಿಟ್ಟು ಒಂದು ಪೈಯನ್ನೂ ಕೊಡುವದಿಲ್ಲ. ನಿನಗೆ ಒಂದು ಪೈಯನ್ನೂ ಕೊಡುವದಿಲ್ಲ. ನಿನಗೆ ಲೆಕ್ಕವಿದೆಯೋ ಪುಟ್ಟು. ನಾನು ಇದುವರೆಗೆ ನಿನಗೆ ನೂರಾಅರವತ್ತುಮೂರು ರೂಪಾಯಿ... ಎಂಟಾಣೆ...ಎಂಭತ್ತು ಪೈ ಕೊಟ್ಟಿದ್ದೇನೆ...'

''ಹೌದು. ಇಲ್ಲವೆಂದವರಾರು? ಈ ಬಾರಿ ನಿನ್ನ ಹಣವನ್ನೆಲ್ಲ ತಿರುಗಿ ಕೊಡುತ್ತೇನೆ. ಅಷ್ಟೇ ಅಲ್ಲ...ಲಾಭದಲ್ಲಿ ನೂರಕ್ಕೆ ಇಪ್ಪತ್ತು ಅಂಶ ನಿನಗೆ...ನಿನಗೆ ಕೂತಲ್ಲಿಯೇ ಸಾವಿರಾರು ರೂಪಾಯಿ..."

"ಯಾವಾಗಲೂ ಇದೇ ಮಾತು ಪುಟ್ಟು. ನೀನು ನನಗೆ ಒಂದು ಪೈ ಕೊಡುವುದೂ ಬೇಡ. ಈಗ ಕೊಟ್ಟದ್ದು ಹೋಗಲಿ. ಇನ್ನು ಮುಂದಾದರೂ ದಯವಿಟ್ಟು ಕೇಳಬೇಡ" ಎಂದು ನಾನು ಕೋಪದಿಂದ ನುಡಿದು ಮೋರೆಯ ಮೇಲೆ ಶಾಲು ಹಾಕಿಕೊಂಡೆ.

ಪುಟ್ಟು ನೀರವವಾಗಿ ಕುಳಿತಿದ್ದ. ಅವನು ಉಸಿರಾಡಿಸುವದು ಮಾತ್ರ ನನಗೆ ಕೇಳುತ್ತಿದ್ದಿತು. ಆ ರೀತಿ ಕಠೋರವಾಗಿ ಮಾತಾಡಿದ್ದ ಕ್ಕಾಗಿ ನನಗೆ ಪಶ್ಚಾತ್ತಾಪವಾಗತೊಡಗಿತು. ಐದು ನಿಮಿಷಗಳವರೆಗೆ ಪುಟ್ಟು ಹಾಗೆಯೇ ಕುಳಿತಿದ್ದ. ಸಾವಕಾಶ ನಾನು ನನ್ನ ಮುಖದ ಮೇಲಿನ ಶಾಲು ಸರಿಸಿದೆ. ಅವನ ದೀನ ಮೋರೆ ನೋಡಿ ಮನಸ್ಸು ನೀರಾಯಿತು. ಪುಟ್ಟು ಎಂದೂ ಅಷ್ಟು ಹತಾಶನಾಗಿರಲಿಲ್ಲ.

"ಅಲ್ಲ ಪುಟ್ಟು' ನಾನು ಸಮಾಧಾನದಿಂದ ನುಡಿದೆ. 'ಈ ರೀತಿ ಹಣ ಅಪವ್ಯಯಮಾಡಿ ಪ್ರಯೋಜನವೇನು? ಸುಮ್ಮನೆ ಕುಳಿತು ಕೊಳ್ಳಬಾರದೇ?"

"ಅಪವ್ಯಯ? ನಿನಗೆ ತಿಳಿಯದು ಗುಂಡು. ನನ್ನ ವಿಚಾರ ಈಗಲೇ ನಿನಗೆ ಹೇಳುವಂತಿಲ್ಲ. ಒಮ್ಮೆಲೇ ನಿನ್ನೆದುರಿಗೆ ರೂಪಾಯಿಯ ಮೂಟೆ ತಂದು ಝಣ ಝಣ..."

"ಸಾಕು ಮಾರಾಯಾ...ಮುಂದೆ ಮಾತಾಡಬೇಡ"ಎಂದು ನಾನು ನುಡಿದು ತಲೆದಿಂಬಿನ ಕೆಳಗೆ ಕೈ ಹಾಕಿ ಅದೇ ಆಗ ಬಂದ ರೂಪಾಯಿ ಯಲ್ಲಿ ಅರ್ಧ ಅವನ ಕಡೆ ಬಿಸಾಡಿದೆ.

ಪುಟ್ಟುವಿಗೆ ಇಷ್ಟಗಲ ನಗೆ ಬಂದುಬಿಟ್ಟಿತು. ರೂಪಾಯಿಯೆಲ್ಲ ಬರಗಿಕೊಂಡು ಓಟಕಿತ್ತ. ನನಗೆ ಆಹೊತ್ತು ಊಟ ಸೇರಲಿಲ್ಲ. ನಿದ್ದೆ ಹತ್ತಲಿಲ್ಲ.

× × × ×

ನಾಲ್ಕೈದು ದಿವಸದಿಂದ ಪುಟ್ಟುವಿನ ಸುಳಿವೇ ಇರಲಿಲ್ಲ. 'ಭೂಪ ಈ ಬಾರಿ ಎಲ್ಲೋ ದೊಡ್ಡ ಕಾರ್ಯಕ್ಕೆ ಕೈ ಹಾಕಿದ್ದಾನೆ. ಮೋಟಾರು-ಗೀಟಾರು ಹತ್ತಿಕೊಂಡು ಬರ್ತಾನೋ ಏನೋ' ಎಂದು ನಾನು ಅಂದು ಕೊಂಡೆ. ಹೀಗೆ ಎಂಟ್ಹತ್ತು ದಿವಸಗಳು ಕಳೆದುಹೋದವು.

ಪುಟ್ಟು ಹೋದ ಹದಿನೈದು ದಿವಸ. ನಾನು ಕವಳ ಜಗೆಯುತ್ತಾ ಜಗುಲಿಯ ಮೇಲೆ ಕುಳಿತಿದ್ದೆ. ತಟ್ಟನೆ ಹೊರಗೆ ಆಡುತ್ತಿರುವ ಹುಡು ಗರ ಗೊಂದಲವೆದ್ದಿತು. 'ತಾರುಬಂತು...ತಾರು...' ತಾರು? ನನ್ನ ಎದೆಗುಂಡಿಯೇ ಬಿಚ್ಚಿಹೋಯಿತು. ಅದ್ಯಾರಿಗೇನಾಯಿತಪ್ಪಾ ಈಗ ಎಂದು ನಡುಗುವ ಕೈಯಿಂದ ತಾರನ್ನು ಒಡೆದೆ. 'ಕೂಡಲೇ ಹೊರಡು' ಎಂದಿಷ್ಟೇ ಇದ್ದಿತು. ಕೆಳಗೆ ಪುಟ್ಟುವಿನ ಹೆಸರು. ಮೇಲೆ ನೋಡಿದೆ. ಬಂದದ್ದು ಹಿಂಡಲಗಿ ಜೈಲಿನಿಂದ.

''ಹಿಂಡಲಗಿ ಜೈಲು...? ಪುಟ್ಟುವಿಗೆ ಅಲ್ಲೇನು ಕೆಲಸ?'' ಎಂದು ಹುಬ್ಬಳ್ಳಿಯ ಮೋಟಾರಿನಲ್ಲಿ ಕುಳಿತವ ಚಿಂತಿಸತೊಡಗಿದೆ...'ಭೂಪ ಚಳವಳಿ-ಗಿಳವಳಿ ಮಾಡಿದನೇ? ಪುಟ್ಟು ದೇಶಭಕ್ತನಾದರೂ ಜೈಲಿಗೆ ಹೋಗುವಷ್ಟು ದೇಶಭಕ್ತನಲ್ಲ...ಕಳವು...? ಛೇ. ಪುಟ್ಟುವಿನಿಂದ ಅಂತಹ ಕೆಲಸ ಸಾಧ್ಯವಿಲ್ಲ...ಅಂದರೆ ಮತ್ತೇತಕ್ಕೆ ಜೈಲಿಗೆ ಹಾಕ್ತಾರೆ? ...ಈ ಸರಕಾರದವರ ಸಂಗ್ತಿ ಹೇಳಲಿಕ್ಕೆ ಬರುವುದಿಲ್ಲ. ಕಾರಣವಿಲ್ಲ ದೆಯೂ ಜೈಲಿಗೆ ಹಾಕಿದರೂ ಹಾಕಿದರೇ...ಯಾವದಕ್ಕೂ ಹೋಗಿ ನೋ ಡುವಾ..." ಜೇಬಿನಲ್ಲಿ ನೂರು ರೂಪಾಯಿಯ ಮೂರು ನೋಟು ಗಳಿದ್ದದ್ದರಿಂದ ಧೈರ್ಯವಿದ್ದಿತು.

ಮರುದಿನ ಬೆಳಗಾವಿಯಲ್ಲಿ ಮೋಟಾರಿಳಿದವ ನೆಟ್ಟಗೆ ಹಿಂಡಲಿಗೆ ಹೋದೆ. ಜೈಲು ಅಧಿಕಾರಿಗೆ ನಾನು ಬಂದ ಕಾರ್ಯ ತಿಳಿಸಿದೆ. ಒಬ್ಬ ಸಿಪಾಯಿ ನನ್ನನ್ನು ಒಳಗೆ ಕರೆದುಕೊಂಡು ಹೋದ. ಮೂಲೆಯಲ್ಲಿರುವ ಒಂದು ಕೊಠಡಿಯಲ್ಲಿ ಪುಟ್ಟುವನ್ನು ಕೂಡಿಟ್ಟಿದ್ದರು. ಕೊಠಡಿಯ ಬಾಗಿಲು ತೆಗೆದು ನನ್ನನ್ನು ಒಳಗೆ ಬಿಟ್ಟೊಡನೆಯೇ ಪುಟ್ಟು ನಗುಮುಖದಿಂದ ನನಗೆ ಎದುರ್ಗೊಂಡನು. ಗಡ್ಡ ಸ್ವಲ್ಪ ಮಿತಿಮೀರಿ ಬೆಳೆದಿತ್ತೆ ಹೊರತು ಅವನಲ್ಲಾವ ಮಾರ್ಪಾಡೂ ಕಾಣಲಿಲ್ಲ. 'ಇದೇನೊ ಪುಟ್ಟು? ನೀನು ಇಲ್ಲಿ?'' ಎಂದು ನಾನು ಆತುರದಿಂದ ಕೇಳಿದೆ.

"ಇದಕ್ಕೇನಾಗಿದೆ? ಶ್ರೀ ಕೃಷ್ಣ ಪರಮಾತ್ಮನ ಪವಿತ್ರ ಜನ್ಮಸ್ಥಾನ! ಕೂತುಕೊ ಗುಂಡೂ ಅಸಹ್ಯಪಡಬೇಡ. ನಾಲ್ಕು ದಿನಗಳಿಂದ ನಾನು ಇಲ್ಲಿಯೇ ಇದ್ದೇನೆ...' ಎಂದು ಪುಟ್ಟು ನಗುತ್ತಲೆ ನಡೆದ ಎಲ್ಲ ಸಂಗತಿಗಳನ್ನೂ ವಿವರವಾಗಿ ತಿಳಿಸಿದ.

ಆದದ್ದು ಇಷ್ಟು. ಗೆರಸೊಪ್ಪೆಯ ಕಾಡಲ್ಲಿ ಹಾಳುಬಿದ್ದ ಸ್ಥಳದಲ್ಲಿ ಒಂದೆಡೆ ಗುಡಿಯಲ್ಲಿ ಒಂದು ಪಚ್ಚೆಯ ಮೂರ್ತಿಯನ್ನು ತಾನು ನೋಡಿದುದಾಗಿ ಒಬ್ಬ ಗೌಡನು ಇವನಿಗೆ ಹೇಳಿದನಂತೆ. ಪುಟ್ಟುವು ನನ್ನಿಂದ ರೂಪಾಯಿ ತೆಗೆದುಕೊಂಡು, ಕೆಲವು ರೂಪಾಯಿ ಆ ಗೌಡನ ಕೈಗಿಟ್ಟು ಬೆಚ್ಚಗೆ ಮಾಡಿ ಆ ಮೂರ್ತಿಯಿರುವ ಸ್ಥಳವನ್ನು ಕೇಳಿಕೊಂಡನಂತೆ. ನಂತರ ಒಂದು ದಿನ ಗೆರಸೊಪ್ಪೆಗೆ ಹೋಗಿ ಬಲಿ ಮುಂತಾದ್ದು ಕೊಟ್ಟು ಆ ಮೂರ್ತಿಯನ್ನು ಅಲ್ಲಿಂದ ಎಬ್ಬಿಸಿದನಂತೆ. ಅದರ ಬಣ್ಣ ನೋಡಿದರೆ ಪಚ್ಚೆಯ ಮೂರ್ತಿಯೆಂಬುದರಲ್ಲಿ ಸಂಶಯವೇ ಇದ್ದಿಲ್ಲವಂತೆ. ಅಲ್ಲಿಂದ ಅವನು ನೆಟ್ಟಗೆ ಬೆಳಗಾವಿಗೆ ಬಂದು ಅಲ್ಲಿಯ ಮಾರ್ವಾಡಿಯೊಬ್ಬನಿಗೆ ಅದನ್ನು ತೋರಿಸಿ ಅದು ರಾಜ ಮನೆತನದವರ ಮೂರ್ತಿಯೆಂದೂ ಕಿಮ್ಮತ್ತು ಐವತ್ತು ಸಾವಿರಕ್ಕೆ ಕಡಿಮೆಯಿಲ್ಲವೆಂದೂ ತಿಳಿಸಿದನಂತೆ. ಮಾರ್ವಾಡಿಗೆ ಮೊದಲು ಆಶೆಯಾದರೂ ನಂತರ ಸಂಶಯ ಬಂದು ಪೋಲೀಸರಿಗೆ ಸುದ್ದಿ ತಿಳಿಸಿದನಂತೆ. ಪೋಲೀಸರು ಮೂರ್ತಿಯನ್ನು ಜಪ್ತಿಮಾಡಿ ಇವನನ್ನು ಜೈಲಿಗ್ಯೊದರಂತೆ. ಮೂರ್ತಿ ಎಲ್ಲಿಂದ ಬಂದಿತೆಂದು ಪೀಡಿಸಿ ಕೇಳಿದರಂತೆ. ಅದಕ್ಕೆ ಪುಟ್ಟು ಅದು ತನ್ನ ಮಾಲಕೀ

ದೆಂತಲೂ, ವಂಶಪರಂಪರೆಯಾಗಿ ಬಂದದ್ದೆಂತಲೂ ಸಾಧಿಸಿದನಂತೆ. ನಂತರ ವಜ್ರ ವ್ಯಾಪಾರಿಗಳಿಂದ ಪರೀಕ್ಷಿಸಿ ನೋಡಲಾಗಿ ಅದು ಪಚ್ಚೆಯ ಮೂರ್ತಿಯಲ್ಲವೆಂದೂ, ಜೈನರು ಒಂದು ತರದ ಹಸರು ಕಲ್ಲಿನಿಂದ ಮಾಡಿದ್ದೆಂತಲೂ ಕಂಡುಬಂತಂತೆ. ಇಷ್ಟರ ಮೇಲೆಯೆ ಅವರು ಅವ ನನ್ನು ಬಿಡುವದು ನ್ಯಾಯವಾಗಿದ್ದರೂ ಅವನು ವ್ಯಾಪಾರಿಗಳನ್ನು ಮೋ ಸಗೊಳಿಸಲು ಯತ್ನಿಸಿದನೆಂಬ ಆರೋಪದ ಮೇಲೆ ನೂರಾನಲವತ್ತು ರೂಪಾಯಿ ದಂಡ ಮಾಡಿದರಂತೆ. ಅವನಲ್ಲಿ ಹಣವಿಲ್ಲದ್ದರಿಂದ ನೇರ ಹಿಂಡಲಿಗೆ ತಂದರಂತೆ.

"ಈಗ ಆ ಮೂರ್ತಿ ಎಲ್ಲಿದೆ?'' ಎಂದು ನಾನು ಕೇಳಿದೆ.

"ಅದರ ಮನೆ ಹಾಳಾಗಲಿ. ಅದು ಎರಡು ರೂಪಾಯಿಯನ್ನೂ ಹಡೆಯುವುದಿಲ್ಲ! ಆದಿರಲಿ ಈಗ ನೀನು ರೂಪಾಯಿಗಳನ್ನು ತಂದಿರು ವಿಯಲ್ಲವೇ?"

ಇಲ್ಲವೆಂದು ಹೇಳಿಬಿಡೋಣವೆಂದು ಮನಸ್ಸಾಯಿತು. ಒಂದು ಹದಿನೈದು ದಿನವಿದ್ದು ಬರಲಿ ಇದರಿಂದ ಅವನಿಗೆ ಬುದ್ಧಿಯಾದರೂ ಬರಲಿ. ಅಲ್ಲಿ ಇವನಿಂದ ಬಿದ್ದುಹೋದದ್ದೂ ಅಷ್ಟರಲ್ಲಿಯೇ ಇದೆ. ಎಂದು ಒಂದು ಕ್ಷಣ ಅನಿಸಿತು. ಆದರೆ ಮನಸ್ಸು ಒಪ್ಪಲಿಲ್ಲ. ಇನ್ನೂರು ರೂಪಾಯಿ ಇದೆಯೆಂದು ನುಡಿದೆ. ಮುನ್ನೂರರ ಸುದ್ದಿ ಹೇಳಿದರೆ ಭೂಪ 'ಹೇಗೂ ಇಲ್ಲಿಯ ವರೆಗೆ ಬಂದಿದ್ದೇವೆ. ಮುಂಬೈ ಪುಣೆ ವರೆಗೆ ಹೋಗಿ ತಿರುಗಾಡಿ ಬರುವ' ಎಂದು ಎಲ್ಲಿ ಹೇಳುವನೋ ಎಂದು ನನಗೆ ಭಯವಾಯಿತು.

ಅಂತೂ ದಂಡ ತೆತ್ತು ಪುಟ್ಟುವನ್ನು ಬಿಡಿಸಿಕೊಂಡು ಬಂದೆ.

× × × ×

ಮರುದಿನ ಗುಡ್ಡೆಯ ಮೇಲೆ ನಾವು ಹತ್ತಿ ಕುಳಿತಾಗ ಪುಟ್ಟು ಅದೆಷ್ಟೋ ಹೊತ್ತಿನ ವರೆಗೆ ಮಾತಾಡಲಿಲ್ಲ. ಬಹುಶಃ ಮೂರ್ತಿಯ ಸಂಗತಿ ಅವನ ಮನಸ್ಸು ಕೊರೆಯುತ್ತಿರಬಹುದೆಂದು ಅಂದುಕೊಂಡೆ. ಅವನ ಲಕ್ಷ್ಯವನ್ನು ಬೇರೆ ಕಡೆ ಎಳೆಯಬೇಕೆಂದು, ಸಮುದ್ರದ ಕಡೆಗೆ

ನೋಡುತ್ತ 'ಪುಟ್ಟ್ಯ ಸಮುದ್ರದ ನೀರಿನಿಂದ ಬಂಗಾರ ತೆಗೆಯಬಹುದಂತೆ. ನಿನಗೇನಾದರೂ ಗೊತ್ತಿದೆಯೇ?' ಎಂದು ಕೇಳಿದೆ.

"ಆಂ?" ಎಂದು ಪುಟ್ಟ್ಯ ಕೇಳಿದ. ಅವನ ಕಣ್ಣುಗಳಲ್ಲಿ ಕಾಂತಿ ಬಂದಿತು.

"ಹೌದು. ಆದರೆ ಸಾವಿರ ರೂಪಾಯಿಯ ಬಂಗಾರ ತೆಗೆಯಲು ಎರಡು ಸಾವಿರ ರೂಪಾಯಿ ಖರ್ಚಾಗುವದಂತೆ!"

"ಛ್ಛ" ಎಂದು ಪುಟ್ಟ್ಯ ಒಂದು ಹುಚ್ಚುನಗು ನಕ್ಕುಬಿಟ್ಟ.



# ಬೂದಗಳವು

ನಿಜವಾಗಿ ಹೇಳಬೇಕೆಂದರೆ ನಾನು ಬೂದಗಳವಿಗೆ ಎಂದೂ ಹೋಗಿರಲಿಲ್ಲ. 'ನಿನಗೆಲ್ಲಿ ಮರ ಹತ್ತ್ರೋಕೆ ಬರ್ತದೆಯೊ? ನೀನು ಬೈಲುಸೀಮೇಲಿ ಇದ್ದವ. ಅಲ್ಲಂತೂ ಮೈಲಿಗೊಂದು ಮರ. ಮರಾನೆ ನೋಡದೆ ಇದ್ದವರಿಗೆ ಮರ ಹತ್ತ್ರೋಕೆ ಬರ್ತದಂತೆ!' ಎಂದು ನಾಣಿ ಮೂದಲಿಸಿದಾಗ ಎಂದೂ ಇಲ್ಲದ ಕೋಪ ಬಂದುಬಿಟ್ಟಿತು ನನಗೆ. ಎಷ್ಟೆಂದರೂ ನೋಡಿ, ಹೇಡಿ ಅಂತ ಒಪ್ಪಿಗೊಳ್ಳಲಿಕ್ಕೆ ಆಗ್ತದೆಯೇ? 'ಓಹೋ, ತೆಂಗಿನ ಮರಾನೂ ಇಣಚಿಯಂತೆ ಹತ್ತಬಲ್ಲೆ' ಎಂದು ದೊಡ್ಡ ಗುಳಿಗೆಯನ್ನು ಉರುಳಿಸಿಬಿಟ್ಟೆ. ಸರಿ, ಇಲಿ ಬೋನಿನೊಳಗೆ ಬಿತ್ತು. 'ಹಾಗಾದರೆ ನಾಳೆ ಬೂದಗಳವಿಗೆ ಹೋಗೋಣ. ನಿನ್ನ ಪರಾಕ್ರಮ ತೋರಿಸಿಬಿಡು' ಎಂದು ನಾಣಿ ಹೇಳಿದಾಗ ಎದೆ ಧಸ್ಸೆಂದರೂ ಒಪ್ಪಿಕೊಳ್ಳಬೇಕಾಯಿತು. ಮಾಡಿದ್ದುಣ್ಣೋ ಮಹಾರಾಯಾ.

ಆ ದಿನವೆಲ್ಲ ಯೋಚನೆ ನನಗೆ. 'ಅಲ್ಲಾ ಒಂದಾಳು ಕಟ್ಟೇಮೇಲೆ ನಿಂತ್ಕೊಂಡು ನೋಡಿದರೆ ನನಗೆ ಕಣ್ಣು ತಿರಗ್ತದೆ. ಅಂಥಾದ್ದು ಅಷ್ಟು ಎತ್ತರ ತೆಂಗಿನ ಮರದ ಮೇಲಿಂದ ಕೆಳಗೆ ನೋಡಿದರೆ ಏನಾಗ್ಬೇಕು?...ಅದೂ ಹೋಗ್ಲಿ ಅಷ್ಟು ಎತ್ತರದ ತೆಂಗಿನ ಗಿಡಕ್ಕೆ ಬೇರೆ ಟೊಂಕೇನೂ ಇರೋದಿಲ್ಲ. ಅಂತೂ ಕಪಾಳಮೋಕ್ಷದ ಯೋಗ ಬಂದಿದೆ' ಎಂದು ಯೋಚಿಸಿ ಸಾಕಾಯಿತು. ಆದರೂ ಒಂದು ಬಾರಿ ಪ್ರಯತ್ನಮಾಡಿ ನೋಡೋಣವೆಂದೆ. ಮನೆ ಆಳು ಬೀರನ ಕರೆದುಕೊಂಡು ಹಿತ್ತಲಿಗೆ ಹೋಗಿ 'ಬೀರಾ, ಒಂದು ಸೀಯಾಳ ತೆಗೆ ನೋಡುವಾ' ಎಂದೆ. 'ಸೀಯಾಳ' ಎಂಬ ಶಬ್ದ ಕಿವಿಗೆ ಬಿದ್ದದ್ದೇ ತಡ. ಬೀರ ಆದಾಗಲೇ ಅರ್ಧ ಮರ ಹತ್ತಿಬಿಟ್ಟಿದ್ದ. ಅವನು ಮಂಗದಂತೆ ಮರ ಹತ್ತ್ರೋದು ನೋಡಿ ಆಶ್ಚರ್ಯವಾಯಿತು ನನಗೆ ಬೀರ ಮೊದಲು ಕಂಪನಿಯಲ್ಲಿ ಇದ್ದನೋ ಏನೋ ಎಂದು ಸಂಶಯ ಬಂತು ನನಗೆ. ಬೀರ ಕೆಳಗೆ ಬಂದ ಕೂಡಲೇ ನನಗೂ ಮರ ಹತ್ತ್ರೋದಕ್ಕೆ ಕಲಿಸು ಎಂದು ಕೇಳಿದೆ. 'ಅಯ್ಯೊ, ಒಡೆಯಾ ಅದೇನು ಕಷ್ಟ' ಎಂದವನೆ ಪುನಃ ಮರ ಹತ್ತಿದ. ಅವನಿಗೆ ಹತ್ತಲಿಕ್ಕೆ ಬರುತ್ತಿತ್ತೇ ಹೊರ್ತು ಕಲಿಸಲಿಕ್ಕೆ ಬರುತ್ತಿರಲಿಲ್ಲ. ದೇವರೇ ಗತಿಯೆಂದು ತೆಂಗಿನ ಮರ ಅಪ್ಪಿದೆ.

ಅದೆಷ್ಟೋ ಬಾರಿ ಜಾರಿ ಬಿದ್ದೆ. ಅಂತೂ ಎರಡು ಮೂರು ವಾರಿನ ವರೆಗೆ ಏರಲಿಕ್ಕೆ ಕಲಿತೆ.

ಮರುದಿನ ಊರಲ್ಲಿ ಗೊಂದಲವೇ ಗೊಂದಲ. ಮನೆಯುವರೆಲ್ಲರೂ ತಮ್ಮ ತಮ್ಮ ಒಕ್ಕಲಿಗರಿಗೆ ಹೇಳಿ ಕಳಿಸಿ ತೆಂಗಿನ ಮರವನ್ನು ಕಾಯುಲಿಕ್ಕೆ ಹಚ್ಚಿದರು. ಹರಕು ಮುರಕು ಬೇಲಿಯೆಲ್ಲವನ್ನೂ ಸರಿಪಡಿಸಿದರು. ಬೂದಗಳವಿಗೆ ಹುಡುಗರು ಹೋದರೆ ಅವರಿಗೆ ಆರು ತಿಂಗಳ ಸಜಾ ಮಾಡಿಸುತ್ತೇನೆಂದು ಪಟೇಲರು ಗರ್ಜಿಸಿದರು. ಅದು ಮಾಮೂಲಿನ ಬೆದರಿಕೆ. ಬೋರಜ್ಜನಂತೂ ತನ್ನ ತೋಟಕ್ಕೆ ಬಂದರೆ ತೋಟಿಯಿಂದ ಸುಟ್ಟುಬಿಡುವುದಾಗಿ ಬೆದರಿಕೆ ಹಾಕಿದ. ಇದನ್ನೆಲ್ಲ ಕೇಳಿ ನನ್ನ ಎದೆ ಜಂಗೆಲ್ಲ...ಬಿಟ್ಟು ಹೋದರೂ, ಉಳಿದ ಹುಡುಗರಲ್ಲಿ ಮಾತ್ರ ಎಂದೂ ಇಲ್ಲದ ಉತ್ಸಾಹ ತುಂಬಿತ್ತು. ಎಲ್ಲರ ಮೋರೆಯ ಮೇಲೆಯೂ ಯುದ್ಧಕ್ಕೆ ಹೊರಡುವ ಯೋಧರಂತೆ ವೀರ ಕಳೆ ಮತ್ತು ಆ ಹೊತ್ತು ನಾಣಿ ನನ್ನ ಬೆನ್ನೇ ಬಿಟ್ಟಿರಲಿಲ್ಲ. 'ಎಲ್ಲಿಯಾದರೂ ಗಸ್ತು ಕೊಟ್ಟೇಯೆ? ರಾತ್ರಿ ಹನ್ನೆರಡಕ್ಕೆ ಸರಿಯಾಗಿ ನಿಮ್ಮ ಮನೆಗೆ ಬರ್ತೇನೆ. ತಯಾರಾಗಿರಬೇಕು' ಎಂದು ಎಚ್ಚರಿಕೆ ಕೊಟ್ಟಿದ್ದ. ಆ ಹೊತ್ತು ರಾತ್ರಿ ಸರಿಯಾಗಿ ಅನ್ನವೇ ಸೇರಲಿಲ್ಲ. ನಾಳೆ ಬೆಳಕು ಕಾಣುವದರೊಳಗಾಗಿ ಏನಾಗುತ್ತದೆಯೋ ಎಂಬ ಹೆದರಿಕೆ ನನಗೆ.

ಅಂತೂ ಮಧ್ಯ ರಾತ್ರಿಗೆ ಸರಿಯಾಗಿ ಆ ಶನಿ ಬಂದ. 'ಹೊರಡು. ಎಚ್ಚರಿಕೆಯಿಂದಿರಬೇಕು. ನಮ್ಮಿಬ್ಬರ ಪಾಲಿಗೆ ಬೋರಜ್ಜನ ತೋಟ ಬಂದಿದೆ. ಅವನು ಭಯಂಕರ ಮನುಷ್ಯ' ಬೋರಜ್ಜ! ಗುಂಡಿನಿಂದ ಸುಟ್ಟುಬಿಡುವದಾಗಿ ಹೆದರಿಸಿದ್ದ...ಅಯ್ಯೋ ಈ ಹೊತ್ತೇನೊ ಹೊರಟ ಮುಹೂರ್ತ ಚನ್ನಾಗಿಲ್ಲ. ನಾಣಿ ಕಳುವುದರಲ್ಲಿ ಮಹಾ ಕುಶಲನಂತೆ. ಮೇಲಾಗಿ ಅವನು ಆ ತುಂಟರ ತಂಡದ ಮುಖ್ಯಸ್ಥ. ಆದ್ದರಿಂದಲೇ ಅವನಿಗೆ ಬೋರಜ್ಜನ ತೋಟಕ್ಕೆ ದಾಳಿಮಾಡಲು ಹುಡುಗರಿಗೆ ಆಜ್ಞೆ ಕೊಟ್ಟಿದ್ದನಂತೆ.

ಅಂತೂ ನನ್ನ ಅದೃಷ್ಟ—ಎಂದು ನಾನು ನನ್ನನ್ನೇ ಹಳಿದುಕೊಂಡೆ. ನಾಣಿಯ ಕೈಯಲ್ಲಿ ದೊಡ್ಡದೊಂದು ಹಗ್ಗವಿತ್ತು. ಐದಾರು ಮನೆಗಳ

ಬಾವಿ ಹಗ್ಗವನ್ನು ಕದ್ದು ಅದನ್ನು ತಯಾರಿಸಿದಂತೆ ಕಾಣುತ್ತಿತ್ತು. "ಇದೇಕಯ್ಯಾ ಮತ್ತೆ. ಬೋರಜ್ಜನಿಗೆ ನೇಣುಹಾಕಕೇ?" ಎಂದು ನಾನು ಕೇಳಿದೆ. 'ಅಯ್ಯೋ ಪೆಚ್ಚೇ, ಅಷ್ಟು ತಿಳಿಯೋದಿಲ್ವೇ? ತೆಂಗಿನ ಹಿಂಡಿಗೆ ಮೇಲಿಂದ ಒಗೆದರೆ ಸಪ್ಪಳಾಗೋದಿಲ್ವೇ? ಆದ್ದರಿಂದ ಈ ಹಗ್ಗ ತೆಂಗಿನ ಕಟ್ಟೆ ಸಾವಕಾಶ ಕೆಳಗಿಳಿಸಬೇಕು. ನಿಮಗೆ ಬೈಲುಸೀಮೆ ಜನಕ್ಕೆ ಏನೇನೂ ಗೊತ್ತಿಲ್ಲ." ನಾನು ಗಪ್ಪನಾದೆ.

ಅಂತೂ ಬೋರಜ್ಜನ ಹಿತ್ತಲಕ್ಕೆ ಬಂದು ಮುಟ್ಟಿದೆವು. ನಾಣಿ ನಾನು ಇಬ್ಬರೂ ಸಪ್ಪಳ ಮಾಡದಂತೆ ಬೇಲಿಯ ಒಂದು ಮೂಲೆಯಿಂದ ಒಳಗೆ ನುಸುಳಿದೆವು. 'ಸಪ್ಪಳ ಮಾಡಬಾರದು. ಬೋರಜ್ಜ ಬಹುಶಃ ತನ್ನ ಮನೆ ಮುಂದೆ ಕೂತಿರ್ತಾನೆ. ಮನೆ ಇಲ್ಲಿಂದ ದೂರವಿದೆ. ನಾವು ಅವನಿಗೆ ಕಾಣೋದಿಲ್ಲ. ಅಲ್ನೋಡು! ಅಲ್ಲಿರೋ ಮರಾನಾ ಬೋರಜ್ಜ ಷಿಲೋನದಿಂದ ತರಸನ್ನೆ. ಅದರಂಥಾ ಕಾಯಿ ನಮ್ಮೂರಲ್ಲೇ ಇಲ್ಲಾ ಹೇಗಾದರೂ ಮಾಡಿ ಒಂದು ಹಿಂಡಿಗೆಯನ್ನು ಹಾರಿಸಬೇಕು. ಅಂದರೆ ಬಂದದ್ದಕ್ಕೆ ಸಾರ್ಥಕ." ನಾವು ಸಾವಕಾಶ ಮರದ ಬುಡಕ್ಕೆ ಬಂದೆವು. ನಾಣಿ ಕಿವಿಗೊಟ್ಟು ಆಲಿಸಿದ, ಏನೂ ಸಪ್ಪಳವಿಲ್ಲ. ಸಾವಕಾಶ ಪಿಸು ಗುಟ್ಟಿದ. ನೀನು ಬುಡದಲ್ಲಿಯೇ ನಿಂತಿರು. ನಾನು ಹಿಂಡಿಗೆಯನ್ನು ಸಾವಕಾಶ ಇಳಿಸಿದ ಕೂಡಲೇ ಅದನ್ನು ಹಿಡಿದುಕೊಳ್ಳಬೇಕು. ಸ್ವಲ್ಪ ವಾದರೂ ಸಪ್ಪಳ ಮಾಡಬೇಡ..." ನಾನು 'ಹೂಂ' ಅಂದೆ. ನಾಣಿ ಸಾವಕಾಶ ಮರವೇರಿದ. ಕತ್ತಲೆಯಲ್ಲಿ ಅವನು ಜಾರಿ ಬಿದ್ದರೇನು ಗತಿ ಎಂದು ಹೆದರಿಕೆಯಾಯಿತು. ಅಷ್ಟರಲ್ಲಿ ಮೇಲೆ ಸಪ್ಪಳವಾಗತೊಡಗಿತು. ನಾಣಿ ಹಿಂಡಿಗೆಯನ್ನು ಕೊಯ್ಯುತ್ತಿರುವನೆಂದು ಭಾವಿಸಿಕೊಂಡೆ. ಬೋರಜ್ಜನ ಸುಳಿವೇನಾದರೂ ಇದೆಯೋ ಎಂದು ಅತ್ತಿತ್ತ ನೋಡಿದೆ. ತಟ್ಟನೆ ತಲೆಯ ಮೇಲೆ ಏನೋ ಬಿದ್ದಂತಾಯಿತು. 'ಹೊ' ಎಂದು ಯಾರೋ ಕೂಗಿದರು. ಬೋರಜ್ಜನ ತೋಟ ಕಣ್ಣಲ್ಲಿ ಸುತ್ತಲೂ ತಿರುಗತೊಡಗಿತು. ನಿಂತಂತೆಯೇ ಬಿದ್ದುಬಿಟ್ಟೆ.

ನನಗೆ ಸ್ಮೃತಿ ಬಂದಾಗ ಲಚ್ಚಜ್ಜ ನನ್ನ ಹಾಸಿಗೆಯ ಬಳಿ ಕುಳಿತು ಕೊಂಡು ಗಾಳಿ ಬೀಸುತ್ತಿದ್ದ. ತಲೆಯಲ್ಲಿ ವಿಪರೀತ ನೋವು. ತಲೆಯ

ಮೇಲೆ ಕೈಯಾಡಿಸಿ ನೋಡಿದೆ. ಒಂದು ಪಟ್ಟಿಯನ್ನು ಕಟ್ಟಿದ್ದರು. ಲಚ್ಚಜ್ಜ ಎಲ್ಲವನ್ನೂ ವಿವರಿಸಿದ. ನಾಣಿ ಹಿಂಡಿಗೆ ಕೊಯ್ಯುವ ಕಾಲಕ್ಕೆ ಒಣಗಿದ ತೆಂಗಿನ ಕಾಯೊಂದು ಚೊಟ್ಟು ಮುರಿದು ನನ್ನ ತಲೆಯ ಮೇಲೆ ಬಿದ್ದಿತಂತೆ. ತಲೆಯ ಮೇಲೆ ಕೂದಲು ವಿಪರೀತವಾಗಿ ಇದ್ದದ್ದರಿಂದ ತಲೆ ಒಡೆದು ಹೋಗಲಿಲ್ಲ. ನನ್ನ ಪುಣ್ಯ. ನಾನು ನರಳುತ್ತ ಮತ್ತೊಂ ದೆಡೆಗೆ ತಿರುಗಿದೆ. ಅಲ್ಲೊಬ್ಬ ಮುದುಕ ನನ್ನನ್ನೇ ನೋಡುತ್ತ ಕುಳಿ ತಿದ್ದ. ಅದೇಕೋ ಅವನ ಕಣ್ಣುಗಳೂ ಒದ್ದೆಯಾಗಿದ್ದವು. ನನ್ನ ತಲೆ ಯನ್ನು ಮೃದುವಾಗಿ ಸವರುತ್ತ ಅವನು ಕೇಳಿದ 'ಈಗ ಹೇಗಿದೆ ಮಗು? ಎಂದು. ಅದೇಕೋ ಅವನ ಧ್ವನಿ ನಡುಗುತ್ತಿತ್ತು. ನನಗೆ ಆಗ ಸ್ವಲ್ಪ ಗುಣವೆಂದೊಡನೆಯೇ, ಅವನು ತನ್ನ ಕಣ್ಣೊರಸಿಕೊಳ್ಳುತ್ತಾ ಎದ್ದು ಹೊರಗೆ ಹೊರಟ. ನನಗೊಂದೂ ಅರ್ಥವಾಗಲಿಲ್ಲ. ಲಚ್ಚಜ್ಜನ ಕಡೆ ಗೊಮ್ಮೆ ನೋಡತೊಡಗಿದೆ. ಅವನು ಹೋದಮೇಲೆ ಲಚ್ಚಜ್ಜನನ್ನು ಕೇಳಿದೆ. 'ಲಚ್ಚಜ್ಜ ಇವರಾರು?' ಎಂದು. 'ಓಹೋ, ಅವರೇ ಅಪ್ಪು ಭಟ್ಟರು ನಿನಗೆ ಪೆಟ್ಟುಬಿದ್ದ ಸುದ್ದಿ ಕೇಳಿ ನಿನ್ನನ್ನು ನೋಡಲಿಕ್ಕೆ ಬಂದಿ ದ್ದರು' ಎಂದು ಲಚ್ಚಜ್ಜ ಹೇಳಿದ. 'ಅಲ್ಲ ಲಚ್ಚಜ್ಜ, ನಾನೆಂದೂ ಅವ ರನ್ನು ನೋಡಿದಂತಿಲ್ಲ. ನನ್ನನ್ನು ನೋಡಲಿಕ್ಕೆ ಅವರೇಕೆ ಬರಬೇಕು' ಎಂದು ಆಶ್ಚರ್ಯದಿಂದ ಕೇಳಿದೆ. 'ಹಾ! ಮರೆತಿದ್ದೆ. ನಿನಗೆ ಅಪ್ಪು ಭಟ್ಟರ ವಿಷಯ ಏನೇನೂ ಗೊತ್ತಿಲ್ಲವೆಂದು ತೋರುತ್ತದೆ .ಈ ಊರವ ರೆಲ್ಲರಿಗೂ ಅವರ ಕತೆ ಗೊತ್ತು. ಅದೊಂದು ವಿಷಾದಪೂರ್ವ ಕತೆ. ನಿನ್ನ ತಲೆಹೊಡೆತ ಕಡಿಮೆಯಾಗಿದೆಯೇ?ಹಾಗಾದರೆ ಕೇಳು ಅವರ ಕತೇನಾ' ಎಂದು ಲಚ್ಚಜ್ಜ ಒಂದು ಚಿಮಿಟಿಗೆ ನಶ್ಯವನ್ನು ಏರಿಸಿ ಸುರು ಮಾಡಿದ.

"ರಾಮೂ, ಅಪ್ಪು ಭಟ್ಟರು ನಮ್ಮೂರಿನ ಜಮೀನುದಾರರು. ಎಂಟ್ಹತ್ತು ವರ್ಷಗಳ ಹಿಂದೆ ಜಮೀನುದಾರಿಕೆಯಲ್ಲಿ ಅವರನ್ನು ಸರಿ ಗಟ್ಟುವವರೇ ಇರಲಿಲ್ಲ. ದೊಡ್ಡ ತೆಂಗಿನ ತೋಟವಿದೆಯಲ್ಲ, ಅದು ಅವರದೇ. ಸಾವಿರಗಟ್ಲೆ ತೆಂಗಿನ ಗಿಡಗಳನ್ನು ಅವರು ನಟ್ಟಿದ್ದರು. ಆಗ ತೆಂಗಿನ ಬೇಸಾಯದಲ್ಲಿ ಅವರ ಕೈ ಹಿಡಿದವರೇ ಇಲ್ಲ. ಎಲ್ಲ ಪ್ರಾಂತ ಗಳಿಂದಲೂ ತರ ತರದ ತೆಂಗಿನ ಸಿಸಿಗಳನ್ನು ತರಿಸಿ ನಟ್ಟು ಮರ ಮಾಡಿ

ದ್ದರು. ತೋಟದ ಮೇಲೆ ಅವರಿಗೆ ತುಂಬಾ ಅಭಿಮಾನ. ತೋಟಕ್ಕೆ ಮುಳ್ಳು ಬೇಲಿಯನ್ನು ಮಾಡಿಸಿ ಒಂದು ಕಾಯೂ ಕಳಿಯದಂತೆ ಎಚ್ಚರ ವಹಿಸಿದ್ದರು.

'ರಾಮೂ, ಭಟ್ಟರೆಂದರೆ ಜಮದಗ್ನಿಯ ಮರಿ. ಅವರಿಗೆ ತಾಳ್ಮೆಯೇ ಇರಲಿಲ್ಲ. ಮೂಗಿನ ತುದಿಯ ಮೇಲೆಯೇ ಕೋಪ. ಅದರಿಂದ ಅವರಿಗೆ ಅಂಜಿ ಬೂದಗಳವಿನ ದಿವಸವೂ ಅವರ ತೋಟದ ಕಡೆಗೆ ಯಾರೂ ಸುಳಿಯುತ್ತಿರಲಿಲ್ಲ. ಆದರೆ ಒಮ್ಮೆ ಮಾತ್ರ ಈ ತುಂಟು ಹುಡುಗರಿಗೆ ತಡೆಯುವದಾಗಲಿಲ್ಲ. ಹೇಗಾದರೂ ಮಾಡಿ ಅವರ ತೋಟದ ಕಾಯಿ ಕದ್ದು ಸಮಾರಾಧನೆ ಮಾಡಲೇಬೇಕೆಂದು ನಿಶ್ಚಯಿಸಿದರು. ಈ ಸಾರೆ ಮಾತ್ರ ಅವರು ಒಂದು ಹಂಚಿಕೆ ಮಾಡಿದ್ದರು. ಅಪ್ಪೂ ಭಟ್ಟರ ಮಗನಾದ ಸುಬ್ಬುವನ್ನೂ ತಮ್ಮ ಬಳಗದಲ್ಲಿ ಸೇರಿಸಿಕೊಂಡರು. 'ಅಪ್ಪನ ತೋಟವಾದರೇನಾಯಿತು. ಬೂದಗಳವಿನ ದಿವಸ ಕಾಯಿ ಕದಿಯಲೇಬೇಕು. ಅದು ನಮ್ಮ ಶಾಸ್ತ್ರ' ಎಂದು ಸುಬ್ಬುವನ್ನು ಪುಸಲಾಯಿಸಿದರು. ಪೆದ್ದ ಹುಡುಗ ಒಪ್ಪಿಕೊಂಡ.

ಈ ಹುಡುಗರ ಒಳಸಂಚು ಹೇಗೋ ಅಪ್ಪೂ ಭಟ್ಟರ ಕಿವಿಗೆ ತಲ್ಪಿತು. ಆಗ ಅವರು ಸಿಟ್ಟಿಗೆದ್ದು ತಮ್ಮ ತೋಟಕ್ಕೆ ಕಾಲಿಟ್ಟವರ ಕಾಲನ್ನು ಮುರಿದು ಕೈಯಲ್ಲಿ ಕೊಡುತ್ತೇನೆಂದು ಅಬ್ಬರಿಸಿದರು. ತಮ್ಮ ತೆಂಗಿನಕಾಯಿಯನ್ನು ಮುಟ್ಟಿದವರನ್ನು ಗುಂಡಿನಿಂದ ಸುಟ್ಟುಬಿಡುವುದಾಗಿ ಹೆದರಿಸಿದರು. ಹುಡುಗರನ್ನು ಹೆದರಿಸುವದಕ್ಕಾಗಿಯೇ ಕೋವಿಯಲ್ಲಿ ಹುಸಿ ಮದ್ದು ಹಾಕಿ ಬಾರುಮಾಡಿ ಹೆಗಲಮೇಲಿರಿಸಿಕೊಂಡು ಊರು ತುಂಬೆಲ್ಲ ಸುತ್ತಾಡಿದರು. ಇವರ ಅಬ್ಬರಕ್ಕೆ ಎಷ್ಟೋ ಹುಡುಗರು ಕೈ ಕಾಲು ಬಿಟ್ಟರೂ, ತಮ್ಮ ಮನಸ್ಸು ದೃಢ ನಿಶ್ಚಯಕ್ಕೆ ಬಂತು. ಆದರೆ ಒಂದೇಒಂದು ದುರ್ದೈವದ ಸಂಗತಿಯೆಂದರೆ ತಮ್ಮ ಮಗ ಸುಬ್ಬು ಈ ಸಂಚಿನಲ್ಲಿ ಸೇರಿರುವನೆಂದು ಅಪ್ಪೂ ಭಟ್ಟರಿಗೆ ತಿಳಿಯಲಿಲ್ಲ.

ಅಂತೂ ಆ ದಿನ ರಾತ್ರೆ ಹುಡುಗರಲ್ಲಿ ಕೆಲವರು ಊರ ಗಣಪತಿಗೆ ಕೈ ಮುಗಿದು ಸುಬ್ಬುವನ್ನು ಮುಂದೆ ಮಾಡಿಕೊಂಡು ಅಪ್ಪೂ ಭಟ್ಟರ ತೋಟದ ಕಡೆಗೆ ಹೊರಟರು.

ಇದುವರೆಗೂ ಯಾರೂ ತೋಟಕ್ಕೆ ಕದಿಯಲು ಬಾರದ್ದರಿಂದಲೂ ತಾನು ಹೆದರಿಕೆ ಹಾಕಿದ್ದರಿಂದಲೂ, ಯಾರೂ ಇತ್ತ ಸುಳಿಯರೆಂದು ಅಪ್ಪೂ ಭಟ್ಟರು ಭಾವಿಸಿಕೊಂಡು ತೋಟದ ಗುಡಿಸಿಲಿನಲ್ಲಿ ಕೆಲ ಜನ ರೊಂದಿಗೆ ಇಸ್ಪೀಟು ಆಡುತ್ತ ಕುಳಿತುಕೊಂಡಿದ್ದರು. ಇತ್ತ ಈ ಕಿಲಾಡಿ ಹುಡುಗರು ಬೇಲಿಯನ್ನು ನೆಗೆದು ತೋಟವನ್ನು ಹೊಕ್ಕರು. ಎಲ್ಲರೂ ಒಂದೊಂದು ಹಿಂಡಿಗೆಯನ್ನು ಇಳಿಸಲು ಸುಬ್ಬುವೇ ಮುಂದಾದನು. ಎಷ್ಟೆಂದರೂ ಅಪ್ಪನ ಕೈಯಲ್ಲಿ ನುರಿತವ. ಸರಸರನೆ ಮರವನ್ನು ಹತ್ತಿ ಹಿಂಡಿಗೆಯನ್ನು ಕೊಯ್ಯ ತೊಡಗಿದ. ಅವಸರದಲ್ಲಿ ಕೈ ಹಗ್ಗವನ್ನು ಮರೆತುಬಿಟ್ಟನೋ ಏನೋ. ಕೊನೆಯ ಕಡಿತ ಬಿದ್ದ ಕೂಡಲೇ ಹಿಂಡಿಗೆ "ಧೊಪ್ಪೆಂದು' ನೆಲಕ್ಕೆ ಬಿತ್ತು. ಆ ಸಪ್ಪಳವನ್ನು ಕೇಳಿದೊಡನೆ ಇಸ್ಪೀಟು ಆಟ ಒಮ್ಮಿಂದೊಮ್ಮೆ ನಿಂತಿತು. ಅಪ್ಪೂ ಭಟ್ಟರು ಉರಿದೆದ್ದರು. 'ಇವರನ್ನು ಸುಟ್ಟುಬಿಡುತ್ತೇನೆ' ಎಂದು ಗರ್ಜಿಸುತ್ತ ಕೋವಿಯನ್ನು ತೆಗೆದುಕೊಂಡು ಹೊರಗೆ ಬಂದರು. ಆ ಹೊತ್ತು ಮಧ್ಯಾನ್ಹ ತಾವೇ ಹುಸಿ ಮದ್ದು ತುಂಬಿದ್ದು ಅವರು ಮರೆತಿರಲಿಲ್ಲ. ಅದರಿಂದ ಹುಡು ಗರನ್ನು ಚದುರಿಸಬೇಕೆಂದು ಸಪ್ಪಳ ಬಂದ ದಿಕ್ಕಿನ ಕಡೆಗೆ ಒಂದು ಕುರುಡು ಗುರಿ ಹಾರಿಸಿದರು. ತಟ್ಟನೆ ಯಾರೋ ಚೀರಿದ ಸಪ್ಪಳ ವಾಯಿತು; ಧೊಪ್ಪೆಂದು ಯಾರೊ ಮರದ ಮೇಲಿಂದ ಬಿದ್ದಂತಾಯಿತು ಹುಡುಗರೆಲ್ಲರೂ 'ಹೋ' ಎಂದು ಬೊಬ್ಬೆ ಕುಟ್ಟಿದರು. ಅಪ್ಪೂಭಟ್ಟರ ಎದೆಯಲ್ಲಿ ತಣ್ಣೀರೆರಚಿದಂತಾಯಿತು. ಒಮ್ಮೆಲೇ ಆ ಸ್ಥಳಕ್ಕೆ ಧಾವಿಸಿ ದರು ಅಂಗಾತವಾಗಿ ಬಿದ್ದ ವ್ಯಕ್ತಿಯ ಸುತ್ತಲೂ ಹುಡುಗರು ನೆರೆದಿದ್ದರು. ಅಪ್ಪೂ ಭಟ್ಟರು ನೋಡುತ್ತಾರೆ; ಅಲ್ಲಿ ಬಿದ್ದವ ಸುಬ್ಬು. ಅವನ ಮೈ ಯೆಲ್ಲವೂ ರಕ್ತದಿಂದ ಮುಳುಗಿತ್ತು.

"ರಾಮೂ, ನಿನ್ನ ಮನದ ವಿಚಾರ ನನಗೆ ಗೊತ್ತಾಯ್ತು. ಕೋವಿ ಯಲ್ಲಿ ಹುಸಿ ಮದ್ದು ತುಂಬಿದ್ದರು. ಅದರಿಂದ ಸುಬ್ಬುವಿಗೇನೂ ಅಪಾಯವಾಗುವಂತಿಲ್ಲ. ಗುಂಡಿನ ಸಪ್ಪಳ ಕೇಳಿ ಒಮ್ಮೆಲೇ ಮರದ ಮೇಲಿದ್ದವ ಬೆದರಿ ಕೈ ಬಿಟ್ಟಿರಬೇಕು. ಅದರಿಂದಲೇ ಕೆಳಗೆ ಬಿದ್ದ ಅಂತ ನೀನು ವಿಚಾರ ಮಾಡುತ್ತಿರಬಹುದು. ಅಲ್ವೇ? ಮೊದಲು

ಎಲ್ಲರ ವಿಚಾರವೂ ಹಾಗೆಯೇ ಇತ್ತು. ಆದರೆ ಸುಬ್ಬುವಿನ ಹೆಣವನ್ನು ಪರೀಕ್ಷಿಸಿ ನೋಡಲಾಗಿ ಅವನ ಪಕ್ಕಕ್ಕೆ ಒಂದು ಗುಂಡು ತಗಲಿತ್ತು. ನಂತರ ಶೋಧನೆಗೆ ಆರಂಭವಾಯಿತು. ಅಪ್ಪೂ ಭಟ್ಟರು ಆ ದಿವಸ ಮಧ್ಯಾನ್ಹ ಹುಸಿ ಮದ್ದು ತುಂಬಿದ್ದು ನಿಜ. ಅವರು ಎಂಟು ತಾಸಿನ ಸುಮಾರಿಗೆ ಕೋವಿಯನ್ನು ಗುಡಿಸಿಲಿನಲ್ಲಿಟ್ಟು ಮನೆಗೆ ಬಂದರಂತೆ. ತೋಟವನ್ನು ಕಾಯಲಿಕ್ಕೆ ನಂಜನೆಂಬ ಆಳು ಇದ್ದ. ಅಪ್ಪೂ ಭಟ್ಟರು ಇತ್ತ ಬಂದಕೂಡಲೇ ದೊಡ್ಡ ಕೋಡಗದ ಗುಂಪೇ ಅವರ ತೋಟಕ್ಕೆ ನುಗ್ಗಿತಂತೆ, ಮಾರಾಟಕ್ಕೆಂದು ಅಪ್ಪೂ ಭಟ್ಟರು ತೋಟದಲ್ಲಿ ಸ್ಥಳವಿದ್ದಲ್ಲೆಲ್ಲ ಸೌತೆಯನ್ನು ನಟ್ಟಿದ್ದರು. ಸರಿ ಮಂಗಗಳು ಒಂದೊಂದಾಗಿ ಸೌತೆಯ ಬಳ್ಳಿಯನ್ನು ಖಾಲಿ ಮಾಡುತ್ತ ಬಂದವು. ಅವುಗಳನ್ನು ಓಡಿಸುವುದಕ್ಕಾಗಿ ನಂಜ ಕೋವಿ ತಂದು ಹಾರಿಸಿದ. ಎರಡು ಮೂರು ಬಾರಿ ಹುಸಿ ಗುಂಡೇ ಹಾರಿತು. ಮಂಗಗಳು ಉತ್ತರ ದಿಕ್ಕಿನಿಂದ ದಕ್ಷಿಣಕ್ಕೆ ಹೋದವೇ ಹೊರತು ತೋಟ ಬಿಟ್ಟು ಓಡಲಿಲ್ಲ. ನಂಜನ ಸಹನೆ ಮಿತಿಮೀರಿತು. ಗುಡಿಸಿಲಿನಲ್ಲಿ ಹೋಗಿ ಪಕ್ಕಾ ತೋಟೆಯನ್ನು ತಂದು ಗುಂಡು ಹಾರಿಸಿದೊಡನೆಯೇ ಒಂದು ಮಂಗ ನೆಲಕ್ಕುರುಳಿತು. ಉಳಿದವು ಕಿರ್ರಗುಟ್ಟುತ್ತ ಓಡಿದವು. ನಂಜ ಗೆದ್ದ. ಆದರೆ ಅವನು ಕೋವಿಯಲ್ಲಿದ್ದ ಮತ್ತೊಂದು ಗುಂಡನ್ನು ಹೊರಗೆ ತೆಗೆಯಲೇ ಇಲ್ಲ. ಕೋವಿಯನ್ನು ಅದು ಇದ್ದ ಸ್ಥಳದಲ್ಲಿ ಹಾಗೆಯೇ ಇಟ್ಟುಬಿಟ್ಟ. ಮಂಗನನ್ನು ಹೊಡೆದ ಸುದ್ದಿಯನ್ನು ಅಪ್ಪೂ ಭಟ್ಟರಿಗೆ ತಿಳಿಸಲೇ ಇಲ್ಲ. ಏಕೆಂದರೆ ಅದು ದಿನದ ಕೆಲಸ. ಅಂತೂ ಅಪ್ಪೂ ಭಟ್ಟರು ಕೋವಿಯನ್ನು ಹಾರಿಸಿದಾಗ್ಗೆ ಒಳಗಿದ್ದ ಗುಂಡು ಹಾರಿತು. ಅವರ ಏಕಮಾತ್ರ ಪುತ್ರನಾದ ಸುಬ್ಬುವಿನ ಪ್ರಾಣವನ್ನು ಹೀರಿತು.

"ಮುಂದೇನು ರಾಮೂ, ಆಗೋದೆಲ್ಲ ಆಗಿಯೇ ಹೋಯ್ತು. ಯಾರ ಮೇಲೆ ತಪ್ಪು ಬಿದ್ದರೂ ಉಪಯೋಗವೇನು? ಸತ್ತವನನ್ನು ಬದುಕಿಸೋಕೆ ಆಗ್ತದೆಯೇ? ಅಪ್ಪೂ ಭಟ್ಟರ ಜೀವನವನ್ನು ನಿರಾಶೆಯು ಆವರಿಸಿತು. ಅವರ ಒಬ್ಬನೇ ಪುತ್ರನಾದ ಸುಬ್ಬುವು ಹೋದ ಮೇಲೆ ಜಮೀನು, ತೋಟ ಈ ಎಲ್ಲ ಸಂಪತ್ತಿನ ಉಪಯೋಗವೇನು? ಅವರಿಗೆ

ದುಃಖದಿಂದ ಹುಚ್ಚು ಹಿಡಿದಂತಾಯಿತು. ಅದೆಷ್ಟೋ ದಿನ ವೈವೇಲಿ ಪರಿವೆಯಿಲ್ಲದೆಯೇ ತಿರುಗಾಡಿದರು. ಆದರೆ ಹೀಗೇ ಎಷ್ಟುದಿನ ಕಣ್ಣೀರು ಸುರಿಸೋಕೆ ಆಗ್ತದೆ? ಕೊನೆಗೆ ತಮ್ಮ ದುಃಖವನ್ನು ಹೊತ್ತಿಕ್ಕಿ ಕೊಂಡರು. ಸುಬ್ಬುವು ಸತ್ತ ಜಾಗೆಯಲ್ಲಿ ಒಂದು ಸಮಾಧಿಯನ್ನು ಕಟ್ಟಿಸಿದರು. ಪ್ರತಿ ವರ್ಷ ಬೂದಿ ಹಬ್ಬದ ಮರುದಿನ ತೋಟದಿಂದ ಬಂದ ಉತ್ಪನ್ನದಿಂದ ಸುಬ್ಬುವಿನ ಹೆಸರಿನಲ್ಲಿ ಒಂದು ಸಮಾರಾಧನೆ ನಡೆಯುವಂತೆ ಏರ್ಪಡಿಸಿದರು. ಆ ಹೊತ್ತು ಬಡವರು—ಬಗ್ಗರು ಎಲ್ಲರೂ ಎಲ್ಲಜಾತಿಯವರೂ ಆ ತೋಟದಲ್ಲಿ ಉಂಡು ತೇಗಿ ಸುಬ್ಬುವಿನ ಆತ್ಮಕ್ಕೆ ಶಾತಿಯನ್ನು ಕೋರುವರು. ಬೂದೀಹಬ್ಬದ ದಿನ ಅಪ್ಪೂ ಭಟ್ಟರ ದುಃಖ ಮರಕಳಚುತ್ತದೆ. ಮಕ್ಕಳಂತೆ ತಾವೂ ಇಡೀ ರಾತ್ರಿ ತೋಟದಿಂದ ತೋಟಕ್ಕೆ ತಿರುಗುತ್ತಾರೆ. ನಿನ್ನೆ ರಾತ್ರೆ ನಿನಗೆ ಗಾಯ ವಾದ ಸುದ್ದಿಯನ್ನು ಕೇಳಿ ಇಲ್ಲಿಗೆ ಓಡಿಬಂದಿದ್ದರು. ನಿನ್ನನ್ನು ನೋಡಿ ಅವರಿಗೆ ತಮ್ಮ ಸುಬ್ಬುವಿನ ನೆನಪಾಯಿತು. ಅದರಿಂದಲೇ ಅವರ ದುಃಖ ಉಕ್ಕಿ ಬಂತು. ನಿನಗೆ ಹೆಚ್ಚು ನೋವಾಗಿದ್ದದ್ದನ್ನು ನೋಡಿ ಪುನಃ ಸುಬ್ಬುವಿನ ಸಮಾಧಿ ಕಡೆಗೆ ಹೊರಟು ಹೋದರು. ನೀನು ಹುಷಾರಾಗಿದ್ದರೆ ಅಲ್ಲಿಗೆ ಹೋಗಿ ವೃಷ್ಟಾನ್ನ ಭೋಜನವನ್ನು ಹೊಡೆಯ ಬಹುದಾಗಿತ್ತು. ಯಾರು ಸತ್ತರೇನು? ಯಾರು ಇದ್ದರೇನು? 'ಮುಂಡೇ ಮದ್ವೇಲಿ ಉಂಡವನೇ ಜಾಣ ಅಲ್ವೆ...? ಎಂದು ಲಚ್ಚಜ್ಜ ಕಥೆಯನ್ನು ಮುಗಿಸಿದ.

ಇತಹ ವಿಷಾಧಪೂರ್ಣ ಕತೆಯನ್ನು ಈ ರೀತಿ ವಿನೋದದಲ್ಲಿ ಮುಗಿಸಿದ್ದನ್ನು ನೋಡಿ ನನಗೆ ನಗೆ ಬಂತು. ಆದರೂ ಸಮಾಧಾನ ಪಟ್ಟುಕೊಂಡೆ. ಎಷ್ಟೆಂದರೂ ಲಚ್ಚಜ್ಜ ಇಂತಹ ನೂರೆಂಟು ಸಾವು ನೋಡಿದವ. ನೂರೆಂಟು ಕಷ್ಟ ಅನುಭವಿಸಿದವ. ಬಾಳು ಎಷ್ಟು ಕಹಿ ಯಾಗಿದ್ದರೂ ಅಭ್ಯಾಸ ಬಲದಿಂದ ಅದು ಅವನಿಗೆ ಸಿಹಿಯಾಗಿ ಕಾಣು ತ್ತದೆ...ಮನಸ್ಸು ಮತ್ತೆ ಸುಬ್ಬುವಿನ ಕಡೆ ತಿರುಗಿತು...ಒಮ್ಮೊಮ್ಮೆ ನಗೆಯೂ ಹೊಗೆಯಾಗುವುದು ಸುಳ್ಳೇ? ಬೂದಗಳವೆಂದರೆ ಅದೊಂದು ನೆಪ ದೊರಕಿದರಾಯಿತು...ಆಟವೇನು? ಊಟವೇನು? ತಾನು ಸರ್ವ

ಸಮರ್ಥನೆಂದು ಮನುಷ್ಯ ಎಷ್ಟು ಹೊಗಳಿಕೊಳ್ಳುತ್ತಾನೆ! ಆದರೆ ಇನ್ನೊಂದು ಗಳಿಗೆಗೆ ಏನಾಗುತ್ತದೆಂದು ಅವನಿಗೆ ಗೊತ್ತಾಗುತ್ತದೆಯೇ? ಮೃತ್ಯುವಿನ ನೆಳಲು ಮೈಮೇಲೆ ಬಿದ್ದಿದ್ದರೂ ನಾವಿನ್ನೂ ನಲಿದಾಡುತ್ತಿರಬಹುದು...?" ಇನ್ನೂ ಏನೇನೊ ಯೋಚನೆ ಬಂದು ಮನಸ್ಸನ್ನು ಕದಡಿಬಿಟ್ಟಿತು. ಅದೊಂದು ರಸ ನಿಮಿಷ.

ಅಷ್ಟು ಹೊತ್ತಿಗೆ ಸರಿಯಾಗಿ ಸಮಾರಾಧನೆಯ ಊಟ ಉಂಡು ತೇಗುತ್ತ ನಾಣಿ ಬಂದ. 'ಅಯ್ಯೊ, ನಿಮ್ಮ ಬೈಲು ಸೀಮೆಯವರಿಗೆ ತೆಂಗಿನಕಾಯಿ ಹೊಡತಾ ತಿನ್ನೋಕೂ ಆಗೋದಿಲ್ಲ. ನಮ್ಮ ತಲೇ ಬೊಂಡವೆಲ್ಲ ತೆಂಗಿನಕಾಯಿ ಬೊಂಡ. ಆದಿರಲಿ. ಅಲ್ಲಿ ನನ್ನದೇ ತಪ್ಪು. ನಿನ್ನ ಕೆಳಗೆ ನಿಲ್ಲಿಸೋ ಬದ್ಲು ಮರದ ಮೇಲೆ ಹತ್ತಿಸಿಬಿಟ್ಟಿದ್ದರೆ...?

"ಸುಬ್ಬುವಿನಂತೆ ನನ್ನ ಸಮಾಧಿಯನ್ನೂ ಕಟ್ಟಬೇಕಾಗಿತ್ತು" ಎಂದು ನಾನು ನಕ್ಕೆ.

# ಸೂರ್ಯಗ್ರಹಣ

೧

ಆ ಹೊತ್ತು ಬೆಳಿಗ್ಗೆ ಶಾಲೆಗೆ ಹೋದಾಗ ಮೇಸ್ಟ್ರು "ಮಧ್ಯಾಹ್ನ ರಜೆ; ಶಾಲೆ ಇಲ್ಲ" ಎಂತ ಹೇಳಿಬಿಟ್ಟರು. ಆಗ ಸೀನಿಗೆ ಇಂತಿಷ್ಟೇ ಆನಂದವಾಯಿತೆಂದು ಹೇಳಲಾಸಲ್ಲ. 'ಮಧ್ಯಾಹ್ನ ಗಡುಚಾದ ಗಣಿತದ ವಿಷಯುವಿತ್ತು; ಈಗ ಅದು ತಪ್ಪಿತಲ್ಲ' ಎಂಬುದೇ ಅವನ ಆನಂದಕ್ಕೆ ಕಾರಣ. ಈ ಆನಂದದ ಜೊತೆಯಲ್ಲಿ 'ರಜೆ ಏಕೆ ಕೊಟ್ಟರು?' ಎಂಬ ಕುತೂಹಲವೂ ಉತ್ಪನ್ನವಾಯಿತು. ಅಂಜುತ್ತ ಮೇಸ್ಟ್ರಿಗೆ ಕೇಳಿದ. 'ಈ ಹೊತ್ತು ಸೂರ್ಯಗ್ರಹಣ; ಅದರಿಂದಲೆ ರಜೆ ಕೊಟ್ಟದ್ದಾರೆ' ಎಂದು ಅವರು ಉತ್ತರವಿತ್ತರು. ಅಷ್ಟರಲ್ಲಿ ಮತ್ತೊಬ್ಬ ಕಿಲಾಡಿ ಪ್ರಶ್ನೆಹಾಕಿದ "ಸರ್, ಸೂರ್ಯಗ್ರಹಣ ಹೇಗಾಗುತ್ತೆ?" ಅಂತ. ಈ ಪ್ರಶ್ನೆಗಳಿಂದ ಮೇಸ್ಟ್ರಿಗೆ ಕಿರಿಕಿರಿಯೆನಿಸಿದರೂ ಹುಡುಗರ ಉತ್ಸಾಹ ಕುಗ್ಗಿಸಬಾರದೆಂದು ಹೇಳತೊಡಗಿದರು. "ಸೂರ್ಯನ ಸುತ್ತಲೂ ಚಂದ್ರ ಭೂಮಿ ಮೊದಲಾದ ಗ್ರಹಗಳು ತಿರುಗುತ್ತಿರುತ್ತವೆ. ಹೀಗೆ ತಿರುಗುವಾಗ್ಗೆ ಒಮ್ಮೊಮ್ಮೆ ಸೂರ್ಯ ಮತ್ತು ಭೂಮಿಯ ನಡುವೆ ಅಡ್ಡವಾಗಿ ಚಂದ್ರ ಬಂದುಬಿಡುತ್ತಾನೆ. ಆಗ ನಮಗೆ ಸೂರ್ಯನ ಕೆಲವು ಭಾಗ ಕಾಣೋದಿಲ್ಲ. ಆಗ ನಾವು ಸೂರ್ಯಗ್ರಹಣವಾಯಿತೆಂದು ಅನ್ನುತ್ತೇವೆ." ಹುಡುಗರಿಗೆ ತಲೆ ಬುಡ ಎರಡೂ ಗೊತ್ತಾಗಲಿಲ್ಲ. ಆದರೂ ಅವರು ಅದಕ್ಕೆ ಹೆಚ್ಚು ಲಕ್ಷ್ಯ ಕೊಡದೆ, ಮನೆಗೆ ಓಡಿದರು. "ಅಲ್ಲ ಸೂರ್ಯ ಇದ್ದಾಗ ಚಂದ್ರ ತನ್ನ ಮೋರೇನೆ ತೋರಿಸೋದಿಲ್ಲ. ಹೀಗಿರುವಾಗ ಸೂರ್ಯ ಮತ್ತು ಭೂಮಿಯ ನಡುವೆ .ಸೂರ್ಯನ ಮುಂದೆ ಧಡಾಧಡಿ ಬಂದು ನಿಲ್ಲುವ ಧೈರ್ಯ ಅವನಿಗೆ ಆದೀತೆ?" ಎಂದು ಯೋಚಿಸುತ್ತ ಸೀನಿ ಮನೆಗೆ ಬಂದ.

ಆ ಹೊತ್ತು ಹತ್ತು ಘಂಟೆಗೆ ಮನೆಯಲ್ಲಿ ಊಟದ ತಯಾರಿಯಾಗಿತ್ತು. 'ಮಧ್ಯಾಹ್ನ ನಾಲ್ಕಕ್ಕೆ ಗ್ರಹಣ. ಪ್ರದೋಶಕಾಲದಲ್ಲಿ ಯಾರೂ ಏನೂ ತಿನ್ನಬಾರದು, ಬೇಗನೆ ಊಟ ಮುಗಿಸಿಕೊಳ್ಳಿರಿ" ಎಂದು ಅಜ್ಜಿ ಕೂಗಾಟಕ್ಕಿಟ್ಟಿದ್ದಳು. ಊಟಕ್ಕೆ ಕುಳಿತಾಗ ಸೀನಿಯು ಬೇಕಂತಲೇ 'ಅಜ್ಜಿ ಸೂರ್ಯಗ್ರಹಣ ಹೇಗಾಗುತ್ತೆ?' ಎಂದು ಕೇಳಿದ. 'ರಾಹುವೆಂಬ

ಒಬ್ಬ ರಾಕ್ಷಸನು ಇದ್ದಾನೆ. ಸೂರ್ಯನಿಗೂ ಅವನಿಗೂ ಬದ್ಧ ದ್ವೇಷ. ಸೂರ್ಯನನ್ನು ನೋಡಿದ ಕೂಡಲೇ ರಾಹುವು ಅವನನ್ನು ಹಿಡಿಯಲು ಹೋಗುತ್ತಾನೆ. ಆಗ ರಾಹುವಿನ ನೆರಳು ಸೂರ್ಯನ ಮೇಲೆ ಬೀಳುತ್ತದೆ. ಆಗ ಸೂರ್ಯಗ್ರಹಣ ಹಿಡಿಯುತ್ತದೆ. ಈಗಲೇ ಹೊಟ್ಟೆತುಂಬ ಉಣ್ಣು; ಸಂಜೆ ಹನ್ನೆರಡರ ವರೆಗೂ ಏನೂ ತಿನ್ನಬಾರದು' ಎಂದು ಹೇಳಿದಳು. ಸೀನಿಯು ಹೊಟ್ಟೆ ಹಿಡಿಸುವಷ್ಟು ತಿಂದ. ಇನ್ನೇನು, ಇನ್ನು ಒಂದು ತುತ್ತೂ ಒಳಗೆ ಹೋಗೋದಿಲ್ಲ ಎನ್ನುವ ಸ್ಥಿತಿಯಾದಕೂಡಲೇ ಎಲೆ ಬಿಟ್ಟು ಎದ್ದ.

ಬೇಗ ಊಟವಾದದ್ದರಿಂದ ಮಧ್ಯಾನ್ಹ ಸೀನಿಗೆ ಹೊತ್ತೇ ಹೋಗಲಿಲ್ಲ. 'ಅಭ್ಯಾಸವನ್ನಾದರೂ ಮಾಡೋಣವೇ?' ಎಂಬ ಆಲೋಚನೆ ಬಂತು. ಆದರೆ ಕೂಡಲೇ 'ಛೆ! ಈ ಹೊತ್ತು ಸೂರ್ಯ ಗ್ರಹಣ. ಇಂಥ ದಿವಸದಲ್ಲಿ ಅಭ್ಯಾಸಮಾಡೋದೆ? ಪಾಪ! ಸೂರ್ಯನಿಗೆ ಅಂತಹ ಸಂಕಟವೊದಗಿದಾಗ ನಾನು ಅಭ್ಯಾಸಮಾಡುವದೆಂದರೇನು? ಮಹಾಪಾಪಕರ' ಎಂದು ತನ್ನಷ್ಟಕ್ಕೆ ತಾನೇ ಹೇಳಿಕೊಂಡ. ಮತ್ತೆ ಸೂರ್ಯಗ್ರಹಣದ ನೆನಪಾಯಿತು. 'ಅಲ್ಲ ಮೇಸ್ಟ್ರು ಹೇಳಿದ್ದಕ್ಕೂ ಅಜ್ಜಿ ಹೇಳಿದ್ದಕ್ಕೂ ತಾಳ-ಮೇಳವೇ ಇಲ್ಲವಲ್ಲ! ಮೇಸ್ಟ್ರು ಸುಳ್ಳು ಹೇಳಿದರೇ? ಛೆ. ಶಕ್ಯವಿಲ್ಲ ಆದರೆ ಅಜ್ಜಿಯೂ ಸುಳ್ಳು ಹೇಳೊಲ್ಲ. ಇವತ್ತು-ನಾಳೆ ಕಣ್ಣು ಮುಚ್ಚುವ ಮುದುಕಿ ಸುಳ್ಳುಹೇಳಿ ಪಾಪವನ್ನು ಏಕೆ ಕಟ್ಟಿಕೊಳ್ಳುವಳು? ಅಂದಮೇಲೆ ಮೇಸ್ಟ್ರು ಸುಳ್ಳು ಹೇಳಿರಬೇಕು. ನಾಳೆ ಶಾಲೆಯಲ್ಲಿ ಕೇಳಿಯೇಬಿಡುವ' ಎಂದು ನಿಶ್ಚಯಿಸಿದ. ಕುಳಿತು ಬೇಜಾರಾದ್ದರಿಂದ ನದಿಯ ದಂಡೆಗಾದರೂ ಹೋಗಿಬರೋಣವೆಂದು ಯೋಚಿಸಿ ನದಿಯಕಡೆಗೆ ಓಡಿದ.

ಊರ ಹೊರಗೆ ಶರಾವತಿ ನದಿಯು ಹರಿಯುತ್ತಿತ್ತು. ನದಿಯ ದಂಡೆಯ ಮೇಲೆ ನಿಂತರೆ ದೂರದಲ್ಲಿ ಅಳವೆ(ಸಂಗಮ)ಯ ರಮಣೀಯ ದೃಶ್ಯವು ಕಾಣುತ್ತಲಿದ್ದಿತು. ನದಿಯ ನೀರು ಸಮುದ್ರದಲ್ಲಿ ಪ್ರವೇಶಿಸಲು ಯತ್ನಿಸುವಾಗ ಸಮುದ್ರದ ತೆರೆಗಳು ಅದನ್ನು ಹಿಂದಕ್ಕಟ್ಟುವ ದೃಶ್ಯವು ಅತಿ ಮನೋಹರವಾಗಿತ್ತು. ಆ ನದೀ ದಂಡೆಯೆಂದರೆ ಸೀನಿಗೆ ಪಂಚಪ್ರಾಣ. ಅಂಕುಡೊಂಕಾಗಿ ಭೋರ್ಗರೆಯುತ್ತ ಹರಿಯುತ್ತಿರುವ ಆ ನದಿ;

ನದಿಯ ಮೇಲಿಂದ ಹಾಯ್ದು ಬರುತ್ತಿರುವ ಆ ತಂಗಾಳಿ; ತಂಗಾಳಿಯಿಂದ ಬೀಸುತ್ತಿರುವ ದಂಡೆಯ ಮೇಲಿನ ಆ ಗಾಳೀಮರಗಳು, ನದಿಯ ಮೇಲೆ ಅಲ್ಲಲ್ಲಿ ಹೋಗುತ್ತಿರುವ ಆ ಮಚಿವೆಗಳು; ಕಪ್ಪಾದ ಮಚಿವೆಗಳ ಮೇಲೆ ಗಾಳಿದುಂಬಿ ರಮಣೀಯವಾಗಿ ತೋರುವ ಆ ಬಿಳಿಯ ಹಾಯಿ; ಹಾಯಿಗೆ ಆಧಾರವಾಗಿ ನಿಂತಿರುವ ಆ ಹಾಯಿಗಂಬ; ಇವುಗಳೆಲ್ಲವನ್ನೂ ನೋಡಿದಾಗ ಸೀನಿಯ ಮನಸ್ಸು ಈ ಲೋಕದಿಂದ ಹಾರಿಹೋಗಿ ಯಾವುದೋ ಒಂದು ಅವರ್ಣನೀಯ ರಾಜ್ಯದಲ್ಲಿ ವಿಹರಿಸುತ್ತಿತ್ತು.

ಹೊಳೆಯ ದಂಡೆಗೆ ಬಂದಮೇಲೆ ಸೀನಿಯು ಸೂರ್ಯಗ್ರಹಣವನ್ನು ಮರೆತನು. ದಡದ ಮೇಲೆ ದೋಣಿಯೇನಾದರೂ ಇದೆಯೇ? ನೀರಿನಲ್ಲಿ ಸ್ವಲ್ಪ ಆಟವನ್ನಾದರೂ ಆಡುವ' ಎಂದು ಯೋಚಿಸಿ ಉದ್ದವಾದ ದಂಡೆಯ ಮೇಲೆ ತನ್ನ ದೃಷ್ಟಿಯನ್ನು ಪಸರಿಸಿದನು. ದೂರದಲ್ಲಿ ಗಾಳೀಮರದ ಬುಡದಲ್ಲಿ ಒಂದು ದೋಣಿಯು ಕಾಣಿಸಿತು. ಕೂಡಲೇ ಸೀನಿ ಅತ್ತ ಓಡಿದ. ಮರದ ಸಮೀಪಕ್ಕೆ ಬಂದಂತೆಲ್ಲ ಮರದ ಬುಡದಲ್ಲಿ ಕುಳಿತ ಒಂದು ವ್ಯಕ್ತಿ ಸೀನಿಗೆ ಕಾಣಹತ್ತಿತು. ತೀರ ಹತ್ತರ ಬಂದ ಆ ವ್ಯಕ್ತಿಯು ಲಚ್ಚಜ್ಜನೆಂದು ಸೀನಿಗೆ ತಿಳಿಯಿತು. ಲಚ್ಚಜ್ಜನನ್ನು ನೋಡಿದ ಕೂಡಲೇ ಸೀನಿಯ ಆನಂದವು ಮೇರೆದಪ್ಪಿತು. ಏಕೆಂದರೆ 'ಸಂಜೆಯವರೆಗೆ ಇನ್ನು ಬೇಜಾರು ಬರುವುದಿಲ್ಲ. ಶಕಸೇನ ರಾಜಪುತ್ರನ ಕತೆ ಹೇಳೆಂದು ಲಚ್ಚಜ್ಜನಿಗೆ ಕೇಳಿದರಾಯಿತು' ಎಂದು ಅವನ ಮನಸ್ಸಿನಲ್ಲಿ ಹೊಳೆದಿತ್ತು.

ಲಚ್ಚಜ್ಜನ ನಿಜವಾದ ಹೆಸರು ಲಕ್ಷ್ಮಣರಾಯನೆಂದು. ಅವನ ವಯಸ್ಸು ಅರವತ್ತಕ್ಕೆ ಮೀರಿರಬಹುದು. ಅವನ ಮೂವತ್ತೆರಡೂ ಹಲ್ಲುಗಳು ಬಿದ್ದುಹೋಗಿದ್ದರೂ ಅವನು ಇನ್ನೂ ನೋಡಲಿಕ್ಕೆ ಸಶಕ್ತನಾಗಿಯೇ ಇದ್ದ. ನಮ್ಮೂರ ಸುತ್ತಲ್ಲೆಲ್ಲೂ ಅವನಂಥ ಈಜುಗಾರ ಮತ್ತೊಬ್ಬನಿಲ್ಲ. ಲಚ್ಚಜ್ಜನನ್ನು ಕಂಡರೆ ನಮ್ಮೂರ ಹುಡುಗರಿಗೆ ಅತೀವ ಆನಂದ. ಏಕೆಂದರೆ ದಿನಾಲು ಸೂರ್ಯಾಸ್ತ ಸಮಯದಲ್ಲಿ ಹೊಳೆಯ ದಂಡೆಯ ಮೇಲೆ ತನ್ನ ಸುತ್ತಲೂ ಮಕ್ಕಳನ್ನು ಕೂಡಿಸಿ ಅವರಿಗೆ ಚಿತ್ರವಿಚಿತ್ರವಾದ ಕತೆಗಳನ್ನು ಹೇಳುತ್ತಿದ್ದ. ಮಕ್ಕಳಿಗೆ ಈಜು ಕಲಿಸುತ್ತಿದ್ದವನೂ ಅವನೆ.

ಸೀನಿಯು ಹತ್ತಿರ ಬಂದಕೂಡಲೇ ಲಚ್ಚಜ್ಜನು ತಗ್ಗಿಸಿದ ತಲೆಯನ್ನು ಮೇಲಕ್ಕೆತ್ತಿದ. ಅವನ ಕಣ್ಣುಗಳು ಏಕೋ ಒದ್ದೆಯಾಗಿದ್ದವು. ಅವನ ಮುಖವು ಬಾಡಿದ್ದಿತು. ಅವನ ಆ ರೀತಿಯನ್ನು ನೋಡಿದ ಮಾತ್ರದಿಂದಲೇ ಸೀನಿಯ ಉತ್ಸಾಹವು ಕುಗ್ಗಿತು. ಲಚ್ಚಜ್ಜನಿಗೂ ಗ್ರಹಣಹಡಿದಿದೆಯೆಂದು ಚಿಂತಿಸಿದನು. ಲಚ್ಚಜ್ಜನ ಬೆನ್ನಮೇಲೆ ಕೈಯಿಟ್ಟು ಮೆತ್ತಗೆ "ಲಚ್ಚಜ್ಜಾ, ಈ ಹೊತ್ತು ಸೂರ್ಯಗ್ರಹಣದ ದಿವಸವಲ್ಲವೇ?" ಎಂದು ಕೇಳಿದ. ಲಚ್ಚಜ್ಜ ಸಾವಕಾಶವಾಗಿ ನುಡಿದ 'ಹೌದು ಮಗು, ಚಂದ್ರಗ್ರಹಣದ ದಿವಸವೂ ಅಹುದು'. ಸೀನಿ ತಬ್ಬಿಬ್ಬಾದ. 'ಹಾಗಂದರೇನಜ್ಜಾ? ನಮ್ಮ ಮೇಸ್ತ್ರು ಅಜ್ಜಿ ಎಲ್ಲಾ ಸೂರ್ಯಗ್ರಹಣವೆಂದು ಹೇಳಿದರು. ನೀನು ಚಂದ್ರಗ್ರಹಣದ ಸುದ್ದಿಯನ್ನು ಹೇಳುತ್ತಿರುವೆಯಲ್ಲಾ" ಎಂದು ಅಚ್ಚರಿಯಿಂದ ನುಡಿದ. ಲಚ್ಚಜ್ಜನು ಸೀನಿಯನ್ನು ಎಳೆದು ತನ್ನ ಮುಂದೆ ಕರಿಸಿಕೊಳ್ಳುತ್ತಾ "ಹೌದು, ಸೀನೀ ಈ ದಿವಸ ಸೂರ್ಯಗ್ರಹಣದ ದಿವಸವೂ ಅಹುದು; ಚಂದ್ರಗ್ರಹಣದ ದಿವಸವೂ ಅಹುದು. ನಿನಗೆ ಚಂದ್ರಗ್ರಹಣದ ವಿಷಯ ಗೊತ್ತಿಲ್ಲವೆಂದು ಕಾಣುತ್ತೆ ಅದನ್ನೇ ಹೇಳುತ್ತೇನೆ" ಎಂದು ಹೇಳತೊಡಗಿದನು. ಲಚ್ಚಜ್ಜನು ಯಾವುದೋ ಒಂದು ಕತೆ ಹೇಳುತ್ತಿರುವನೆಂದು ಭಾವಿಸಿ ಸೀನಿ ಉತ್ಸಾಹದಿಂದ ಕೇಳತೊಡಗಿದ.

೨

"ಸೀನೀ ನನ್ನ ಹೆಸರು ಲಚ್ಚಜ್ಜ—ಲಕ್ಷ್ಮಣರಾಯನೆಂದು ನಿನಗೆ ಗೊತ್ತದೆ ನನಗೊಬ್ಬ ರಾಮಚಂದ್ರನೆಂಬ ಅಣ್ಣನಿದ್ದ. ರಾಮ-ಲಕ್ಷ್ಮಣ ನಾವಿಬ್ಬರೂ ಅವಳಿ-ಜವಳಿ ಮಕ್ಕಳು. ಒಬ್ಬನನ್ನು ನೋಡಿದರೆ ಮತ್ತೊಬ್ಬನನ್ನು ನೋಡುವದು ಬೇಡ. ನಮ್ಮ ಮನೆಯವರು ಕೂಡ ಒಮ್ಮೊಮ್ಮೆ ಒಬ್ಬನಿಗೆ ಮತ್ತೊಬ್ಬನ ಹೆಸರಿನಿಂದ ಕರೆದು ತಬ್ಬಿಬ್ಬಾಗುತ್ತಿದ್ದರು. ಮುದ್ದಿಗಾಗಿ ನನ್ನನ್ನು ಲಚ್ಚನೆಂದೂ ನನ್ನ ಅಣ್ಣನನ್ನು ಚಂದ್ರನೆಂದೂ ಕರೆಯುತ್ತಿದ್ದರು.

ನಿಮಗೆಲ್ಲ ಈಜು ಕಲಿಸಿದವನು ನಾನೇ. ನನಗಿಂತಲೂ ಚಂದ್ರನಿಗೆ ಈಜು ಚನ್ನಾಗಿ ಬರುತ್ತಿತ್ತು. ಈಜುವದರಲ್ಲಿ ಅವನನ್ನು ಮೀನಕ್ಕೆ

ಅಥವಾ ಕೊರ್ವರ್ಕ್ಕೆ ಹೋಲಿಸಬಹುದಾಗಿತ್ತು. ಕಾಲುಗಳು ಬಿಗಿಯು ಲ್ಪಟ್ಟಿದ್ದರೂ ಸಹ ಈಚೆ ದಡದಲ್ಲಿ ಬಿದ್ದವನು ಆಚೆ ದಡಕ್ಕೆ ಹೋಗಿ ಪುನಃ ಬರುತ್ತಿದ್ದ. ಈ ನದಿಯಲ್ಲಿ ಬಿದ್ದ ಎಷ್ಟೋ ಜನ ನಮ್ಮೂರಿನವ ರನ್ನು ಬದುಕಿಸಿದ್ದಾನೆ. ಹೀಗೆ ಬದುಕಿದವರಲ್ಲಿ ನಮ್ಮೂರ ಈಗಿನ ಪಟೀ ಲರ ತಂದೆ–ಗೋಪಾಲರಾಯರೂ ಒಬ್ಬರು.

ಗೋಪಾಲರಾಯರನ್ನು ನೀನು ನೋಡಿಲ್ಲ. ಅವರು ತೀರಿಹೋಗಿ ಸುಮಾರು ಇಪ್ಪತ್ತು ವರ್ಷಗಳಾದವು. ಅವರು ಭಾರೀ ಆಸಾಮಿ. ಅವರ ಹೆಣವನ್ನು ನನ್ನಂತಹ ಆರುಮಂದಿ ಪ್ರಯಾಸದಿಂದ ಹೊರಬೇಕಾಯ್ತು. ಇದರಿಂದ ಅವರ ದೇಹದ ಕಲ್ಪನೆ ನಿನಗೆ ಬಂದಿರಬಹುದು. ಒಮ್ಮೆ ಗಣೇಶಚೌತಿಯ ಮರುದಿನ ಗಣಪತಿಯನ್ನು ಕಳಿಸುವುದಕ್ಕೆಂದು ಊರವ ರೆಲ್ಲರೂ ಸೂರ್ಯಾಸ್ತ ಸಮಯದಲ್ಲಿ ನದಿಗೆ ಬಂದರು. ಆ ವರುಷ ಬಹಳ ಮಳೆಯಾದದ್ದರಿಂದ ನದಿಗೆ ನೆಗಸು ಬಂದಿತ್ತು. ನೀರಿನ ವೇಗವು ಈಗಿನ ಮೋಟಾರುಗಾಡಿಯ ವೇಗವನ್ನೂ ಮೀರಿತ್ತು. ನದಿಯಲ್ಲಿ ತೆಂಗಿನಕಾಯನ್ನು ಬಿಸಾಡಿದರೆ ಕಣ್ಮುಚ್ಚಿ ತೆರೆಯುವದರೊಳಗೆ ಅದು ಕೂಗಳತೆಯ ದೂರ ಹೋಗಿಬಿಡುತ್ತಿತ್ತು. ಕುತ್ತಿಗೆಗೆ ನೀರು ಬರುವ ವರೆಗೆ ನದಿಯಲ್ಲಿ ಇಳಿದು ಗಣಪತಿಯನ್ನು ನೀರಿನಲ್ಲಿ ಬಿಡುವದು ನಮ್ಮ ಸಂಪ್ರದಾಯವಷ್ಟೆ! ಆದರೆ ಅಂಥ ಸೆಳವುಳ್ಳ ನದಿಯಲ್ಲಿ ಇಳಿಯಲು ಹೆದರಿ ಊರವರೆಲ್ಲರೂ ದಂಡೆಯ ಮೇಲೆಯೇ ನಿಂತು ಗಣಪತಿಯನ್ನು ನದಿಗೆ ಹಾಕಿದರು. ಆದರೆ ಗಣಪತಿಯನ್ನು ನದಿಯಲ್ಲಿ ಈ ಪ್ರಕಾರ ಬಿಸಾಡಲಿಕ್ಕೆ ಪಟೀಲ ಗೋಪಾಲರಾಯರು ಒಡಂಬಡಲಿಲ್ಲ. ಊರಿಗೆ ಪಟೀಲರೇ ಶ್ರೇಷ್ಠ, ಅದರಿಂದ ಅವರ ಮನೆಯ ಗಣಪತಿಯೇ ಎಲ್ಲ ಗಣ ಪತಿಗಳಿಗಿಂತಲೂ ಶ್ರೇಷ್ಟ. ಇಂಥ ಗಣಪತಿಗೆ ವಿಶೇಷತರದ ಬಹುಮಾನ ಬೇಡವೆ? ಅದರಿಂದ ತಮ್ಮ ಗಣಪತಿಯನ್ನು ನಡುನದಿಯಲ್ಲಿ ಮುಳುಗಿಸ ಬೇಕೆಂದು ಗೋಪಾಲರಾಯರ ಇಚ್ಛೆ; ತಾನು ಈಜುತ್ತ ಹೋಗಿ ಅದನ್ನು ನಡುನದಿಯಲ್ಲಿ ಬಿಡುವೆನೆಂದು ಚಂದ್ರ ಹೇಳಿದ. ಅದಕ್ಕೆ ಪಟೀಲರು ಒಪ್ಪಲಿಲ್ಲ. ತಮ್ಮ ಮನೆ ಗಣಪತಿಯನ್ನು ತಾವೇ ಬಿಡಬೇಕೆಂದು ಅವರ ಹಟ. ಸೂರ್ಯಾಸ್ತ ಸಮಯದಲ್ಲಿ ಅಂತಹ ಭಯಂಕರ ನದಿಯಲ್ಲಿ

ಇಳಿಯುವದು ಅವಿವೇಕತನವೆಂದು ಜನರು ಎಷ್ಟು ಹೇಳಿದರೂ ಕೇಳದೆ ಗೋಪಾಲರಾಯರು, ಮಳೆಗಾಲವೆಂದು ನದಿಯಿಂದ ಮೇಲಕ್ಕೆಳೆದು ಬಿಟ್ಟಿದ್ದ ದೋಣಿಗಳಲ್ಲೊಂದನ್ನು ಎಳೆದುಕೊಂಡರು. ಅದರಲ್ಲಿ ಮೂರು ಜನರು ಪ್ರಯಾಸದಿಂದ ಕುಳಿತುಕೊಳ್ಳಬಹುದಾಗಿತ್ತು. ಗೋಪಾಲ ದೋಣಿಯಲ್ಲಿ ಕೂತು ತಮ್ಮ ತೊಡೆಯಮೇಲೆ ಗಣಪತಿಯನ್ನು ಇಟ್ಟು ಕೊಂಡರು. ಚಂದ್ರನು ಕೈಗೆ ಹುಟ್ಟನ್ನು ತೆಗೆದುಕೊಂಡ. ಅವರೊಡನೆ ಹೊಳೆಯಲ್ಲಿ ಇಳಿಯಲು ಪೂಜೆಯ ಭಟ್ಟರು ಒಡಂಬಡಲಿಲ್ಲ. ದಕ್ಷಿಣೆ ತಪ್ಪಿಹೋಗುತ್ತದೆಂದು ಅವರು ಅನುತಾಪ ಪಟ್ಟರೂ, ದಕ್ಷಿಣೆಗಿಂತಲೂ ಪ್ರಿಯವಾದ ತಮ್ಮ ಪ್ರಾಣವನ್ನು ನದಿಗೆ ಬಲಿಗೊಡಲು ಒಪ್ಪಲಿಲ್ಲ. ಅವರು ಒಪ್ಪದಿದ್ದದ್ದೂ ಒಳಿತೇ ಆಯಿತು. ಇಲ್ಲದಿದ್ದರೆ ತನ್ನ ಪೂಜೆಗೆಂದು ಗಣ ಪತಿಯು ಅವರನ್ನೂ ತನ್ನ ಜೊತೆಗೆ ಕೈಲಾಸಕ್ಕೆ ಒಯ್ಯುತ್ತಿದ್ದ. ಪಟೇ ಲರಿಗೂ ಈಜು ಬರುತ್ತಿದ್ದಿಲ್ಲ. ಆದರೂ ತಾವು ಲಂನೇ ವರ್ಷಕ್ಕೆ ಹಾಸಿ ಗೆಯ ಮೇಲೆ ಸಾಯುವೆವೆಂದು ಅವರ ಜಾತಕದಲ್ಲಿದ್ದದ್ದರಿಂದ ಅವರು ಹೊಳೆಗೆ ಇಳಿಯುವ ಧೈರ್ಯಮಾಡಿದರು.

ಅಂತೂ ದೋಣಿಯು ದಡವನ್ನು ಬಿಟ್ಟಿತು. ದಡವನ್ನು ಬಿಟ್ಟು ನಾಲ್ಕು ಮಾರು ಹೋದಕೂಡಲೇ ದೋಣಿಯು ನದಿಯ ಸೆಳವಿಗೆ ಸಿಕ್ಕಿ ಸೆಳವಿನ ಗುಂಟ ವೇಗದಿಂದ ನಡೆಯಿತು. ಚಂದ್ರನೇ ಹುಟ್ಟುಹಾಕು ತ್ತಿದ್ದ; ಆದರೆ ಸೆಳವಿನ ಮುಂದೆ ಅವನ ಆಟ ಸಾಗಲಿಲ್ಲ. ದೋಣಿಯು ನೀರಿನ ಹೊಡತಕ್ಕೆ ಸಿಕ್ಕಿ ಹೊಯ್ದಾಡಹತ್ತಿತು. ಭಾರಿ ಆಸಾಮಿಗಳಿಬ್ಬರು ಅದರಲ್ಲಿ ಕುಳಿತಿದ್ದರಿಂದ ದೋಣಿಯ ಒಂದು ಗೇಣು ಭಾಗವು ಮಾತ್ರ ನೀರಿನ ಮೇಲಿದ್ದಿತು. ಅಲೆಗಳು ದೋಣಿಗೆ ಬಡಿದಾಗ ಮೇಲಕ್ಕೆ ಚಿಮ್ಮುವ ಹನಿಗಳಿಂದ ಗೋಪಾಲರಾಯರಿಗೆ ಸಂಧ್ಯಾಸ್ನಾನವೇ ಆಗಿಹೋಯಿತು. ದೋಣಿಯು ಮುಳುಗುವುದು ಖಂಡಿತವೆಂದು ತಿಳಿದು ದಂಡೆಯ ಮೇಲಿನವರು ಬೊಬ್ಬೆ ಹೊಡೆಯುತ್ತಿದ್ದರು. ಸೂರ್ಯನು ಮುಳು ಗುತ್ತ ಕತ್ತಲೆ ಏರುತ್ತಿತ್ತು. ಜೋಯ್ಸರು ಜಾತಕ ಬರೆಯುವಾಗ ಎಲ್ಲೋ ತಪ್ಪಿರುವರೆಂದು ಗೋಪಾಲರಾಯರಿಗೆ ಅನುಮಾನವಾಯಿತು. ಚಂದ್ರನು ದೋಣಿಯನ್ನು ದಂಡೆಯ ಕಡೆಗೆ ಒಯ್ಯಲು ಯತ್ನಿಸುತ್ತಿದ್ದನು.

ಆದರೆ ಅಷ್ಟುಹೊತ್ತಿಗಾಗಲೇ ಅದು ಮಧ್ಯಹೊಳೆಗೆ ಬಂದುಬಿಟ್ಟಿತು. ಹೊರಟ ಜಾಗೆಯಿಂದ ಅರ್ಧಮೈಲು ದೂರ ಸರಿದಿತ್ತು. ಜನರಿಗೆ ದೋಣಿ ಕಾಣದಿದ್ದರೂ ದೋಣಿಯಲ್ಲಿದ್ದ ದೀಪದ ಸಹಾಯದಿಂದ ಅವರು ದಂಡೆ ಗುಂಟ ದೋಣಿಯನ್ನು ಹಿಂಬಾಲಿಸಿದರು. ಪಟೇಲರ ಕಣ್ಣಮುಂದೆ ಸಾವಿನ ಕರಾಳದೃಶ್ಯವು ನರ್ತಿಸಹತ್ತಿತು. ಜಾತಕವನ್ನು ನಂಬಿ ತಾವು ಕೆಟ್ಟೆವೆಂದು ಅವರು ಮರುಗಿದರು. ಕಂಬನಿದುಂಬಿದ ಕಣ್ಣುಗಳನ್ನು ತೊಡೆಯಮೇಲಿದ್ದ ಗಣಪತಿಯ ಕಡೆಗೆ ತಿರುಗಿಸಿದರು. ಗಣಪತಿಯಾದರೋ ಗಾಬರಿಯಿಲ್ಲದೆ ನಿಶ್ಚಿಂತೆಯಿಂದ ಕುಳಿತಿದ್ದ. ಗೋಪಾಲರಾಯರಿಗೆ ಎಲ್ಲೂ ಇಲ್ಲದ ಸಿಟ್ಟು ಬಂದುಬಿಟ್ಟಿತು. ದೇವರ ಮೇಲಿನ ಭಕ್ತಿ-ವಿಶ್ವಾಸ ಎಲ್ಲವೂ ಮಾಯವಾದವು. ಸಿಟ್ಟನಿಂದ ಗಣಪತಿಯ ಮುಂಡವನ್ನು ಹಿಡಿದೆತ್ತಿ ನದಿಗೆ ತೂರಿದರು. ಹೀಗೆ ತೂರುವಾಗ ಅವರು ಒಂದು ಕಡೆ ಬಾಗಿದಾಗ ದೋಣಿಯು ನೀರಿನಲ್ಲಿ ಮಗುಚಿಕೊಂಡಿತು. ಗಣಪತಿಯೊಡನೆ ಗೋಪಾಲರಾಯರೂ ಚಂದ್ರನೂ ದೋಣಿಯಲ್ಲಿ ಬಿದ್ದರು. ದೋಣಿಯಲ್ಲಿದ್ದ ದೀಪ ಮಾಯವಾದದ್ದನ್ನು ಕಂಡು ದಂಡೆಯ ಮೇಲಿನ ಜನರಲ್ಲಿ ಕೋಲಾಹಲವುಂಟಾಯಿತು. ಜನರೆಲ್ಲರೂ ಸೂಡಿಯನ್ನು ಹಚ್ಚಿಕೊಂಡು ದಂಡೆಯ ಮೇಲೆ ಓಡಾಡಿದರು.

ಇತ್ತ ಚಂದ್ರ ನೀರಿನಲ್ಲಿ ಬಿದ್ದವನು ಸುತ್ತಲೂ ನೋಡಿದನು. ಪಟೇಲರು ನದಿಯೊಳಗೆ ಹೋಗಿದ್ದರು. ಅವರು ಮುಳುಗಿದ ಜಾಗೆಯಿಂದ 'ಗುಳು ಗುಳು" ಸಪ್ಪಳವು ಹೊರಡುತ್ತಿತ್ತು. ಸ್ವಲ್ಪಹೊತ್ತಿನಲ್ಲಿಯೇ ಗೋಪಾಲರಾಯರು ನದಿಯ ಆಳವನ್ನು ಅಳೆದು ಮೇಲಕ್ಕೆದ್ದರು. ಕೂಡಲೇ ಚಂದ್ರನು ಅವರ ಕೈಯನ್ನು ಹಿಡಿದನು. ಸುಮಾರು ಅರ್ಧ ಕೊಡ ನೀರು ಕುಡಿದ ಅವರು ಕಂಗಾಲಾಗಿ "ಅಯ್ಯೋ ಚಂದ್ರಾ, ಸತ್ತೆ" ಎಂದು ಕೂಗಿ ಚಂದ್ರನ ಕುತ್ತಿಗೆಯನ್ನು ಅಪ್ಪಿಕೊಂಡುಬಿಟ್ಟರು. ಚಂದ್ರನ ಕಡೆಯಿಂದ ಆ ಹಿಡಿತವನ್ನು ತಪ್ಪಿಸಿಕೊಳ್ಳಲು ಆಗಲಿಲ್ಲ. ಪುನಃ ಇಬ್ಬರೂ ಮುಳುಗಿದರು. ಮುಳುಗುವವರ ಸಂಗತಿಯೇ ಹಾಗೆ; ಸೀನಿ. ತಮ್ಮನ್ನು ಬದುಕಿಸುವವರ ಕುತ್ತಿಗೆಗೆ ಜೋತುಬಿದ್ದು ಅವರನ್ನೂ ತಮ್ಮೊಡನೆಯೇ ಮುಳುಗಿಸಿಬಿಡುತ್ತಾರೆ. ಗೋಪಾಲರಾಯರೂ ಈ ತರದ

ಸ್ವಭಾವಕ್ಕೆ ಹೊರತಾಗಿರಲಿಲ್ಲ. ಆದರೆ ನೀರಿನಲ್ಲಿ ಮುಳುಗಿದೊಡನೆ ಅವರ ಕಟ್ಟು ಸಡಿಲಾಯಿತು. ಚಂದ್ರನು ಅವರ ಜುಟ್ಟನ್ನು ಹಿಡಿದುಕೊಂಡು ನೀರಿನಿಂದ ಮೇಲಕ್ಕೆದ್ದ. ಅಷ್ಟು ಹೊತ್ತಿಗೆ ಗೋಪಾಲರಾಯರಿಗೆ ಸ್ಮೃತಿ ತಪ್ಪಿಹೋಗಿತ್ತು. ಚಂದ್ರ ಅವರನ್ನು ಒಂದು ಕೈಯಲ್ಲಿ ಹಿಡಿದುಕೊಂಡು ಒಂದೇ ಕೈಯಿಂದ ಈಜುತ್ತ ಯುಕ್ತಿಯಿಂದ ಸೆಳವಿನ ಗುಂಟ ಹೋಗಿ ಊರಿನಿಂದ ಸುಮಾರು ಎರಡು ಮೈಲಿ ದೂರದಲ್ಲಿ ದಂಡೆಗೆ ಹತ್ತಿದನು. ಅಂತೂ ಗೋಪಾಲರಾಯರು ಬದುಕಿಕೊಂಡರು.

"ಆದರೆ ಸೀನೀ ಈ ಪ್ರಕಾರ ಲೀಲಾಜಾಲವಾಗಿ ಈಜಬಲ್ಲ ಚಂದ್ರನಿಗೂ ನೀರೇ ಗೋರಿಯಾಯಿತು. ಸೃಷ್ಟಿಯ ನಿಯಮವೇ ಅಂತಹದೆಂದು ನನ್ನ ನಂಬಿಕೆ. ಹಾವಾಡಿಗರು ಕೊನೆಗೆ ಹಾವಿನಿಂದಲೇ ಸಾಯುವರು, ಬೇಟೆಗಾರರಿಗೆ ಅಡವಿಯಲ್ಲಿಯೇ ಮರಣ, ಸರ್ಕಸಿನಲ್ಲಿ ಹುಲಿಯನ್ನು ಆಡಿಸುವವರು ಕೊನೆಗೂ ಹುಲಿಯ ಬಾಯಿಗೇ ತುತ್ತು. ಪಕ್ಷಿಗಳಂತೆ ವಿಮಾನದಲ್ಲಿ ಹಾರುವವರನ್ನು ನೋಡಿರುವೆಯಾ? ಅವರು ಕೊನೆಯ ಕಾಲದಲ್ಲಿ ವಿಮಾನದಿಂದ ಬಿದ್ದೇ ಸಾಯಬೇಕೇ ಹೊರತು ಅವರಿಗೆ ಅದಕ್ಕಿಂತ ಸುಖಕರವಾದ ಮರಣ ಒದಗೋದಿಲ್ಲ. ಅದರಂತೇ ನೀರಿನಲ್ಲಿ ಮೀನಿನಂತೆ ಈಜಬಲ್ಲ ಚಂದ್ರ ಕೊನೆಗೆ ನೀರಿನಲ್ಲಿಯೇ ಮರಣಹೊಂದಿದ..."

ಲಚ್ಚಜ್ಜ ಸ್ವಲ್ಪಹೊತ್ತು ಸುಮ್ಮನಿದ್ದ. ಅವನ ಕಣ್ಣುಗಳಲ್ಲಿ ನೀರು ತುಂಬಿತ್ತು. ಶೂನ್ಯ ದೃಷ್ಟಿಯಿಂದ ಅವನು ನದಿಯ ಕಡೆಗೆ ನೋಡುತ್ತಿದ್ದನು. ಸೀನಿಯೂ ತೆಪ್ಪಗಿದ್ದ. ಸ್ವಲ್ಪಹೊತ್ತಿನ ನಂತರ ಧೋತರದ ಚುಂಗಿನಿಂದ ಕಣ್ಣುಗಳನ್ನು ಒರಸಿಕೊಂಡು ಲಚ್ಚಜ್ಜ ಪುನಃ ಹೇಳಿದ.

"ಸೀನೀ ಒಮ್ಮೆ ಸೂರ್ಯಗ್ರಹಣದ ದಿವಸವು ಬಂದಿತು. ಬೆಳಗಿನಿಂದ ಉಪವಾಸವಿದ್ದ ನಾನು ಚಂದ್ರ ಇಬ್ಬರೂ ಗ್ರಹಣದ ಹೊತ್ತಿಗೆ ಸಮುದ್ರದ ದಂಡೆಗೆ ಜೊತೆಗಾರರೊಡನೆ ಹೋದೆವು. ಸೂರ್ಯಗ್ರಹಣ ಬಿಟ್ಟಕೂಡಲೇ ಸಮುದ್ರದಲ್ಲಿ ಸ್ನಾನಮಾಡಿ ಮನೆಗೆ ತಿರುಗಬೇಕೆಂದು ನಮ್ಮ ಇಚ್ಛೆ. ಸಮುದ್ರದ ದಂಡೆಯ ಮೇಲೆ ಊರವರೆಷ್ಟೋ ಜನ ಬಂದಿದ್ದರು. ಗ್ರಹಣ ಬಿಟ್ಟಕೂಡಲೇ ನಾವು ನಾಲ್ಕೈದಾರು ಜನ ಸಮುದ್ರಕ್ಕೆ

ಇಳಿದೆವು. ಸಮುದ್ರದಲ್ಲಿ ಮೊಟ್ಟಮೊದಲು ತೆರೆಗಳನ್ನೆದಿರಿಸುವುದು ಪ್ರಯಾಸವಾಗುವದು. ಆದರೆ ಅರ್ಧ ಫರ್ಲಾಂಗು ಈಜಿಹೋದರೆ ಮುಂದೆ ಹೊಳೆಯಲ್ಲಿ ಈಜುವಷ್ಟೇ ಸಸಾರ. ನಾವೆಲ್ಲರೂ ದಂಡೆಯಿಂದ ಸುಮಾರು ಒಂದು ಫರ್ಲಾಂಗಿನಷ್ಟು ದೂರ ಈಜಿಹೋದೆವು. ಬೆಳಗಿನಿಂದ ಉಪವಾಸವಿದ್ದ ನಮಗೆ ಅಷ್ಟಕ್ಕೇ ಸಾಕಾಯಿತು. ನಾವೆಲ್ಲರೂ ಹಿಂತಿರುಗಿದೆವು. ಅದರೆ ಚಂದ್ರ ಮಾತ್ರ ತಿರುಗಲಿಲ್ಲ. 'ಬೆಳಗಿನಿಂದ ಉಪವಾಸವಿದ್ದು ಅಶಕ್ತತೆಯಾಗದೆ, ಕೈಕಾಲು ಸೋತರೆ ಪ್ರಮಾದವಾದೀತು, ಬೇಗ ಬಾ' ಎಂದು ನಾನು ಕೂಗುಹಾಕಿದೆ. ಆದರೆ ಅವನು 'ಹೂಂ' ಎಂದನೇ ಹೊರತು ಹಿಂದಿರುಗಲಿಲ್ಲ. ನಾವೆಲ್ಲರೂ ದಂಡೆಯನ್ನು ಮುಟ್ಟುವದರೊಳಗೆ ಯಾರೋ ಚೀರಿದ ಸಪ್ಪಳವು ಕೇಳಿಸಿತು. ನನ್ನ ಎದೆಯಲ್ಲಿ ತಣ್ಣೀರು ಹೊಯ್ದಂತಾಯಿತು. ತಿರುಗಿ ನೋಡಿದೆ, ಚಂದ್ರನು ದಂಡೆಯಿಂದ ಮುಕ್ಕಾಲು ಫರ್ಲಾಂಗು ದೂರದಲ್ಲಿ ಇದ್ದನು. ಅವನ ಕೈಕಾಲುಗಳ ವೇಗವು ಕಡಿಮೆಯಾಗಿತ್ತು, ಆದಷ್ಟು ನೀರಿನ ಮೇಲೆ ತೇಲಲು ಪ್ರಯತ್ನ ಮಾಡುತ್ತಿದ್ದಂತೆ ಕಂಡುಬಂತು. 'ಅವನಿಗೇನಾಗಿದೆಯೊ? ವರುಣನ ಮರಿ! ಹಗಲು ವೇಷ ಮಾಡುತ್ತಿದ್ದಾನೆ' ಎಂದು ನನ್ನ ಜೊತೆಯವರು ನಕ್ಕುಬಿಟ್ಟರು. ಅಷ್ಟರಲ್ಲಿ ಚಂದ್ರ ದೊಡ್ಡ ಕೂಗು ಹಾಕಿ ಮುಳುಗಿದ. ನನ್ನ ಕೈಕಾಲು ನಡುಗಹತ್ತಿದವು ಜೊತೆಯವರಿಬ್ಬರು ಸಮುದ್ರಕ್ಕೆ ಹಾರಿ ವೇಗವಾಗಿ ಈಸಿ ಚಂದ್ರನ ಕಡೆ ಹೋದರು...ಅವರಿಬ್ಬರೂ ಯಾವುದೋ ಒಂದು ಭಾರ ಪದಾರ್ಥವನ್ನು ಹಿಡಿದುಕೊಂಡು ಪ್ರಯಾಸದಿಂದ ಈಜುತ್ತ ಬರುವದು ಮಸಕಾಗಿ ಕಣ್ಣಿಗೆ ಕಾಣಿಸಿತು. ತಕ್ಷಣ ಕಣ್ಣಿಗೆ ಕತ್ತಲು ಕಟ್ಟಿದಂತಾಯಿತು. ನಿಂತಲ್ಲಿಯೇ ಬಿದ್ದುಬಿಟ್ಟೆ...

"ಮರುದಿನ ನನಗೆ ಎಚ್ಚರವಾಯಿತು. ಅಷ್ಟರೊಳಗೆ ಎಲ್ಲವೂ ಮುಗಿದುಹೋಗಿತ್ತು. ಸಮುದ್ರದಲ್ಲಿಯೇ ಚಂದ್ರನ ಜೀವ ಹಾರಿ ಹೋಗಿತ್ತಂತೆ. ಯಮನು ವರುಣನ ಸಹಾಯದಿಂದ ಚಂದ್ರನ ಗ್ರಹಣ ಮಾಡಿದನು. ಸೂರ್ಯಗ್ರಹಣದ ದಿನವೇ ಚಂದ್ರಗ್ರಹಣವೂ ಆಯಿತು. ಈ ಹೊತ್ತು ಸೂರ್ಯಗ್ರಹಣದ ದಿವಸ, ಚಂದ್ರಗ್ರಹಣದ ದಿವಸವೂ ನಿಜವೆಂದು ಆದಕ್ಕೆಂತಲೇ ನುಡಿದೆ..."

ಲಚ್ಚಜ್ಜನಿಂದ ಮುಂದೆ ಮಾತಾಡುವದಾಗಲಿಲ್ಲ. ಅವನು ಸಣ್ಣ ಮಕ್ಕಳಂತೆ ಧ್ವನಿತೆಗೆದು ಅಳುತ್ತಾ ಮುಖವನ್ನು ಅಂಗೈಗಳಿಂದ ಮುಚ್ಚಿಕೊಂಡನು. ಸೀನಿಯು ಮೈಮರೆತು ಕುಳಿತವನು ತಟ್ಟನೆ ಎಚ್ಚತ್ತನು. ಅವನ ಕಪೋಲಗಳ ಮೇಲೂ ನೀರಿನ ಹನಿಗಳು ಇಳಿಯುತ್ತಿದ್ದವು. ಸುತ್ತಲೆಲ್ಲವೂ ಕಪ್ಪಾಗಿತ್ತು. ಸಂಜೆಯಾಯಿತೆಂಬ ಅಚ್ಚರಿಯಿಂದ ಸೀನಿ ಆಕಾಶದಕಡೆ ನೋಡಿದ. ಅದೇ ಆಗ ಪೂರ್ಣ ಸೂರ್ಯಗ್ರಹಣ ಹಿಡಿದಿದ್ದರಿಂದ ಕಪ್ಪಗಾದ ಸೂರ್ಯನು ಗಾಳೀಮರದ ಎಲೆಗಳೊಳಗಿಂದ ಅವನ ದೃಷ್ಟಿಗೆ ಬಿದ್ದ. ಆಗ ಸೂರ್ಯ ಚಂದ್ರನಂತೆಯೇ ಅವನಿಗೆ ಕಂಡನು.

ಕೂಡಲೇ ಆಹೊತ್ತು ಸೂರ್ಯಗ್ರಹಣದ ದಿವಸವಲ್ಲವೆಂತಲೂ— ಚಂದ್ರಗ್ರಹಣದ ದಿವಸವೆಂತಲೂ ಅವನಿಗೆ ಅನಿಸಹತ್ತಿತು.



ನೀವು ಓದಲೇ ಬೇಕು

## ನಮ್ಮಲ್ಲಿ ಸಿಕ್ಕುವ ಕೆಲವು ಉತ್ತಮ ಪುಸ್ತಕಗಳು

| | | | | | | | |
|---|---|---|---|---|---|---|---|
| ಡಾ. ಕೋಟ್ನಿಸ್ | ೧ | ೪ | ೦ | ಸತ್ಯ ಶೋಧನೆ | ೬ | ೦ | ೦ |
| ಆಧುನಿಕ ಚೀನಾ | ೧ | ೦ | ೦ | ಸ್ತ್ರೀ ಹೃದಯ | ೦ | ೬ | ೦ |
| ರನ್ನಗನ್ನಡಿ | ೧ | ೦ | ೦ | ಹಂಸವಿಹಾರಿ | ೦ | ೬ | ೦ |
| ನೇತಾಜಿ | ೧ | ೮ | ೦ | ನವಮಿ | ೦ | ೮ | ೦ |
| ಸುಭಾಷರ ಸೀಮಾಲಂಘನ | ೧ | ೮ | ೦ | ಅಂತಿಮ ವಿಜಯ | ೦ | ೮ | ೦ |
| ಚಲೊ ದಿಲ್ಲಿ | ೧ | ೦ | ೦ | ಶ್ರೀಕಾಂತ ಭಾಗ ೧ ರಿಂದ ೬ರ ವರೆಗೆ ಪ್ರತಿ ಭಾಗಕ್ಕೆ | ೧ | ೮ | ೦ |
| ರಸಋಷಿ | ೧ | ೮ | ೦ | ೨೭ ಗಂಟೆಗಳಲ್ಲಿ | ೧ | ೦ | ೦ |
| ಆಜಾದ ಹಿಂದ | ೧ | ೦ | ೦ | ಅಲೆಗಳು | ೧ | ೦ | ೦ |
| ಬಾಪು | ೧ | ೪ | ೦ | ಒಳಸಂಚು | ೦ | ೧೨ | ೦ |
| ಗಾಂಧಿವಾದ | ೧ | ೮ | ೦ | ದಳಪತಿ ಜವಾಹರ | ೦ | ೮ | ೦ |
| ಗಾಂಧಿಯೋಜನೆ | ೧ | ೮ | ೦ | ಕೆರವನ್ | ೧ | ೦ | ೦ |
| ಭಗತ್‌ಸಿಂಗ್ | ೧ | ೦ | ೦ | ಸ್ವತಂತ್ರದೆಡೆಗೆ | ೨ | ೦ | ೦ |

ಇವುಗಳಲ್ಲದೆ ಇನ್ನು ಪುಸ್ತಕಗಳು ನಮ್ಮಲ್ಲಿ ಸಿಕ್ಕುತ್ತವೆ. ಬೇಕಾದುದಕ್ಕೆ ಬರೆಯಿರಿ. ಇಲ್ಲದ ಪುಸ್ತಕಗಳನ್ನು ತರಿಸಿಕೊಡಲಾಗುವುದು. ಪ್ರತಿ ಪುಸ್ತಕಕ್ಕೆ ಟ. ಕ. ಪ್ರತ್ಯೇಕ ಬೀಳುವುದು.

ಬರೆಯಿರಿ.

**THE KANARA BOOKS & NEWS AGENCY**

LALBAUG : : : BOMBAY No. 12